ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೩೦-೬-೪೯

★

ಬೆಲೆ ಎರಡಾಣೆ



ಕುತುಬ ಮಿನಾರ

ಸಂಪುಟ ೨೦ | **ಕರ್ಮವೀರ** | ಸೋಮವಾರ
ಸಂಚಿಕೆ ೮ | | ಜ್ಯೇಷ್ಠ ಶು. ೩
ತಾರೀಖು ೩೦—೫—೧೯೪೯

ಮುಖಪತ್ರದಲ್ಲಿ

೨೩೮ ಅಡಿ ಎತ್ತರವಾಗಿರುವ ಕುತುಬಮಿನಾರವನ್ನು ಜಗತ್ತಿನಲ್ಲೆಲ್ಲ ಅತ್ಯುಚ್ಚವಾದ ಅಖಂಡ ಗೋಪುರವೆಂದು ಪರಿಗಣಿಸಲಾಗಿದೆ. ಹದಿಮೂರನೆಯ ಶತಮಾನದಲ್ಲಿ ಕುತುಬುದ್ದೀನ ಐಬಕನು ತನ್ನ ವಿಜಯದ ಸ್ಮಾರಕ ಸ್ತಂಭವೆಂದು ಇದನ್ನು ಕಟ್ಟಿಸತೊಡಗಿದ್ದರೂ ಇದನ್ನು ಇ. ೧೨೩೦ ರಲ್ಲಿ ಅಲ್ತಮಶನು ಪೂರೈಸಿದನೆಂದು ಪ್ರಸಿದ್ಧಿ. ಆದರೆ ಕೆಲ ವಿದ್ವಾಂಸರು ಇದನ್ನು ಪೃಥ್ವೀರಾಜನೂ ಅವನ ಸೋದರ ಮಾವನಾದ ವಿಗ್ರಹರಾಜನೂ ಕಟ್ಟಿಸತೊಡಗಿದರೆಂದು ವಾದಿಸಿದ್ದಾರೆ. ದಿಲ್ಲಿಯಿಂದ ಹತ್ತು ಮೈಲು ದೂರದಲ್ಲಿ, ತಾನೇ ಧ್ವಂಸಗೊಳಿಸಿದ ಒಂದು ಹಿಂದು ದೇವಾಲಯದ ಸ್ಥಾನದಲ್ಲಿ ಕುತುಬುದ್ದೀನನು ಕಟ್ಟಿಸಿದ ಕುವ್ವತ್—ಉಲ್ ಇಸ್ಲಾಮು (ಇಸ್ಲಾಮದ ಶಕ್ತಿ) ಮಸೀದಿಯೆಂಬ ಸುಂದರ ಮಸೀದಿಯ ಆಗ್ನೇಯ ಮೂಲೆಯಲ್ಲಿ ಕೆಂಪು ಕಲ್ಲಿನಿಂದ ಕಟ್ಟಿದ ಈ ಮಹಾಸ್ತಂಭವು ದೂರದಿಂದಲೇ ನೋಟಕರನ್ನು ಸೆಳೆಯುತ್ತದೆ.

ಈ ಮಹಾಸ್ತಂಭದ ಮೇಲೆ ಪ್ರಕೃತಿ ಪ್ರಕೋಪದ ಆಘಾತಗಳೂ ಅನೇಕ ಬಿದ್ದಿವೆ. ಫಿರೋಜ ಶಹಾ ತಗಲಖನ ಆಳಿಕೆಯಲ್ಲಿ ಭೂಕಂಪದಿಂದ ಇದರ ತುತ್ತ ತುದಿಯ ಎರಡು ಅಟ್ಟಳಿಗೆಗಳು ಹಾಳಾದವು. ಅವುಗಳನ್ನು ೧೫೦೫ ರಲ್ಲಿ ಸಿಕಂದರ ಲೋದಿಯು ಸರಿಪಡಿಸಿದನು. ಪುನಃ ೧೮೦೩ ರಲ್ಲಿ ಅದಕ್ಕೆ ಧಕ್ಕೆಯಾದಾಗ ಮೇಜರ ಸ್ಮಿತ್ತನೆಂಬ ಬ್ರಿಟಿಶ ಎಂಜಿನಿಯರನು ಅದನ್ನು ಸರಿಪಡಿಸಿದನು. ದೂರದಿಂದ ಪರೀಕ್ಷಿಸಿ ನೋಡಿದರೆ ಈ ವಿಜಯಸ್ತಂಭ ಸಮಕೋನದಲ್ಲಿ ನೆಟ್ಟನೆ ನಿಂತಿರದೆ ತುಸು ಒಂದು ಬದಿಗೆ ಬಾಗಿದಂತೆ ಕಾಣುವದು. ಹಲವು ಭೂಕಂಪಗಳು ನೆಲವನ್ನು ಅದುರಿಸಿದ್ದೇ ಇದಕ್ಕೆ ಕಾರಣ.

ಚಿತ್ರ: ಶ್ರೀ ಅನಂತ (ಬಾಬು) ದಿವಾಕರ

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ
ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ತಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: “ ಕರ್ಮವೀರ ” ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಬಯಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪುರಸ್ಕಾರದ, ಅಂದರೆ “ ಕರ್ಮವೀರ ” ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
“ ಕರ್ಮವೀರ ” ಹುಬ್ಬಳ್ಳಿ.

ಮಹತ್ವಪೂರ್ಣ ಅಧಿವೇಶನ

ಕಳೆದವಾರ ಡೆಹರಾಡೂನಿನಲ್ಲಿ ರಾಷ್ಟ್ರಾಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಅಧಿವೇಶನವು ಎಲ್ಲ ಬಗೆಯಿಂದಲೂ ಮಹತ್ವಪೂರ್ಣವಾಗಿದ್ದಿತು. ಕಾಂಗ್ರೆಸ್ಸು ಹಿಂದುಸ್ತಾನದ ಆಡಳಿತೆಯನ್ನು ವಹಿಸಿಕೊಂಡಂದಿನಿಂದ ಹಲವಾರು ಮಹತ್ವದ ಸಮಸ್ಯೆಗಳು ರಾಷ್ಟ್ರವನ್ನೆದುರಿಸಿವೆ. ಅವುಗಳನ್ನೆಲ್ಲ ರಾಷ್ಟ್ರಧುರೀಣರು ಯಶಸ್ವಿಯಾಗಿ ಬಿಡಿಸುತ್ತ ಬಂದಿದ್ದಾರೆ. ರಾಷ್ಟ್ರವು ಸ್ವಾತಂತ್ರ್ಯವನ್ನು ಪಡೆದ ನಂತರ,ಈ ವರೆಗೆ ನಮ್ಮನ್ನಾಳುತಿದ್ದ ಬ್ರಿಟಿಶ ಸರಕಾರದೊಡನೆ ಯಾವ ಬಗೆಯ ಸಂಬಂಧವನ್ನಿಟ್ಟುಕೊಳ್ಳಬೇಕೆಂಬುದು ಮಹತ್ವದ, ಪ್ರಶ್ನೆಯಾಗಿತ್ತು. ಹಿಂದುಸ್ತಾನವು ಕಾಮನ್‌ವೆಲ್ತದಲ್ಲಿ ಉಳಿಯಬೇಕೊ, ಉಳಿಯುವುದಾದರೆ ಆ ಕಾಮನ್‌ವೆಲ್ತದ ಸ್ವರೂಪವೆಂತಿರಬೇಕು ಮುಂತಾದ್ದನ್ನು ನಿರ್ಧರಿಸುವುದು ಅವಶ್ಯವಾಗಿದ್ದಿತು. ಕಾಮನ್‌ವೆಲ್ತ ರಾಷ್ಟ್ರಗಳ ಪರಿಷತ್ತು ಈ ತಿಂಗಳು ಪ್ರಾರಂಭದಲ್ಲಿ ಲಂಡನಿನಲ್ಲಿ ಸೇರಿದಾಗ ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಹಿಂದುಸ್ತಾನವು ಕಾಮನ್‌ವೆಲ್ತದಲ್ಲಿ ಉಳಿಯುವುದು ಎಂದು ಆಶ್ವಾಸನ ಕೊಟ್ಟು ಬಂದಿದ್ದರು. ಕಾಮನ್‌ವೆಲ್ತದ ಸ್ವರೂಪವೇ ಈಗ ಬದಲಾಗಿದ್ದು ಹಿಂದುಸ್ತಾನವು ಕಾಮನ್‌ವೆಲ್ತದಲ್ಲಿ ಉಳಿಯುವುದರಿಂದ ಅದರ ಸ್ವಾತಂತ್ರ್ಯಕ್ಕೆ, ಸಾರ್ವಭೌಮತ್ವಕ್ಕೆ ಯಾವದೇ ಬಗೆಯ ಕುಂದು ಬರುವುದಿಲ್ಲೆಂದು ಸ್ಪಷ್ಟಪಡಿಸಲಾಗಿದ್ದಿತು. ಹೀಗೆ ನಮ್ಮ ಸ್ವತಂತ್ರ ಅಸ್ತಿತ್ವಕ್ಕೆ ಭಂಗಬಾರದೆ ಕಾಮನ್‌ವೆಲ್ತದಲ್ಲಿ ಉಳಿಯುವುದರಿಂದ ಲಾಭವಾಗುತಿದ್ದರೆ ಅದರಲ್ಲಿ ಉಳಿಯಬಾರದೇಕೆ ಎಂದು ಬಗೆದು ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಿಗೆ ಕೊಟ್ಟು ಬಂದಿದ್ದರು. ಆದರೆ ಅವರ ಈ ಒಪ್ಪಿಗೆಗೆ ಕಾಂಗ್ರೆಸ ಸಮಿತಿಯ ಮತ್ತು ಘಟನಾಸಮಿತಿಯ ಮನ್ನಣೆಯು ಅವಶ್ಯವಿದ್ದುದರಿಂದ ಇವೆರಡೂ ಸಭೆಗಳಲ್ಲಿ ಮುಖ್ಯ ಮಂತ್ರಿಗಳು ಮಾಡಿಕೊಂಡು ಬಂದ ಒಡಂಬಡಿಕೆಗೆ ಮನ್ನಣೆ ತೆಗೆದುಕೊಳ್ಳಲಾಯಿತು. ಅ. ಭಾ. ಕಾಂಗ್ರೆಸ ಸಮಿತಿಯಲ್ಲಿ ಡಾ. ಬಾಬೂ ರಾಜೇಂದ್ರ ಪ್ರಸಾದರು ಮಂಡಿಸಿದ ಈ ಗೊತ್ತುವಳಿಗೆ ಹಲವು ತಿದ್ದುಪಡಿಗಳು ಬಂದರೂ ಅವುಗಳಲ್ಲಿ ಹಲವು ಹಿಂತೆಗೆದುಕೊಳ್ಳಲ್ಪಟ್ಟು ಬೇರೆ ಹಲವು ನಿರಾಕೃತವಾದವು. ಹೀಗಾಗಿ ಮೂಲ ಗೊತ್ತುವಳಿಯು ಬಹುಮತದಿಂದ ಸ್ವೀಕೃತವಾಯಿತು. ಕಾಮನ್‌ವೆಲ್ತ ರಾಷ್ಟ್ರಗಳೊಡನೆ ಹಿಂದುಸ್ತಾನದ ಸಂಬಂಧವೆಂತಿರಬೇಕೆಂಬ ಈ ಮಹತ್ವದ ಪ್ರಶ್ನೆಯನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಮಾಧಾನಕರವಾಗಿ ಬಿಡಿಸಿ ರಾಷ್ಟ್ರಪ್ರಗತಿಗೆ ನಿಚ್ಚಳವಾದ ಮಾರ್ಗದರ್ಶನ ಮಾಡಿಕೊಟ್ಟಿತು. ಹಿಂದುಸ್ತಾನವು ಕಾಮನ್‌ವೆಲ್ತದಲ್ಲಿ ಉಳಿಯುವದರಿಂದಾಗುವ ಲಾಭಗಳನ್ನು ಈ ಮೊದಲು ಉಲ್ಲೇಖಿಸಿದ್ದುಂಟು.

ಅಖಿಲ ಭಾರತ ಕಾಂಗ್ರೆಸ ಸಮಿತಿಯು ಇನ್ನೊಂದು ಮಹತ್ವದ ಪ್ರಶ್ನೆಯ ವಿಚಾರ ಮಾಡಿ ಅದನ್ನೂ ಸಮಾಧಾನಕರವಾಗಿ ಬಿಡಿಸಲು ಪ್ರಯತ್ನಿಸಿತು. ಕಾಂಗ್ರೆಸ ಮಂತ್ರಿಮಂಡಲ ಮತ್ತು ಕಾಂಗ್ರೆಸ ಕಾರ್ಯಕರ್ತರಲ್ಲಿ ಅನೇಕ ದಿನಗಳಿಂದ ಒಂದು ಬಗೆಯ ತಿಕ್ಕಾಟ ನಡೆದಿದೆ. ಆಡಳಿತೆಯಲ್ಲಿ ಕಾಂಗ್ರೆಸ ಕಾರ್ಯಕರ್ತರು ಅನವಶ್ಯಕವಾಗಿ ಹಸ್ತಕ್ಷೇಪಮಾಡಿ ಅನೇಕ ಪ್ರಸಂಗಗಳಲ್ಲಿ ಆಡಳಿತೆಯ ದೈನಂದಿನ ವ್ಯವಹಾರದಲ್ಲಿ ಕೂಡ ವ್ಯತ್ಯಯವನ್ನು ಉಂಟುಮಾಡುತ್ತಿರುವರೆಂದು ಮಂತ್ರಿ ಮಂಡಲಗಳು ಆರೋಪಿಸಿದರೆ ಕಾಂಗ್ರೆಸ ಮಂತ್ರಿಮಂಡಲಗಳು ತಮ್ಮ ಧ್ಯೇಯ ಧೋರಣೆಗಳನ್ನು ನೆನೆಯದೆ, ಗಾಂಧೀಜಿಯ ತತ್ವಗಳಿಗೆ ಚ್ಯುತಿ ಬರುವಂತೆ ಮತ್ತು ಕಾಂಗ್ರೆಸ ಕಾರ್ಯಕರ್ತರನ್ನು ಲಕ್ಷಿಸದೆ ಆಡಳಿತೆಯನ್ನು ಸಾಗಿಸುತ್ತಿರುವರು, ಇದರಿಂದ ಕಾಂಗ್ರೆಸ್ಸಿಗೇ ಕಲಂಕ ಬರಹತ್ತಿದೆ ಎಂದು ಮುಂತಾಗಿ ಕಾಂಗ್ರೆಸ ಕಾರ್ಯಕರ್ತರು ವಾದಿಸುವದುಂಟು. ಹೀಗೆ ಒಬ್ಬರನ್ನೊಬ್ಬರನ್ನು ಆರೋಪಿಸುತ್ತಿರುವದರಿಂದ ಪರಸ್ಪರರಲ್ಲಿ ಇರಬೇಕಾದ ಐಕ್ಯಸ್ನೇಹ ಮೊದಲಾದವುಗಳಿಗೆ ಬಾಧೆ ಬರಹತ್ತಿದೆ. ಇದರಿಂದ ರಾಷ್ಟ್ರದಲ್ಲಿ ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಭಂಗ ಬಂದು ಮೊದಲಿನ ವರ್ಚಸ್ಸು ಉಳಿಯದಂತಾಗಿದೆ. ಆದುದರಿಂದ ರಾಷ್ಟ್ರದ ಏಕಮೇವ ಪ್ರಾತಿನಿಧಿಕ ಸಂಸ್ಥೆಯಾದ ಅಖಿಲ ಭಾರತ ಕಾಂಗ್ರೆಸ ಸಮಿತಿಯು ಈ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಅದರ ಇತ್ಯರ್ಥ ಮಾಡಬೇಕಾದುದು ಅವಶ್ಯಕವಾಗಿದ್ದಿತು. ಅಂತೆಯೇ ಡೆಹರಾಡೂನಿನಲ್ಲಿ ಅ. ಭಾ. ಕಾಂ. ಸಮಿತಿಯ ಗುಪ್ತ ಸಭೆ ಸೇರಿ ಚರ್ಚೆ ಮಾಡಿ ಈ ಪ್ರಶ್ನೆಯ ನಿಷ್ಕರ್ಷೆ ಮಾಡಲಾಯಿತು. ಇದರಿಂದ ಪರಸ್ಪರರಲ್ಲಿಯ ಭಿನ್ನಾಭಿಪ್ರಾಯಗಳು ಮಾಯವಾಗಿ ರಾಷ್ಟ್ರಪ್ರಗತಿಯ ಕಾರ್ಯವು ಭರದಿಂದ ಸಾಗಬಹುದೆಂದು ಆರಿಸಲಾಗಿದೆ.

ಕಾಂಗ್ರೆಸ ಕಾರ್ಯಕರ್ತರು ಮತ್ತು ಕಾಂಗ್ರೆಸ ಮಂತ್ರಿಮಂಡಲಗಳಲ್ಲಿ ಭಿನ್ನಾಭಿಪ್ರಾಯವಾಗಿ ಕಾಂಗ್ರೆಸ್ಸಿನ ಧವಲ ಕೀರ್ತಿಗೆ ಕಲಂಕ ಬರುವಂತಹ ಪರಿಸ್ಥಿತಿ ಬರುವದಕ್ಕೆ ಕಾರಣವೇನೆಂಬುದನ್ನು ಹುಡುಕುವದು ಅಪ್ರಸ್ತುತವಾಗಲಾರದು. ಮೊದಲನೆಯ ಮತ್ತು ಮುಖ್ಯ ದೋಷವೆಂದರೆ ಭಾರತೀಯರಲ್ಲಿ, ಕಾಂಗ್ರೆಸ್ಸಿಗರಲ್ಲಿ ಕೂಡ ರಾಷ್ಟ್ರೀಯತ್ವದ ನಿಜವಾದ ಭಾವನೆ ಪೂರ್ಣವಾಗಿ ಬೇರೂರಿಲ್ಲ. ಬಹಳ ವರ್ಷಗಳಿಂದ ಭಾರತೀಯರು ದಾಸ್ಯದಲ್ಲಿ ಕೊಳೆಯುತ್ತಿದ್ದುದೇ ರಾಷ್ಟ್ರೀಯತ್ವದ ಭಾವನೆಯ ಅಭಾವಕ್ಕೆ ಕಾರಣವೆಂದು ಹೇಳಬಹುದು. ಈ ರಾಷ್ಟ್ರೀಯತ್ವದ ಭಾವನೆ ಇಲ್ಲದಿರುವದರಿಂದಲೆ ಅಧಿಕಾರಲಾಲಸೆ, ಜಾತ್ಯಂಧತೆ, ಸ್ವಾರ್ಥ ಮೊದಲಾದ ದುರ್ಗುಣಗಳು ಕಾಂಗ್ರೆಸ ಕಾರ್ಯಕರ್ತರಲ್ಲಿ ಮತ್ತು ಮಂತ್ರಿಗಳಲ್ಲಿ ಕೂಡ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಉಂಟಾಗಿವೆ. ಅಲ್ಲದೆ ಸದ್ಯದಲ್ಲಿ ರಚಿತವಾದ ಮಂತ್ರಿಮಂಡಲಗಳು ಮತ್ತು ಶಾಸನಸಭೆಗಳು ಯಾವುದೊಂದು ನಿಶ್ಚಿತ ಧ್ಯೇಯವನ್ನಿಟ್ಟುಕೊಂಡು ಆದವುಗಳಲ್ಲ. ಸ್ವಾತಂತ್ರ್ಯ ಸಿಕ್ಕಕೂಡಲೆ ಬಹುಮತ ಪಕ್ಷವಾಗಿದ್ದ ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿ, ಸಮರ್ಥತೆಯ ಕಡೆಗೆ ಹೆಚ್ಚು ಗಮನ ಕೊಡದೆ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದವರಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಅಂಥವರನ್ನು ಆರಿಸಿಕೊಂಡಿತು. ಆದರಿಂದ ಆಡಳಿತೆಯಲ್ಲಿ ಕೆಲ ಮಟ್ಟಿಗೆ ಶೈಥಿಲ್ಯ ಬರುವದು ಸ್ವಾಭಾವಿಕ. ಆದರೆ ಅದೇ ಕಾಲಕ್ಕೆ ಕಾಂಗ್ರೆಸ ಕಾರ್ಯಕರ್ತರು ತಮ್ಮ ಹೊಣೆಯನ್ನು,ಕರ್ತವ್ಯವನ್ನು ತಿಳಿದುಕೊಳ್ಳದೆ ಪ್ರತಿಯೊಂದರಲ್ಲಿಯೂ ಕೈಹಾಕುತ್ತಿರುವದರಿಂದ ಪರಿಸ್ಥಿತಿ ಹದಗೆಡುತ್ತಿರುವದು. ಅಂತೆಯೆ ಕೇಂದ್ರದಲ್ಲಿ ಮತ್ತು ಪ್ರಾಂತೀಯ ಸರಕಾರಗಳಲ್ಲಿ ಸಮರ್ಥ ಮುತ್ಸದ್ದಿಯರಿದ್ದರೂ ಅವರ ಮನಸ್ಸಿನಲ್ಲಿದ್ದಂತೆ ಆಡಳಿತೆ ನಡೆಸ ದುಕಾಣಿದೆ. ಅಂತೆಯೇ ಅಖಿಲ ಭಾರತ ಕಾಂಗ್ರೆಸ ಸಮಿತಿಯು ಈ ಬಗ್ಗೆ ವಿಚಾರ ಮಾಡಿ ಪರಸ್ಪರರಲ್ಲಿ ಸೌಹಾರ್ದವನ್ನು ಬೆಳೆಸಲು ಅವಶ್ಯಕ ಸೂಚನೆಗಳನ್ನು ಪ್ರಯತ್ನಿಸಿದೆ. ಈ ಗುಪ್ತ ಸಭೆಯಲ್ಲಿ ನಡೆದ ಚರ್ಚೆಯನ್ನೆಲ್ಲ ಬಹಿರಂಗ ಪಡಿಸಲಿಲ್ಲವಾದರೂ ಅದನ್ನೆಲ್ಲ ಮಂತ್ರಿಗಳು ಮತ್ತು ಕಾಂಗ್ರೆಸ ಕಾರ್ಯಕರ್ತರು ಸದ್ಯದಲ್ಲಿ ಪರಿಶೀಲನೆಗಾಗಿ ಕಳಿಸಲಾಗುವದೆಂದೂ ಅವೆಲ್ಲವುಗಳ ಮೇಲೆ ಕ್ರಮ ಕೈಕೊಳ್ಳಬೇಕೆಂದೂ ತಮ್ಮ ನಿರ್ಧಾರ ಮಾಡಲಾಗುವದೆಂದೂ ರಾಷ್ಟ್ರಾಧ್ಯಕ್ಷರು ಈ ಗುಪ್ತ ಅಧಿವೇಶನದ ಕೊನೆಯಲ್ಲಿ ಹೇಳಿದರು. ಇದರ ಪರಿಣಾಮವಾಗಿ ಈಗಿನ ಭಿನ್ನಾಭಿಪ್ರಾಯಗಳು ದೂರವಾಗಿ ಪರಸ್ಪರರ ಸಹಕಾರ ಸೌಹಾರ್ದದಿಂದ ಆಡಳಿತ ಸಾಗಿದ್ದಾದರೆ ಇಂದು ಆಡಳಿತದಲ್ಲಿ ಕಾಣುತ್ತಿರುವ ಶೈಥಿಲ್ಯ ಬಹುಮಟ್ಟಿಗೆ ಕಡಿಮೆಯಾಗಬಹುದು. ಇದರಲ್ಲಿ ಜನತೆಯೂ ತನ್ನ ಹೊಣೆಯನ್ನರಿತುಕೊಂಡು ಕಾರ್ಯ ಮಾಡಿದ್ದಾದರೆ ಉದ್ದೇಶವು ಹೆಚ್ಚು ಬೇಗ ಸಫಲವಾಗಬಲ್ಲದೆಂದು ಪ್ರತ್ಯೇಕ ಹೇಳಬೇಕಿಲ್ಲ.

ಶಾಂಘಾಯದ ಪತನ

ಕಳೆದ ವಾರ ಸಂಭವಿಸಿದ ಇನ್ನೊಂದು ಮಹತ್ವದ ಸಂಗತಿಯೆಂದರೆ ಚೀನದಲ್ಲಿ ಕಮ್ಯೂನಿಸ್ಟರು ಶಾಂಘಾಯವನ್ನಾಕ್ರಮಿಸಿ ಚೀನೀ ಸರಕಾರದ ಸೈನಿಕರನ್ನೋಡಿಸಿದ್ದು. ಇದರಿಂದ ಚೀನೀ ಸರಕಾರಕ್ಕೆ ಬಲವಾದ ಪೆಟ್ಟು ಬಿದ್ದಿದೆಯಲ್ಲದೆ ಏಶಿಯದ ಅಷ್ಟೇ ಏಕೆ ಇಡೀ ಜಗತ್ತಿನ ರಾಜಕಾರಣದ ಮೇಲೆ ಪರಿಣಾಮವುಂಟಾಗದಿರದು. ಶಾಂಘಾಯ ನಗರವು ಅರುವತ್ತು ಲಕ್ಷ ಜನ ವಸತಿಯ ದೊಡ್ಡ ವ್ಯಾಪಾರದ ಕೇಂದ್ರ. ಯುರೋಪಿನ ಎಲ್ಲ ದೇಶಗಳ ಜನರು ಇಲ್ಲಿ ವಾಸಿಸುತ್ತಿದ್ದು ತಮ್ಮದೊಂದು ಚಿಕ್ಕ ನಗರವನ್ನೇ ಅವರು ರಚಿಸಿಕೊಂಡಿದ್ದಾರೆ. ಶಾಂಘಾಯದ ಪತನದಿಂದ ಚೀನವು ಬಲಗುಂದಿದ್ದು ಕಮ್ಯೂನಿಸ್ಟರನ್ನು ವಿದೇಶ ಸರಕಾರಗಳು ಕೂಡ ಎದುರಿಸಲಾರವೆಂಬ ಸಂಶಯವುಂಟಾಗಹತ್ತಿದೆ. ಚೀನದಲ್ಲಿ ಕಮ್ಯೂನಿಸ್ಟರ ರಾಜ್ಯ ಪ್ರಸ್ಥಾಪಿತವಾದರೆ ಬ್ರಿಟಿಶ ಸರಕಾರವು ಅದಕ್ಕೆ ಮನ್ನಣೆ ಕೊಡುವ ವಿಚಾರದಲ್ಲಿದೆಯೆಂದೂ ಈ ಬಗ್ಗೆ ಈ ಮೊದಲು ಕಾಮನ್ಸದಲ್ಲಿ ಚರ್ಚೆ ಕೂಡ ಹೊರಟಿತ್ತೆಂಬುದನ್ನೂ ವಾಚಕರು ಸ್ಮರಿಸಬಹುದು. ಶಾಂಘಾಯ ಪತನದಿಂದ ಚೀನದ ಆಕ್ರಮಣವು ಮತ್ತಷ್ಟು ಸುಲಭವಾದಂತಾಗಿದೆ. ಚೀನದಲ್ಲಿಯ ಪರಿಸ್ಥಿತಿಯನ್ನು ನೋಡಿದರೆ ಕಮ್ಯೂನಿಸ್ಟರ ಹೊರತು ಯಾರೂ ಅದನ್ನು ಆಳಲಾರರೆಂದೆನಿಸಹತ್ತಿದೆ. ಏಕೆಂದರೆ ಚಿಯಾಂಗರು ಮತ್ತೆ ಚೀನದ ಆಡಳಿತೆಯನ್ನು ವಹಿಸುವ ಲಕ್ಷಣ ತೋರುವದಿಲ್ಲ. ಈಗಿನ ಆಡಳಿತೆಯೂ ಸಮರ್ಥವಾಗಿಲ್ಲ. ದೇಶದ ಅರ್ಧಕ್ಕಿಂತ ಹೆಚ್ಚು ಭಾಗವು ಕಮ್ಯೂನಿಸ್ಟರ ವಶವಾಗಿರುವಾಗ ಅವರ ಆಡಳಿತೆಗೆ ತಡೆಗಟ್ಟುವದು ಶಕ್ಯ ತೋರುವದಿಲ್ಲ. ಚೀನದಲ್ಲಿ ಒಮ್ಮೆ ಕಮ್ಯೂನಿಸ್ಟ ಸರಕಾರ ಸ್ಥಾಪಿತವಾದರೆ ಅದರ ಪರಿಣಾಮ ಇಂಡೋಚಾಯನಾ, ಮಲಯಾ, ಬ್ರಹ್ಮದೇಶ, ಸಯಾಮ ಮೊದಲಾದ ರಾಷ್ಟ್ರಗಳ ಮೇಲೆ ಆಗದಿರದು. ಈಗಾಗಲೆ ಬ್ರಹ್ಮದೇಶ ಮತ್ತು ಮಲಯಗಳಲ್ಲಿ ಕಮ್ಯೂನಿಸ್ಟರ ಹಾವಳಿ ಹೆಚ್ಚಿದೆ. ಹಿಂದುಸ್ಥಾನದ ಮೇಲೆಯೂ ಅದರ ಪರಿಣಾಮವಾಗದಿರದೆಂದು ತೋರುತ್ತದೆ. ತಮ್ಮ ವಿಧ್ವಂಸಕ ತತ್ವಗಳನ್ನು ವ್ಯಾಪಕವಾಗಿ ಪಾಲಿಸಲು ಪ್ರತಿಷ್ಠಾಬದ್ಧರಾದ ಕಮ್ಯೂನಿಸ್ಟರ ಸದ್ದು ಅಡಗಿಸುವದು ಸುಲಭಸಾಧ್ಯವಲ್ಲ. ಜನತೆಯ ಸಂಪೂರ್ಣ ಸಹಕಾರ ಇದ್ದಾಗ ಸರಕಾರಗಳಿಗೆ ಶಿಕ್ಷಿಸಲು ಉದ್ದೇಶವು ಸಾಧಿಸುವದು. ಕಮ್ಯೂನಿಸ್ಟರ ಬೋಧನೆ ಮಾತುಗಳಿಗೆ ಸಾಮಾನ್ಯ ಜನತೆ ಬಲಿ ಬೀಳುವ ಸಂಭವವುಂಟು. ಅವರ ಆ ನಾಟಕ ಗೋಷ್ಠಿಗಳ ಅಪಾಯಕ್ಕೆ ಗುರಿಯಾಗದಂತೆ ಸಾಮಾನ್ಯ ಜನತೆಯನ್ನು ಜಾಗರೂಕವಾಗಿ ನೋಡಿಕೊಳ್ಳುವದು ಅವಶ್ಯವಾಗಿದೆ.

ಸಿಂಹಳ ದ್ವೀಪದ ಹೊಸ ಘಟನೆ

ಅಧಿರಾಜ್ಯಪದಪ್ರಾಪ್ತಿ—ಗವರ್ನರ್ ಜನರಲ್ಲರ ಅಧಿಕೃತ ಶಾಸನಸಭಾವ್ಯವಸ್ಥೆ— ಅನುಲ್ಲೇಖ ಅಸ್ಪಷ್ಟತೆಗಳು—

ಇತ್ತೀಚೆಗೆ ಅಧಿರಾಜ್ಯಪದವನ್ನು ಹೊಂದಿದ ಸಿಂಹಳದ ರಾಜಕೀಯ ಘಟನೆಯೀಗ ಸಿದ್ಧವಾಗಿದೆ. ಅದರ ಆಳಿಕೆಯ ಕ್ರಮ ಹೆಚ್ಚಾಗಿ ಬ್ರಿಟಿಶ್ ಪಾರ್ಲಿಮೆಂಟಿನದನ್ನೇ ಹೋಲುತ್ತದೆ. ಆದರೆ ಗವರ್ನರ್ ಜನರಲ್ಲರಿಗೂ ಮಂತ್ರಿಮಂಡಲ ಶಾಸನ ಸಭೆಗಳಿಗೂ ಇರುವ ಸಂಬಂಧದಲ್ಲಿ ಆ ಸಾದೃಶ್ಯ ಸರಿಹೊಂದುವುದಿಲ್ಲ. ಅದು ಕೇವಲ ಅನುಕ್ತವಾಗಿ ಉಳಿದಿದೆ.- ಎಂದು ಮೊನ್ನೆ "ಫಾರ್ ಈಸ್ಟರ್ನ್ ಸರ್ವೇ" ಎಂಬ ನ್ಯೂಯಾರ್ಕಿನ ಪತ್ರಿಕೆಯಲ್ಲಿ ಶ್ರೀ ಈ. ಬರ್ಕ ಇನ್‌ಲೋ ಎಂಬ ಪ್ರಸಿದ್ಧ ಅಮೇರಿಕನ್ ಲೇಖಕರು ಅಭಿಪ್ರಾಯ ಪಡುತ್ತಾರೆ.

ಸಿಂಹಳದ ೧೯೪೭ ರ ಸ್ವಾತಂತ್ರ್ಯದ ಕಾಯಿದೆ ಅಧರ ಉಪನಿವೇಶತ್ವವನ್ನು ತೆಗೆದು ಹಾಕಿ ಅದಕ್ಕೆ ಇತಿಹಾಸ ಪ್ರಸಿದ್ಧವಾದ ಬ್ರಿಟಿಶ್ ಕಾಮನ್ವೆಲ್ತಿನಲ್ಲಿ ಅಧಿರಾಜ್ಯವಾಗಿ ಪ್ರವೇಶಿಸುವ ಹಕ್ಕನ್ನು ಕೊಟ್ಟಿತು. ಈ ಹೊಸ ಘಟನೆಯ ಅತಿ ಮುಖ್ಯವಾದ ಲಕ್ಷಣವೆಂದರೆ ಗವರ್ನರ್ ಜನರಲ್ಲರಿಗಿರುವ ಅಧಿಕಾರಪರಿಮಾಣ. ಎಂದಿನಿಂದಲೂ ಸಿಂಹಳದ ಗವರ್ನರ್ ಜನರಲ್ಲರು ಆ ದ್ವೀಪದ ಆಡಳಿತೆಯಲ್ಲಿ ಹೆಚ್ಚಿನ ನಿಯಂತ್ರಣವನ್ನು ಇಟ್ಟುಕೊಂಡೇ ಇದ್ದರು. ೧೯೩೧ ರ ಘಟನೆ ಅವರಿಗೆ ಸಾರ್ವತ್ರಿಕ ಶಾಸನ ರಚನೆಯ ಅಧಿಕಾರವನ್ನೇ ಕೊಟ್ಟಿತ್ತು. ಸದ್ಯದ ಘಟನೆಯಲ್ಲಿ ಅಂಥ ಅಧಿಕಾರ ನಿರೀಕ್ಷಿತವಾಗಿಯೂ ಇಲ್ಲ. ಆದರೆ ಅವರಿಗೆ "ಘಟನಾತ್ಮಕ ಪರಂಪರೆ ಅಥವಾ ಸಮಯಗಳು" ಕೊಡುವ ಅಧಿಕಾರಗಳನ್ನು ಮುಡಿಸಲಾಗಿದೆ. ಆದರಿಂದ ಸಿಂಹಳದ ಗವರ್ನರ್ ಜನರಲ್‌ರಿಗೆ ಕೇವಲ ನಾಮಮಾತ್ರದ್ದಾಗಿರದೆ ಕ್ರಿಯಾಕಾರಿಯಾದ ಹಲವು ಅಧಿಕಾರಗಳನ್ನು ಒಳಗೊಂಡದ್ದಾಗಿ ಈಗಲೂ ಉಳಿಯುವಂತಾಗಿದೆ.

ಗವರ್ನರ್ ಜನರಲ್ಲರ ಅಧಿಕಾರಗಳು

ಗವರ್ನರ್ ಜನರಲ್ಲರ ಅಧಿಕಾರಗಳಲ್ಲಿ ಈ ಕೆಳಗಿನವು ಮುಖ್ಯವಾದವು: ಮೇಲ್ಮನೆಯ ಸದಸ್ಯರಲ್ಲಿ ಅರ್ಧಾಂಶ ಜನರನ್ನು ನಿಯಮಿಸುವುದು, ೨) ಮತದಾರರನ್ನು ಸಂಘಟಿಸುವುದರ ಸಲುವಾಗಿ ಪ್ರಾಂತಗಳನ್ನು ವಿಭಜಿಸಲು ಒಂದು ಅವಿಚ್ಛೇದಕ ಸಮಿತಿಯನ್ನು (Delimitation Commission) ನಿಯಮಿಸುವುದು, ೩) ಮಂತ್ರಿಮಂಡಲವನ್ನೂ ಮುಖ್ಯಮಂತ್ರಿಯನ್ನೂ ನಿಯಮಿಸುವುದು, ೪) ಎಲ್ಲ ನ್ಯಾಯಾಧೀಶರನ್ನೂ ನಿಯಮಿಸುವುದು ಮತ್ತು ೫) ಮುಖ್ಯಸೇನಾಪತಿಯಾಗಿ ಕೆಲಸ ಮಾಡುವುದು. ಈ ಅಧಿಕಾರಗಳಲ್ಲದೆ, ಇತರ ಗೌಣವಾದ ನಿಯಾಮಕ ಅಧಿಕಾರಗಳೂ ಗವರ್ನರ್ ಜನರಲ್ಲರಿಗಿವೆ. ಘಟನೆಯ ವಿಧಾನಗಳನ್ನಾಯ ಗವರ್ನರ್ ಜನರಲ್ಲರ ಯಾವ ಕರ್ತವ್ಯಲೋಪವನ್ನೂ ನ್ಯಾಯಾಲಯಕ್ಕೆ ಒಯ್ಯಲು ಸಾಧ್ಯವಿಲ್ಲ. ಶಾಸನಸಭೆ ರಚಿಸಿದ ಕಾಯಿದೆಗಳನ್ನು ಪ್ರತಿಷೇಧಿಸುವ ಅಧಿಕಾರ ಗವರ್ನರ್ ಜನರಲ್ಲರಿಗಿದೆಯೋ ಇಲ್ಲವೋ ಎಂಬುದರ ಬಗ್ಗೆ ಘಟನೆ ಏನನ್ನೂ ಹೇಳಿಲ್ಲ; ಅದು ಘಟನಾಪ್ರಾಪ್ತ ಆ ಸಮಸ್ಯೆಯನ್ನು ಬಗೆಹರಿಸಬಹುದು.

ಇಂಗ್ಲೆಂಡಿನ ಮಾದರಿ

ಹೊಸ ಘಟನೆಯ ಪ್ರಕಾರ ಒಂದು ಶಾಸನ ಸಭೆ (Parliament) ಸಿದ್ಧವಾಗಬೇಕು. ಅದು ಬ್ರಿಟಿಶ್ ಶಾಸನ ಸಭೆಯಂತೆಯೇ ಇರುವುದಾಗಿದೆ. ಇಂಗ್ಲೆಂಡಿನ ಶಾಸನಸಭೆಗೂ ಅಲ್ಲಿಯ ರಾಜನಿಗೂ ಯಾವ ಸಂಬಂಧ ವಿದೆಯೋ ಆ ರಾಜನು ನಿಯಮಿಸಿದ ಈ ಗವರ್ನರ್ ಜನರಲ್ಲರಿಗೂ ಈ ಶಾಸನ ಸಭೆಗೂ ಅದೇ ಸಂಬಂಧವಿದೆಯೆಂದು ಹೇಳಲಾಗಿದೆ. ಅಲ್ಲಿಯ ಶಾಸನ ಸಭೆಯಂತೆ ಇಲ್ಲಿಯದಾದರೂ ೫ ವರ್ಷಗಳ ವರೆಗೆ ಬದುಕತಕ್ಕದ್ದಾಗಿಯೂ ವರ್ಷಕ್ಕೊಮ್ಮೆ ತಪ್ಪದೆ ಸೇರತಕ್ಕದ್ದಾಗಿಯೂ ಇದೆ. ಇನ್ನು ಪೆಗಳ ಹಕ್ಕು, ಹೊರ ಕುಳಿ ಮತ್ತು ಅಧಿಕಾರಗಳನ್ನು ಶಾಸನಸಭೆ ನಿಯಂತ್ರಿಸಬಲ್ಲುದಾದರೂ ಅವು ಇಂಗ್ಲೆಂಡಿನ ಕೆಳಮನೆಯವುಕ್ಕಿಂತ ಎಂದಿಗೂ ಅಧಿಕವಾಗುವಂತಿಲ್ಲ. ಈ ಶಾಸನಸಭೆಯ ಮೇಲ್ಮನೆಯಲ್ಲಿ ೩೦ ಸದಸ್ಯರೂ ಕೆಳಮನೆಯಲ್ಲಿ ೧೦೧ ಸದಸ್ಯರೂ ಇರತಕ್ಕದ್ದು. ಮೇಲ್ಮನೆಯ ಅಧಿಕಾರ ಇಂಗ್ಲೆಂಡಿನ ಮೇಲ್ಮನೆಯ ಅಧಿಕಾರಕ್ಕೆ ಹೆಚ್ಚುಕಡಿಮೆ ಸರಿಹೊಂದುತ್ತದೆ. ಜುಸಾಪಕೆಯಾದ ಬಳಿಕ ದ್ವೀಪದ ಯಾವುದಾದರೊಂದು ಹೊಸ ಶಾಸನಸಭೆಯಲ್ಲಿ ಅಸಮಪೂರ್ಣ

ವಾಗಿ ಪ್ರತಿನಿಧಿಸಲ್ಪಟ್ಟಿದ್ದರೆ ಆ ಬಗ್ಗೆ ೬ ಸದಸ್ಯರನ್ನು ನಿಯಮಿಸುವ ಸ್ವಾತಂತ್ರ್ಯ ಗವರ್ನರ್ ಜನರಲ್ಲರಿಗಿದೆ. ಇದೊಂದು ವಿಚಿತ್ರವೇ ಸರಿ.

ಶಾಸನ ಸಭೆ ಮತ್ತು ಅದರ ಅಧಿಕಾರ

ಅಯೋಗ್ಯರು ಶಾಸನ ಸಭೆಗೆ ಚುನಾಯಿತರಾಗಿ ಬರದಂತೆ ತಡೆಯಲು ಸಿಲೋನಿನ ಹೊಸ ಘಟನೆ ಕೆಳಗಿನ ನಿಯಮಗಳನ್ನು ಹೇಳಿದೆ: ಸಾಲಗಾರರಾದ ಪಾಪರರು ಮತ್ತು ಚುನಾವಣೆಯ ಹಿಂದಿನ ಏಳು ವರ್ಷಗಳೊಳಗೆ ೩ ತಿಂಗಳು ಅಥವಾ ಹೆಚ್ಚು ಕಾಲ ಸೆರೆಮನೆಯಲ್ಲಿದ್ದವರು ಚುನಾವಣೆ ಹುರಿಯಾಳಾಗಿ ನಿಲ್ಲಲು ಅಥವಾ ಹಿಂತ ಹುರಿಯಾಳಿಗೆ ಮತ ಕೊಡಲು ಅನರ್ಹರು. ಈ ನಿಯಮವನ್ನು ಉಲ್ಲಂಘಿಸಿದರೆ ದಿನವೊಂದಕ್ಕೆ ೫೦೦ ರೂಪಾಯಿ ದಂಡ ತರಬೇಕಾಗುತ್ತದೆ.

ಸಿಂಹಳದ ಶಾಸನ ರಚನಾಧಿಕಾರವು, ಕೆಲವೊಂದು ಅವಚ್ಛೇದಗಳನ್ನು ಬಿಟ್ಟರೆ, ಸ್ವರಾಜ್ಯ ನಿರ್ಮಾಣಕ್ಕಾಗಿಯೇ ರೂಪಿಸಲ್ಪಟ್ಟಿದೆ ಎಂಬುದರಲ್ಲಿ ಸಂದೇಹವಿಲ್ಲ. ಶಾಸನ ಸಭೆಯ ಮೇಲೆ ಹೇಳಬರುವಂಥ ಯಾವ ಪರಿಣಾಮಿಯಾದ ಅವಚ್ಛೇದವನ್ನೂ ಹೇರಿಲ್ಲ. ಮೂರನೆಯ ಎರಡಂಶ ಬಹುಮತದಿಂದ ಶಾಸನ ಸಭೆ ಸಿಂಹಳದ ಘಟನೆಯನ್ನು ರಚಿಸುವ ಇಂಗ್ಲೆಂಡಿನ ರಾಜನ ಆಜ್ಞೆಯ ಯಾವುದಾದರೊಂದು ಭಾಗವನ್ನು ತಿದ್ದಲು ಅಥವಾ ತಿರಸ್ಕರಿಸಲು ಸಮರ್ಥವಾಗಿದೆ; ಆದರೆ ಅಂಥ ಮಸೂದೆಗೆ ರಾಜನ ಅನುಮತಿ ಮಾತ್ರ ಸಿಕ್ಕಬೇಕು.

ನ್ಯಾಯಾಧೀಶರ ನಿಯಮನ ಶಾಸನ ಸಭೆಗಿಲ್ಲ. ಅವರ ಸ್ಥಾನಾಂತರ, ವೇತನ, ನಿವೃತ್ತಿ ಎಲ್ಲವೂ ಗವರ್ನರ್ ಜನರಲ್ಲರ ಕೈಯೊಳಗೇ. ಗವರ್ನರ್ ಜನರಲ್ಲರು ನಿಯಮಿಸಿದ "ಪಬ್ಲಿಕ್ ಸರ್ವಿಸ್ ಕಮಿಶನ್ನಿ"ನ ನಿರ್ದೇಶನದಲ್ಲಿ ಸಿವಿಲ್ ಸರ್ವೀಸನ್ನು ಸ್ಥಾಪಿಸುವುದನ್ನು ಘಟನೆಯ ಒಂದು ಭಾಗದಲ್ಲಿ ಹೇಳಿದೆ. ಈ ಕಮಿಶನ್ನಿನಲ್ಲಿ ಮೂವರು ಸದಸ್ಯರಿರುವರು; ಗವರ್ನರ್ ಜನರಲ್ಲರು ಮಾತ್ರ ಅಗತ್ಯವೆನಿಸಿದಾಗ ಅವರನ್ನು ಪದಚ್ಯುತಗೊಳಿಸಬಹುದು. ಅದೇ ಭಾಗದಲ್ಲಿ ಅಧಿಕಾರಿಗಳ ನಿವೃತ್ತಿವೇತನ, ಅಧಿಕಾರಾವಧಿ, ನಿವೃತ್ತಿ ಮುಂತಾದ ವಿಷಯಗಳ ಬಗ್ಗೆ ಸುದೀರ್ಘ ವಿವರಗಳಿವೆ, ನ್ಯಾಯಶಾಖೆಯ ಮಂತ್ರಿಯ ನಿಯಂತ್ರಣದಲ್ಲಿ ಒಂದು ಸುವ್ಯವಸ್ಥಿತ ಇಧಿಯನ್ನು ಸಿದ್ಧಗೊಳಿಸಿರುವುದು ಒಂದು ಅತಿ ಹೊಸ ಸಂಗತಿ.

ಕಾಮನ್ವೆಲ್ತಿನೊಡನೆ ಸಂಬಂಧ

ಸ್ಪಷ್ಟವಾದ ಹೇಳಿಕೆಗಳಿಂದ ಅಳಿಯುವುದಾದರೆ ಸಿಂಹಳದ ಸಂಬಂಧ ಕಾಮನ್‌ವೆಲ್ತಿನೊಡನೆ ಅಲ್ಪವೆನಿಸುತ್ತದೆ. ಅತಿ ಸ್ಪಷ್ಟವಾದ ಸಂಬಂಧವೆಂದರೆ ಗವರ್ನರ್ ಜನರಲ್ಲರು ವ್ಯಕ್ತಿಶಃ ಇಂಗ್ಲೆಂಡಿನ ರಾಜನನ್ನು ಪ್ರತಿನಿಧಿಸುವುದು. ಆದರೆ ಇದು ಬಹಳ ಶಾಬ್ದಿಕವಾದ ಸಂಬಂಧ ಅಲ್ಲದೆ, ಘಟನೆಯಲ್ಲಿ ಬ್ರಿಟಿಶ್ ಪಾರ್ಲಿಮೆಂಟು ಸಿಂಹಳದ ಸ್ವಾರ್ಥನೆ ಮತ್ತು ಒಪ್ಪಿಗೆಗಳಿಲ್ಲದೆ ಅದಕ್ಕೆ ಅನ್ವಯಿಸುವ ಯಾವ ಕಾಯಿದೆಯನ್ನೂ ಮಾಡಲಾರದೆಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಪಾಸಗಿ 'ಸ್ಟಾರ್ ಹೋಲ್ಡರ್' ರಿಗೆ ಬ್ರಿಟಿಶ್ ಸರಕಾರದ ರಕ್ಷಣೆಯಿದೆ. ಆದರೆ ಇದು ಸಿಂಹಳಕ್ಕೆ ಪ್ರತಿಕೂಲವಾಗಿಲ್ಲ; ಹಿಂದೆ ಕೆಗೆದುಕೊಂಡ ಇಂಥ ಇತರ ಕ್ರಮಗಳಂತೆ ಇದಾದರೂ ಸಿಂಹಳ ಸರಕಾರದ ಅಧಿಕಾರವನ್ನು ನ್ಯೂನಗೊಳಿಸುವುದಿಲ್ಲ.

ಘಟನೆಯ ನ್ಯೂನತೆಗಳು

ಸಿಂಹಳದ ಘಟನೆಯಲ್ಲಿ ಎಲ್ಲಿಯೂ ರಾಜ್ಯದ ವಿಶಿಷ್ಟ ಲಕ್ಷಣವನ್ನು ಹೇಳಿಲ್ಲ; ಆಮುಲಿನಲ್ಲಿ ಬರುವ ಧ್ಯೇಯಗಳ ಬಗ್ಗೆ ಕೂಡ ಸ್ಪಷ್ಟವಾದ ವಿವರಣವಿಲ್ಲ. ಉದಾ:-ಮಂತ್ರಿಮಂಡಲದ ಐಕ್ಯಕ್ಕೆ ಸ್ಪಷ್ಟತೆ ಮಾಡಲಾಗಿದೆ. ಆದರೆ ಆ ಐಕ್ಯವು ಯಾವ ಆಧಾರದ ಮೇಲೆ ಸಾಧಿಸಬೇಕೆಂಬುದು ಉಕ್ತವಾಗಿಲ್ಲ. ಅದೇ ರೀತಿಗೆ ಮಂತ್ರಿಮಂಡಲಕ್ಕೂ ಗವರ್ನರ್ ಜನರಲ್ಲರಿಗೂ ಇರುವ ಸಂಬಂಧ ನಿಶ್ಚಿತವಾಗಿಲ್ಲ. ಮಂತ್ರಿಮಂಡಲದ ಅಧಿಕಾರ ವ್ಯಾಪ್ತಿ ಅನುಕ್ತವಾಗಿದೆ. ಎಲ್ಲಿಯೂ ಘಟನೆ Bill of rights-ಹಕ್ಕುಗಳ ಮಸೂದೆಯನ್ನು ಉಲ್ಲೇಖಿಸಿಲ್ಲ. ಇತರ ದೇಶಗಳ ಘಟನೆಗಳಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ. ಇದಿಲ್ಲದೆ ಅಲ್ಲಿಯ ಪ್ರಜೆಯ ಸ್ವಾತಂತ್ರ್ಯದ ಮರ್ಯಾದೆ ಅವನಿಗೆ ಅರಿವಾಗುವಂತಿಲ್ಲ. ವೆಸ್ಟ್ ಮಿನಿಸ್ಟರ್ ಕಾಯಿದೆಯನ್ನಾಯ ಈ ಘಟನೆ ಮಾನ್ಯ ಮಾಡಿದೆ. ಇದರ ಮುಂದಿನ ಪ್ರಗತಿಯನ್ನು ಸಿಂಹಳೀಯರೇ ನಿರ್ದೇಶಿಸಬೇಕು.

ಮಕ್ಕಳಾಡಿಗರು

ವಿಲಕ್ಷಣತೆಗಳಿಗೆಲ್ಲ ಅಮೇರಿಕ ತವರುಮನೆ; ಪಾಶ್ಚಾತ್ಯ ನಾಗರಿಕತೆಯ ಶಿಖರವದು. ಅದು ಹೊಟ್ಟೆತುಂಬ ಕೊಬ್ಬಿದ ದೇಶವಾದರೂ ಬಡವರಿಗೂ ಉದ್ಯೋಗ ಸಿಕ್ಕದೆ ನರಳುವವರೂ ಅಲ್ಲಿ ಕಡಿಮೆಯಿಲ್ಲ. ಅಲ್ಲಿಯ ನಾಗರಿಕತೆ ಕಲ್ಪಿಸಿಕೊಟ್ಟ ಒಂದು ದೊಡ್ಡ ಉದ್ಯೋಗ ವೆಂದರೆ ಮಕ್ಕಳನ್ನು ಆಡಿಸುವುದು! (Baby Sitting)

ಸ್ತ್ರೀಸ್ವಾತಂತ್ರ್ಯ ಮುಗಿಲು ಮುಟ್ಟಿದ ಅಮೇರಿಕದಲ್ಲಾದರೂ ಮಕ್ಕಳನ್ನು ಆಡಿಸಲು ಹೆಚ್ಚಾಗಿ ಬರುವವರು ಹುಡುಗಿಯರೆ. ಪ್ರಾಯದ ಹುಡುಗಿಯರು (Baby Sitters or Bratters ಮಗುವನ್ನು ಕಾಯ್ದುಕೊಂಡು ಕುಳ್ಳಿರುವವರು) ಮಗುಗಾಹಿಗಳಾಗಲು ನಾನು ಮುಂದೆ ತಾನು ಮುಂದೆ ಎಂದು ನಾಟಕ ಮಂದಿರ, ಸಿನೆಮಭವನ, ನೃತ್ಯಶಾಲೆ, ಕ್ಲಬ್ಬು ಮುಂತಾದೆಡೆಗಳಲ್ಲಿ ತಾಯಂದಿರ ಸುತ್ತ ಮುತ್ತಿ ನಿಡುತ್ತಾರೆ.

ಮಗುಗಾಹಿಯ ಉದ್ಯೋಗ ಅಮೇರಿಕದಲ್ಲಿ ಬಹಳ ಸುಸಂಘಟಿತವಾಗಿದೆ. ಈ ಕೆಲಸದವರ ಒಟ್ಟು ವಾರ್ಷಿಕ ಉತ್ಪನ್ನ ೫೦೦ ಕೋಟಿ ರೂಪಾಯಿಗಳಷ್ಟಾಗುತ್ತದೆ. ಅಡಿಗೆಯವರ ಕೊಠಡಿ ನಮ್ಮಲ್ಲಿರುವಂತೆ ಈ ಮಗುಗಾಹಿಗಳ ಒಂದು ಕೊಠಡಿ ನಗರಗಳ ಗಲ್ಲಿಗಲ್ಲಿಗಳಲ್ಲೂ ಕಾಣಬಹುದು. ಎಲ್ಲಿಗಾದರೂ ಹೋಗಬೇಕೆಂದೆನಿಸಿದಾಗ ತಾಯ್ಯಂದಿಗಳು ಈ ಉದ್ಯೋಗಿಗಳ ಕೊಠಡಿಗೆ "ಫೋನ್" ಮಾಡಿದರೆ ಕೂಡಲೆ ಒಬ್ಬಳು ಅಲ್ಲಿಂದ ಬಂದು ಮಗುವನ್ನು ಎತ್ತಿಕೊಂಡು ಹೋಗುತ್ತಾಳೆ.

ಬಹುಸಂಖ್ಯ ಮಗುಗಾಹಿಗಳು ಹುಡುಗಿಯರಾದರೂ ಅಲ್ಲಲ್ಲಿ ಹುಡುಗರೂ ಮುದುಕ ಮುದುಕಿಯರೂ ಈ ಕೆಲಸ ಮಾಡುವದನ್ನು ಕಾಣಬಹುದು. ಅವರಲ್ಲಿ ವಿದ್ಯಾರ್ಥಿನಿಯರು ಬಹಳ; ಅನಂತರ ಯಾರು ಬೇಕಾದರೂ ಸರಿ.

ಶಾಲೆಯ ಹುಡುಗಿಯರು ಹೀಗೆ ಬಿಡುವಿನ ಗಂಟೆಗಳಲ್ಲಿ ಮಕ್ಕಳನ್ನಾಡಿಸಿ ಖರ್ಚಿಗೆ ಕಾಸು ಸಂಪಾದಿಸುವುದನ್ನು ಉಪಾಧ್ಯಾಯರು ಪ್ರೋತ್ಸಾಹಿಸುತ್ತಾರೆ. ಅವರು ತಮ್ಮದೇ ಆದ ಸಂಘ, ಕೂಟ ಮುಂತಾದವನ್ನು ಸಂಘಟಿಸಿಕೊಂಡಿದ್ದಾರೆ. ಮಗುಗಾಹಿಗಳ ಕರಾರು ಬಹಳ ಬಿಗುವಾದುದು; ಅದಕ್ಕೆ ವಿಶಿಷ್ಟ ನಿಯಮಗಳಿವೆ. ಆ ಕೆಲಸದವರ ನಡತೆಯ ಮೇಲೆ ನಿಯಂತ್ರಣವಿದೆ, ಅದರ ಸಂಘವು ಸದಸ್ಯರ ಸಂಬಳವನ್ನು ಅವರ ನಡತೆ, ಕೌಶಲ, ಕೆಲಸದ ಕಾಲಾವಧಿ ಇವುಗಳ ಮೇಲಿಂದ ನಿರ್ಣಯಿಸುತ್ತದೆ. ಕೆಲಸ ಮಾಡುತ್ತಿರುವಾಗ ಅವರು ಗಂಡು ಗೆಳೆಯರೊಡನಿರಬಾರದು. ಜೋರಾಗಿ ತಿರುಗಬಾರದು. ತಾಯ್ಯಂದೆಗಳ ಅಪ್ಪಣೆಯಿಲ್ಲದೆ ಮಗುವನ್ನು ಎಲ್ಲಿಗಾದರೂ ಕರೆದುಕೊಂಡು ಹೋಗಬಾರದು, ಮನೆಯ ಟೆಲಿಫೋನುಗಳನ್ನು ಬಳಸಬಾರದು, ಉಗ್ರಾಣಗಳಲ್ಲಿ ಕಾಲಿಡಬಾರದು ಮುಂತಾದ ಅನೇಕ ನಿಯಮಗಳನ್ನು ಅವರು ಪಾಲಿಸಬೇಕಾಗುತ್ತದೆ.

ತಾಯ್ಯಂದೆಗಳು ಮೊದಲೇ ಎಲ್ಲ ಸಂದರ್ಭಗಳಿಗೂ ಅನ್ವಯಿಸುವ ಬುದ್ಧಿವಾದಗಳನ್ನು ಬರೆದು ಮಗುಗಾಹಿಗೆ ಕೊಟ್ಟಿರಬೇಕಲ್ಲದೆ, ಮಕ್ಕಳನ್ನು ಅವಳ ವಶಕ್ಕೆ ಕೊಡುವಾಗ ಅವು ಶುದ್ಧವಾಗಿಯೂ ಆರೋಗ್ಯವಂತವಾಗಿಯೂ ಪ್ರಸನ್ನಚಿತ್ತೆಯುಳ್ಳವಾಗಿಯೂ ಇರುವಂತೆ ನೋಡಿಕೊಳ್ಳತಕ್ಕದ್ದು. ಈ ನಿಯಮಗಳಂತೆ ವರ್ತಿಸದ ತಾಯ್ಯಂದೆಯರ ಮಕ್ಕಳನ್ನು ಆಡಿಸಲು ಯಾವ ಮಗುಗಾಹಿಯೂ ಸಿಕ್ಕಳು.

ಗಾಬರಿಯಾದ ಹೆಂಡತಿ: "ಮಗು ಮಸಿ ಕುಡಿಯಿತಲ್ಲಾ. ನಾನೇನು ಮಾಡಲಿ!"

ಅನ್ಯಮನಸ್ಕ ಗಂಡ: "ಪೆನ್ಸಿಲಿನಿಂದ ಬರಿ."

*

"ನಾನು ಮನೋಯೋಗಿ, ಅಂದರೆ ನಿಮ್ಮ ಮನಸಿನಲ್ಲಿ ಏನಿದೆಯೆಂದು ಚಾಚೂ ತಪ್ಪದೆ ಹೇಳಬಲ್ಲೆ."

"ಹೀಗೋ! ಹಾಗಾದರೆ ದಯವಿಟ್ಟು ನನ್ನನ್ನು ಕ್ಷಮಿಸಿರಿ."

*

ಕಾರಕೂನ: "ನನ್ನ ಸಂಬಳ ಹೆಚ್ಚಿಸಬೇಕೆಂದು ನಿಮ್ಮನ್ನು ಕೇಳಬೇಕೆಂದು ನನ್ನ ಹೆಂಡತಿ ಹೇಳಿದ್ದಾಳೆ."

ಯಜಮಾನ: "ಆಗಲಿ. ನಿನ್ನ ಸಂಬಳ ಹೆಚ್ಚಿಸಬಹುದೇ ಎಂದು ನನ್ನ ಹೆಂಡತಿಯನ್ನು ಕೇಳುತ್ತೇನೆ."

ಸುಪ್ರಭಾತ

ಲೇಖಕ:—ಕೆ. ಆರ್. ಉಡುಪ ಬಿ. ಒ. ಎಲ್., ಬಿ. ಟಿ. ಮಂಗಳೂರು

ಕಥೆಯೊಂದರ ರೂಪರೇಖೆಯು ಕೆಲದಿನಗಳಿಂದ ನನ್ನ ತಲೆಯಲ್ಲೋಡಾಡುತ್ತಿತ್ತು. ಪ್ರಸಿದ್ಧ ಪತ್ರಿಕೆಯೊಂದರ ಮಹಾಸಂಪಾದಕರೊಬ್ಬರು ಒಂದು ಕಥೆಗಾಗಿ-ಬೇಗ ಬರೆದು ಕಳುಹಿಸುವದಕ್ಕಾಗಿ—ಬರೆದೂ ಇದ್ದರು. ನಾನೂ, ನನ್ನ, ಅಥವಾ ಹಿರಿಯರ ಪುಣ್ಯದಿಂದ ಬಿ. ಎ. ಪರೀಕ್ಷೆಯಲ್ಲಿ ಪಾಸಾಗದೆ ಬದುಕಿದ್ದೆ. ಯೋಗ್ಯ ಕೆಲಸಕ್ಕಾಗಿ ಅರ್ಜಿ ಬರೆ ಬರೆದು ಸಾಕಾಗಿ, ಇನ್ನು ಕತೆ ಕವಿತೆ ಬರೆದು ಹೆಸರಾಂತ ಕವಿ (ಬೇಕಾದರೆ ನಡುವೆ ಬಿಂದು ಸೇರಿಸಿ [ಕಪಿ]) ಯಾಗಿ ರಾರಾಜಿಸುವದು ಉತ್ತಮವೆಂದು ಯೋಚಿಸಿಯೂ ಇದ್ದೆ.

ಅಂತು ಒಂದು ಸುಪ್ರಭಾತದಲ್ಲಿ ಕತೆ ಬರೆವ ಯೋಜನೆಯಿಂದೆದ್ದು ನಾಲ್ಕು ಕಪ್ಪು ಕಾಫಿಯನ್ನು—ಎರಡು ದೈಹಿಕ ಹುರುಪಿಗಾಗಿ, ಇನ್ನೆರಡು ಮಾನಸಿಕ ಸ್ಫೂರ್ತಿಗಾಗಿ—ಒಂದೆ ಸಲ ಕುಡಿದು ಖಾಲಿಮಾಡಿಬಿಟ್ಟ ಬಳಿಕ ಬರವಣಿಗೆಯ ಸಾಮಗ್ರಿಗಳೊಡನೆ ಸುಪ್ರಸನ್ನನಾಗಿ, ಸುಖಾಸೀನನಾಗಿ ಕುಳಿತಿರುವಷ್ಟರಲ್ಲಿ, ಮೂರು ಮಂದಿ ಮಾನಾರ್ಹ ಮಹಾಶಯರು ನನ್ನ ಮುಂದೆ ಬಂದು ಸಂತೋಷದಿಂದ ವಂದಿಸಿದರು.

ಅವರು ಮೂವರೂ ನನಗೆ ತೀರಾ ಅಪರಿಚಿತರಿದ್ದುದರಿಂದ, ಅವರ ಹಾವಭಾವಗಳನ್ನು ಕಂಡೊಡನೆಯೇ ಬಂದವರ ಉದ್ದೇಶವು ನನಗೆ ಹೊಳೆದುಹೋಯಿತು. ಕೇವಲ ನನ್ನ ವಂದನೆಗಾಗಿ ಅವರು ಬಂದಿಲ್ಲವೆಂದು ತಿಳಿದು ಹೋಯಿತು. ಅದಕಾರಣ 'ಮಹಾಶಯರೇ, ನಿನ್ನೆ ನೋಡಿ, ಆ ನೆರೆ ನಿವಾರಣ ಸಂಘದವರ ನಾಟಕದ ಟಿಕೇಟನ್ನು—ಸುಮ್ಮನೆ-ನಾಟಕಕ್ಕೆ ಹೋಗದಿದ್ದರೂ-ಕೊಂಡುಕೊಂಡಿದ್ದೆ. ಅದ್ದರಿಂದ ಇಂದು ದಯಮಾಡಿ ಕ್ಷಮಿಸೋಣವಾಗಲಿ' ಎಂದೆ.

ಅಷ್ಟರಲ್ಲಿ ಆ ಮಹಾಪುರುಷರು ನನ್ನ ಆಮಂತ್ರಣವಿಲ್ಲದೇನೆ ಎದುರಿದ್ದ ಆಸನದಲ್ಲಿ ಸುಖಾಸೀನರಾಗಿದ್ದರು. ಆಗ ಅವರಲ್ಲೊಬ್ಬನು, ತನ್ನ ಕೂದಲನ್ನು ಸರಿಮಾಡಿಕೊಳ್ಳುತ್ತ, ಶರ್ಟಿನ ಕಾಲರನ್ನು ಎತ್ತಿ ಹಿಡಿಯುತ್ತ 'ಆ ಕೇರಿಯ . . . ಆ ಮೂಲೆಯಲ್ಲಿ ನಾಟಕವಾಡಿದರೆ ಯಾರು ತಾನೇ ಹೋದಾನು? ಅದಕ್ಕಾಗಿಯೇ ನಾವು ಇದೇ ಮಹಾವೀಥಿಯ . . ಸಭಾಂಗಣದಲ್ಲಿ ನಾಟಕವಾಡಲಿದ್ದೇವೆ. ತಮ್ಮಂತಹರ ಅನುಕೂಲತೆಗಾಗಿಯೇ ನಾವೀ ವ್ಯವಸ್ಥೆಯನ್ನು ಮಾಡಿರುವೆವು. ವೆಚ್ಚ ಸ್ವಲ್ಪ ಹೆಚ್ಚಾದರೂ ಬಂದು ಹೋಗುವವರಿಗೆ ತುಂಬಾ ಅನುಕೂಲ. ಅದ್ದರಿಂದ ದಯವಿಟ್ಟು ತಾವು—' ಎನ್ನುತ್ತ ಹತ್ತು ರೂಪಾಯಿಗಳ ಟಿಕೇಟಿನ ಪುಸ್ತಕವೊಂದನ್ನು ಮೇಜಿನ ಮೇಲಿಟ್ಟು, "ಇವನೀಗ ಬೋಣಿಗೆಬಿದ್ದನು" ಎಂದು ಭಾವಿಸುವವನಂತೆ ತುಟಿಗಳ ತುತ್ತತುದಿಯಲ್ಲಿ ಮುಗುಳ್ನಗೆಯನ್ನಾಡಿಸಲಾರಂಭಿಸಿದನು.

ಆಗ ನಾನೂ ವಿನಯಪೂರ್ವಕವಾಗಿ-ಸಮಾಧಾನದಿಂದಲೇ ನನಗೀಗ ಸಮಯವಿಲ್ಲವಾಗಿಯೂ ಸಮಯ ಮಾಡಿಕೊಳ್ಳಲು ಅಸಾಧ್ಯ ಸಂಭವವಿರುವುದಾಗಿಯೂ ಅದ್ದರಿಂದ ತಮ್ಮ ಅಭಿನಯಾದಿಗಳನ್ನು ಕಾಣುವ ಸುಯೋಗವನ್ನು ಬಿಡಬೇಕಾಗಿದೆಯಾಗಿಯೂ ವಿವರಿಸಿ ಹೇಳಿದೆನು.

ಆಗ ಎರಡನೆಯವನು "ಒಮ್ಮೆ ಬಂದು, ಕೊನೆವರೆಗಲ್ಲದಿದ್ದರೂ ಸ್ವಲ್ಪ ಸಮಯವಾದರೂ ಇದ್ದು ಆ ಸಭಾಭವನವನ್ನಲಂಕರಿಸುವ ಕೃಪೆದೋರಿದ್ದರೆ ತುಂಬಾ ಒಳ್ಳೆಯದಾಗುತಿತ್ತು. ತಮ್ಮಲ್ಲಿಂದ ನಾಲ್ಕಾರು ಮಾರು ದೂರದಲ್ಲೇ ಎಲ್ಲವೂ ನಡೆಯಲಿದೆ. ಹಃ. ಹಃ—" ಎಂದು ಬಾಯಿ ಬಿಡಲಾರಂಭಿಸಿದನು.

ಮೂರನೆಯವನು, "ಶಾಪಾರಸ್ತೆಯಲ್ಲಿ ಆಗಾಗ—ರಾತ್ರಿ ಸಹ-ಬಂದು ಹೋಗುತ್ತಿರುವುದನ್ನು ನಾನು ಕಂಡಿದ್ದೇನೆ. ಅದ್ದರಿಂದ . . "

ನಾನು ತುಸು ತಾಳ್ಮೆಗೆಟ್ಟು ಆದರೂ ವಿನಯದಿಂದಲೇ, "ಇಲ್ಲ. ನನ್ನಲ್ಲಿ ಹಣವಿಲ್ಲ, ದಯವಿಟ್ಟು ಬೇಸರಿಸಬಾರದು" ಎನ್ನುತ್ತ ಪೆನ್ ತೆಗೆದು ಮುಖ ತಿರುಗಿಸಿ ಬರೆಯಲನುವಾದೆ. ನನ್ನೀ ದೃಢ ನಿಶ್ಚಯವು ಅವರ ಹುರುಪನ್ನು ಕೆರಳಿಸಿ ಹೊರದಿಸೀತೆಂದೂ ಭಾವಿಸಿದೆ. ಆದರೆ, ಅದರ ಬದಲು ಮೊದಲಿನಂತೆಯೇ ಉತ್ಸಾಹದಿಂದವರು ಮುಂದೊತ್ತುತ್ತಿರುವದನ್ನು ಕಂಡು ಅವರ ಧೈರ್ಯಕ್ಕೆ ನಿಜವಾಗಿಯೂ ಬೆರಗಾದೆ.

ಅವರಲ್ಲಿ ಮೊದಲನೆಯವನು, 'ಹಃ. ಹಣವಿಲ್ಲ! ನಿಮ್ಮ ಚಾ, ಕಾಫಿಯ ಹಣವೇ ತಿಂಗಳಿಗೆ ಐವತ್ತರ್ವತ್ತು ರೂಪಾಯಿಗಳಿಗೂ ಮಿಕ್ಕುವಾಗ ಈ ಚಿಲ್ಲರೆ-ಬರೀ ಹತ್ತು ರೂಪಾಯಿಗಾಗಿ ಇಷ್ಟೆಲ್ಲಾ ಭೂಗೋಳ್ಯ ಹಃ ಹ."

ನಾನಾಗ ಇನ್ನಷ್ಟು ಬೆರಗಾಗಿ ತಲೆ ಎತ್ತುವಾಗ ಈ ವರೆಗೆ ಹೆಚ್ಚು ಮಾತಾಡದ ಮೂರನೆಯವನು "ನೀವೇನು ಬೇಕಾದರೆ ಹೇಳಿ. ಅಂತೂ ನಿಮಗೊಂದು ಟಿಕೇಟು ಕೊಟ್ಟಲ್ಲದೆ ಇಲ್ಲಿಂದ ಹೋಗುವಂತಿಲ್ಲ. ಹಣ ಬೇಕಾದರೆ ಈಗ ಕೊಡದಿದ್ದರೂ ಚಿಂತಿಲ್ಲ. ತಮ್ಮಂತಹ ಮಹಾಶಯರನ್ನು ಈ ಚಿಲ್ಲರೆ ಹಣಕ್ಕಾಗಿ ನಂಬದಿರಬಹುದೇ?" ಎನ್ನುತ್ತಾ ತನ್ನ ಅನುಯಾಯಿಗಳ ಮುಖ ನೋಡಲು, ಎಲ್ಲರೂ ಕೋಳನ ನಗೆಯನ್ನು ಬೀರಲಾರಂಭಿಸಿದರು.

ಅಗ ನಾನು, ಈ ಮೂರು ಜನರು ಸ್ವತಃ ಅಲ್ಲವಾದರೂ, ಇವರ ಅಪ್ಪಂದಿರು-ಅಸ್ಸಲ್. ಮಾರ್ವಾಡಿಗಳೇ ಇರಬೇಕು. ಇಲ್ಲವಾದರೆ, ಏನೆಲ್ಲ ವಿದ್ಯೆಗಳು ಇವರೊಡನಿವೆ! ಅಂತು ನಮ್ಮ ಕಷ್ಟ ಇವರಿಗರಿತಿರುವುದಾದರೂ ಹೇಗೆ? ಆದರೂ ಧೈರ್ಯ ಮಾಡಿಕೊಂಡು, ಕಠಿನ ಹೃದಯನಾಗಿ "ಇಲ್ಲ, ನಿಜವಾಗಿಯೂ ಟಿಕೇಟು ಕೊಂಡು ಕೊಳ್ಳಲು ಸಾಧ್ಯವಿಲ್ಲ. ದಯವಿಟ್ಟು ಕ್ಷಮಿಸಿರಿ" ಎಂದುತ್ತರಿಸಿದೆ.

ಇಷ್ಟು ಹೇಳಿದ ಮೇಲೆ ಇನ್ನು ವಾದಕ್ಕೆಡೆಯಿಲ್ಲ. ಸ್ವಾಭಿಮಾನದ ಲೇಶವಾದರೂ ಇದ್ದರೆ ಇದು ಧಾರಾಳ ಸಾಕು ಎಂದು ಭಾವಿಸುತ್ತ ತಲೆ ತಗ್ಗಿಸಿ ಬರೆಯಲನುವಾದೆ. ಕಲೆಬುರುಡೆಯನ್ನೆಲ್ಲಾ ಕರಡು ಮಾಡಲು ಈ ಅವಾಂತರವು ಯಥೇಷ್ಟ ಸಾಕಾಗಿದ್ದರೂ ಕಥೆಯ ಕೆಲವಕ್ಷರಗಳನ್ನು ಗೀಚಲಾರಂಭಿಸಿದೆ. ಆದರೆ ಯೋಚನೆ ಮಾತ್ರ ಈ ಮಹಾಶಯಿಗಳ ಕಾಟದಿಂದ ಮುಂದುವರಿಯದ್ದನ್ನು ಕಂಡು "ಇನ್ನು ಯಾಕೆ ಕಾಯುತಿದ್ದೀರಿ? ಹೋಗಿ-ನೆರೆಕರೆಯಲ್ಲಿ ತುಂಬಾ ಧನಿಕರಿರುವರು. ನಿಜವಾಗಿಯೂ ಕೆಲ ಟಿಕೇಟುಗಳನ್ನು ಅಲ್ಲಿ ಮಾರಬಹುದು. ಮಾತ್ರವಲ್ಲದೆ-ನೋಡಿ-ನಾನೀಗ ವಿಶೇಷ ಕೆಲಸದಲ್ಲಿದ್ದೇನೆ," ಎಂದೆ.

ಅಗ ಪುನಃ ಒಂದನೆಯವನು (ಅವರ ನಿಜವಾದ ನಾಮ, ಗೋತ್ರಗಳನ್ನು ಕೇಳದ್ದರಿಂದ ಕೇವಲ ಸಂಖ್ಯಾನಾಮದಿಂದಲೇ ಕರೆಯುವೆನು) ಆ ಹತ್ತು ರೂಪಾಯಿಯ ಪುಸ್ತಕವನ್ನೆತ್ತಿ ಕಿಸೆಗೆ ತುರುಕಿಸುತ್ತ ಎದ್ದು, "ಅದರೆ ಇದರಲ್ಲೊಂದು ನಿಮಗಾಗಿ ಇಟ್ಟೇಬಿಡುತ್ತೇವೆ" ಎನ್ನುತ್ತ ಐದು ರೂಪಾಯಿ ಟಿಕೇಟಿನ ಪುಸ್ತಕವನ್ನು ಮುಂದಿಟ್ಟು ಅದರಲ್ಲೊಂದನ್ನು ಹರಿಯಲಾರಂಭಿಸಿದನು.

ತೀರಾ ಹದಗೆಟ್ಟು ನಾನಾಗ ಅತನನ್ನು ತಡೆದು "ಹೀಗೇಕೆ ನೀವು ಮಾಡುವಿರಿ; ನಾನಾಗಲೇ ಹೇಳಿಲ್ಲವೇ . . . "

ಆದರೆ ಎರಡನೆಯವನು ಮಧ್ಯವೇ ತಡೆದು; "ನಾವು ಹೇಗೆ ಹೊರ ಹೋಗಿ ನೀವು ಟಿಕೇಟು ಕೊಳ್ಳಲಿಲ್ಲವೆಂದು ಹೇಳಲಿ . . . "

ಈ ವರೆಗೆ ಅತ್ಯಂತ ಸಾಹಸದಿಂದ ನನ್ನ ತಾಳ್ಮೆಯನ್ನು ತೋರಿಸುತ್ತಿದ್ದೆ. ಇದನ್ನು ಕೇಳಿದ ಮೇಲಂತೂ ತಡೆಯಲಾರದೆ "ಹೊರ ಹೋಗಿ ನೀವು ಡಂಗುರ ಸಾರುವ ಅಗತ್ಯವಿಲ್ಲ. ದಯಮಾಡಿಸಿ. ನಾನು ಹೇಳಿದ್ದನ್ನು ಕೇಳಿಯಾಯಿತಷ್ಟೆ. ನನಗೆ ನಾಟಕ ನೋಡಲು ಸಮಯವೂ ಇಲ್ಲ. ನೀವು ಟಿಕೇಟು ಕೊಡುವ ಅವಶ್ಯಕತೆಯೂ ಇಲ್ಲ."

ಅಗ ಒಂದನೆಯವನು "ಅದಕ್ಕೇನು? ಎಷ್ಟೋ ಹಣವಂತರು ಟಿಕೇಟನ್ನು ಕೊಂಡು ಕೊಳ್ಳುತ್ತಾರೆ. ಆದರೆ ಅವನ್ನುಪಯೋಗಿಸುವ ಗೊಡವೆಗೇ ಹೋಗುವುದಿಲ್ಲ."

ಇಷ್ಟರಲ್ಲಿ ನನ್ನ ಕಥಾಸರವು ಮೆದುಳಿಂದ ಎಂದೂ ಹಾರಿಹೋಗಿತ್ತು. ಪೆನ್ನನ್ನು ಮುಚ್ಚಿ ಯಥಾಸ್ಥಾನದಲ್ಲಿಟ್ಟು ಕುರ್ಚಿಯಲ್ಲಿ ಸರಿಯಾಗಿ ಒರಗಿಕೊಂಡು ನಾನಷ್ಟ್ರಹರು ಸುದೀರ್ಘ ಉಪದೇಶಾಮೃತವನ್ನೇ ಇವರ ಮುಂದೆ ಬಿಚ್ಚಿ ಬಿಡಬೇಕೆಂದು ತಯಾರಾದೆ. ಅಷ್ಟಕ್ಕಾಗಿ ನಾನು ಬಾಯಿ ತೆರೆ [illegible] 'ಮಾವಾ, ಮಾವಾ, ಗಂಟೆ ಎಷ್ಟಾಯಿತು?' ಎಂದು ಕೇಳಿದನು.

ಗಂಟೆ ನೋಡಿದೆ. [illegible]

ಟಾಕಿಯು ಹೊರಹೋದ ಬಳಿಕ ನನ್ನ ತಲೆಯಲ್ಲಿದ್ದ ಉಪದೇಶಾಮೃತ [illegible] ಡುವನ್ನು ಕಂಡೆ. ಅಂತೂ ಹೇಗಾದರೂ ಅದನ್ನೆಲ್ಲಾ ಕೇಂದ್ರೀಕರಿಸಿ ಕಾರಲಾರಂಭಿಸಿದೆ. "ನೋಡಿ, ನಿಜವಾಗಿಯೂ ನನಗೆ ಸಮಯವೇ ಸಿಗುವುದಿಲ್ಲ. ನನ್ನೊಡನೆ ಹಣವೂ ಇಲ್ಲ. [illegible] ಸ್ವಲ್ಪ ಇದ್ದರೂ ನನಗೀಗ ಸಲ ಟಿಕೇಟು ಪಡೆಕೊಳ್ಳಲು ಸಾಧ್ಯವಿಲ್ಲ. ಮೊನ್ನೆ 'ನೆರೆ ನಿವಾರಣ' ಸಂಘದವರಿಗೆ ನಾನು ಕೊಡಬಹುದಾಗಿದ್ದುದಕ್ಕಿಂತ ಮಿಕ್ಕಿಯೇ ಕೊಟ್ಟಿರುವೆನು. ಅದ್ದರಿಂದ ದಯವಿಟ್ಟು ನನಗುಪದ್ರ ಕೊಡಬೇಡಿ" ಎಂದು ಹೇಳಿ ಸ್ವಲ್ಪ ಕಾದೆ. ಆದರೆ ಅವರು ಮುತ್ತು ಕದಲದೆ, ಇರುವುದನ್ನು ನೋಡಿ "ನಾನೀಗ ವಿಶೇಷ ಕಾರ್ಯದಲ್ಲಿ ಮಗ್ನನಾಗಿರುವುದು ಕಾಣುವುದಿಲ್ಲವೆ? ಟಿಕೇಟು ನನಗೆ ಮಾರಿ ಹೋಗುವ ಯೋಚನೆ ಬಿಟ್ಟುಬಿಟ್ಟು ಇಲ್ಲಿಂದ ಚಿತ್ತೈಸಿದರದೆ" ಎಂದು ಗಂಭೀರವಾಗಿ ಹೇಳಿದೆ. ಆದರೆ ಅನುನಿತ್ಯವೂ ವಂತಿಕೆಪಟ್ಟಿ ಹಿಡಿದು ಬೇಡುವ ಮಹಾಶಯರು ಇತರರ ಸಮಯದ ಬೆಲೆಯನ್ನರಿಯದಿರುವುದು ಆಶ್ಚರ್ಯವಲ್ಲ. ಇದು ಅವರಿಗೊಂದು ಸಾಮಾನ್ಯ ವಿಚಾರ.

ಇಷ್ಟಾದರೂ ಈ ಮಹಾತ್ಮರು ಅಲ್ಲಿಂದ ಕದಲುವ ಯೋಚನೆಯಲ್ಲಿದ್ದಂತೆ ತೋರಲಿಲ್ಲ. ಮಾತ್ರವಲ್ಲದೆ ಅಗ ಒಂದನೆಯದವನು ಮೂರು ರೂಪಾಯಿಯ ಟಿಕೇಟು ಪುಸ್ತಕವೊಂದನ್ನು ತೆಗೆದು "ಸರಿ, ಇದರಿಂದೊಂದಾದರೂ ತೆಗೆದು ಕೊಳ್ಳಿ" ಎಂದು ಉದಾರಭಾವದಿಂದ ಹೇಳುವಾಗ ಅವನ ಮುಖದಲ್ಲಿ ತಾನು ಹತ್ತು ರೂಪಾಯಿಯಿಂದ ಮೂರು ರೂಪಾಯಿಗಿಳಿದು ನನಗೊಂದು ಉದಾರದಾನ ಮಾಡುವ ಭಾವವು ತೋರಿ ಬರುತಿತ್ತು.

ನಾನಾಗ ತಡೆಯಲಾರದೆ ಕುರ್ಚಿಯಲ್ಲಿ ಗಂಭೀರವಾಗಿ ಕುಳಿತು, ಅವರ ಕೈಗಳನ್ನು ಒತ್ತಿ ಹಿಡಿದು, ಆ ಮೂವರನ್ನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತ, ಸ್ವರ ಸರಿ ಮಾಡಿಕೊಂಡು, "ನೋಡಿ. ಈ ಸಹಾಯಾರ್ಥ ನಾಟಕಗಳಲ್ಲಿ ನನಗೆ ಎಳ್ಳಷ್ಟೂ ವಿಶ್ವಾಸವಿಲ್ಲ. ಕೇಂದ್ರ ಕಮಿಟಿಗೆ, ಸ್ವತಃ ಅಥವಾ ಬೇರ ಮೂಲಕ ಬರೀ ನಾಲ್ಕಾಣೆಯನ್ನು ನಾನು ಕಳುಹಿಸಿದರೂ ಅದು ಅದರ ನಿಜ ಉದ್ದೇಶಕ್ಕಾಗಿ ಸಂಪೂರ್ಣ ವಿನಿಯೋಗಿಸಲ್ಪಡುವುದೆಂಬ ಧೈರ್ಯವಿದೆ. ಆದರೆ ನಿಮ್ಮಿಂದ ನಾನು ಹತ್ತು ರೂಪಾಯಿಯ ಟಿಕೇಟೊಂದನ್ನು ಪಡೆಕೊಂಡರೆ ಬರೀ ಹತ್ತು ಪೈಗಳು ಮಾತ್ರ ಅಲ್ಲಿಗೆ ಕಳುಹಿಸಲ್ಪಟ್ಟು ಉಳಿದ ರೂ ೯-೧೫-೩ ಗಳು ಪ್ರದರ್ಶನದ ಹೆಸರಲ್ಲಿ ನಿಮ್ಮಿಂದ ಖರ್ಚು ಅಥವಾ ಹಾಳು ಮಾಡುತ್ತದೆಂದು ನನಗೆ ಗೊತ್ತು. ಬರಗಾಲ ನಿರಾಶ್ರಿತರನ್ನು ಯೋಚಿಸಿಕೊಂಡು ನೀವಾದರೂ ಆಹಾರ ವಿಹಾರಗಳಲ್ಲಿ ಖರ್ಚು ಕಡಿಮೆ ಮಾಡುವ ಯೋಚನೆಯು ನಿಮಗಿರುವುದಿಲ್ಲ. ಒಂದು ಪಾವಾಣೆಯ ಬೀಡ ತೆಗೆದುಕೊಂಡರೂ ಅದನ್ನು ಈ ವಂತಿಗೆ ಹಣದಿಂದಲೇ ತೆಗೆಯುವಿರಿ. ನಿಮ್ಮ ಈ ದುಂದುಗಾರಿಕೆಗಳಿಗಾಗಿ—"

"ಮಾವಾ! ಮಾವಾ! ಗಂಟೆ ಎಷ್ಟು?" ಪುನಃ ಟಾಕಿಯು ಬಂದು ಕೇಳಿದ. ಇದೀಗ— ಭಾಷಾ ವೇಗಕ್ಕೆ ಸರಿಯಾದ [illegible] 'ಸಡನ್ ಬ್ರೇಕ್' [illegible] ಕೂಡ್ಲೆ ವಾಚಿನತ್ತ ನೋಡಿ 'ಒಂಭತ್ತು ಗಂಟೆ' ಎನ್ನುತ್ತ "ಏನಿನ್ನು ಮುಂದುಗಾರಿಕೆ—"

"ಆಗ ಕೇಳಿದರೂ ಒಂಭತ್ತು ಘಂಟೆ, ಈಗಲೂ ಒಂಭತ್ತು. ನಿನ್ನ ವಾಚು ನಿಂತಿದೆಯೋ ಏನಾ?" ಟಾಕಿಯು ನನ್ನ ಭಾವಾವೇಶ [illegible]

[illegible]

ಟಾಕಿಯು ನಗುತ್ತ ಹೋದ. [illegible]

[illegible]

[illegible] ಎಂದು ಕೇಳಿದೆ.

* * *

[illegible] ಆ ಕಾಗದವನ್ನು [illegible] ಎಂದು ಕೇಳಿದೆ. ಆ ಕಾಗದವನ್ನು [illegible] ಆದರೆ ಅದು [illegible] ಗಾಳಿಗೆ ಇದೀಗ ಕೋಣೆ [illegible]

"ಅಯ್ಯೋ!— ಎಂಥಾ ಮೂರ್ಖ ನಾನು. ಒಂದು ಕಾಸಕಾಸುಬಿಟ್ಟ [illegible] ಎಷ್ಟು ಅನುಕೂಲವಿತ್ತು!—ಎಷ್ಟು ಹುರುಪಿನಿಂದ ಇಂದು ಬೆಳಿಗ್ಗೆ ಎದ್ದೆ. ಆದರೆ ಆ ಅನಿಷ್ಟ ಟಿಕೇಟುವಾಲರು ಎಲ್ಲಾ ಹಾಳು [illegible] ಬಿಟ್ಟರು! ಇರಲಿ, ಕಥೆಯು ದಕ್ಷಿಣ ಧರಿಕವಾಗುವ ಬದಲು, ಕೆಲವು ಕಪಟರಿಕವಾಗಿಯೇ ಇರಲಿ. [illegible] ಅದನ್ನು ಹೆಕ್ಕಲು ಹೋಗಲಿಕ್ಕಿಲ್ಲ!" ಹೀಗೆಲ್ಲಾ ತಲೆಯಲ್ಲಿ ತಿರುಗುತ್ತಿರುವಾಗ ನನ್ನ [illegible] ಕರಲು ತುಂಬಾ [illegible] ಕಾಫಿ ಕುಡಿದುಳಿದ ಆ [illegible] ದನ್ನೇ ಬೀಸಾಡಿ ಒಡೆಯಬೇಕೋ ಎಂದು ತೋರಿತು. ನಿಜವಾಗಿಯೂ ನಾನು ಹಾಗೆ ಮಾಡಿಯೇ ಬಿಡಬಹುದೆಂದು ಹೆದರಿ ಥಕ್ಕನೆ ಎದ್ದು ಹಾಸಿಗೆಯ ಮೇಲೆ ಹೋಗಿ ಅಂಗಾತ, ನೆಟ್ಟಗೆ ಮಲಗಿಯೇ ಬಿಟ್ಟೆ.

ಕಳೆದ ಹಲವು ದಿನಗಳು ಮಿಡಿನೋಟಿಕೆ ಉರಿಯಿಂದಾಗಿ ದುರ್ದಿನಗಳಾಗಿದ್ದುವು. ಇಂದೇನೋ, ಮೊದಗಳು ಕಪಿದು, ತಂಗಾಳಿಯು ಬೀಸುವ ಸುಪ್ರಭಾತವು ಒದಗಿದೆ. ಕತೆ ಬರೆಯಲನುಕೂಲವಾದ ಸುಯೋಗ್ಯ ಸುವು [illegible] ವೃಥಾ ವ್ಯರ್ಥವಾಯಿತು. ಈಗಾಗಲೇ ಮರಳಿ ಉರಿಯು ಏರುತಲಿದೆ. ಇನ್ನು ಹಲದಿನಗಳ ವರೆಗೆ ಇಂದಿನಂತಹ ಸುಸಮಯವು ದೊರೆಯದೆಯೇ ಇರಬಹುದು. ಅಯ್ಯೋ! ನನ್ನ ಎಳಗಳು ಗತಿಯೋ!

ಇಷ್ಟರಲ್ಲಿ ಪುನಃ ಪ್ರಶಾಂತ ಮಾರುತನು ನನ್ನ ಮನಸ್ಸಿನ ಆವೇಗವನ್ನು ಮೆಲ್ಲಗೆ ಕೆಳಗಿಳಿಸಿದಂತೆ ತೋರಿತು. ತಲೆಯು ಶಾಂತವಾಗುತ್ತಿರುವಂತಾಯಿತು. ಅಷ್ಟರಲ್ಲಿ "ಮಾವಾ! ಮಾವಾ!" ಎಂಬ ಎಳದನಿಯೊಂದು ಕೇಳಿಸಿತು. ಥಕ್ಕನೆ ತಲೆಗೆ ಉರಿಯೇರಿದಂತಾಗಿ ಅತ್ತಿತ್ತ ನೋಡದೆ "ಒಂಭತ್ತು ಕಾಲು" ಎಂದೆ.

"ಹಾಗಾದರೆ ಶಾಲೆಗೆ ಹೋಗಲು ಇನ್ನು ತುಂಬಾ ಸಮಯವಿದೆ ಮಾವಾ!" ಟಾಕಿಯು ಹೇಳಿದ. ನನಗಾಗ ಮಾತಾಡಲು ಸ್ವಲ್ಪವೂ ಉತ್ಸಾಹವೂ ಎಳ್ಳಷ್ಟೂ ಇದ್ದಿಲ್ಲ. ಅರ್ಧತೆರೆ ಕಣ್ಣು ಮುಚ್ಚಿದೆ. ಮೆಲ್ಲನೆ ಮೂಗಿನಿಂದ "ಹುಂ" ಎಂದೆ.

"ಮಾವಮಾವಾ" ಟಾಕಿಯು ಆರಂಭಿಸಿದ. "ಮಾವಮಾವ!— ಸತ್ಯ— ಏನು ಬೇಕು ನಿನಗೆ ಏನಾಗಿದೆ ನಿನಗೆ? ಬಾ. ಬಾ. ಇಲ್ಲಿ." ಎಂದೆನ್ನೆ.

ಟಾಕಿಯು ಅರ್ಧ ಹೆದರುತ್ತಾ, ಮೆಲ್ಲಗೆ ಪುಸ್ತಕ ಒಂದನ್ನು ತೋರಿಸುತ್ತಾ, "ಮಾವಮಾವ. ಸ್ವಲ್ಪ ನನಗೆ ಇಂದಿನ ಇಂಗ್ಲಿಷ್ ಪಾಠವನ್ನು ಓದ ಕಲಿಸುವಿರೋ?"

"ಅದಕ್ಕೆ ನನ್ನ ಹತ್ತಿರ ಹಾಗೆ ಬಂದೆ? ಇನ್ನೇ ಮನೆಯಲ್ಲಿ ನಿನಗೆ ಬೇರೆ ಯಾರೂ [illegible] ನಿನಗೆ ಸುಖ [illegible] ಹತ್ತಿರ ಕೇಳಿ ಕಲಿಯಲಿಕ್ಕಾಗು ವುದಿಲ್ಲವೆ? ನನ್ನೀ [illegible] ನಿನಗೆ 'Cat kills the rat' [illegible] ಮಾಡಬೇಕೇ? ಹುಂ- ?"

[illegible] ಟಾಕಿಯು "ದೊಡ್ಡಪ್ಪ ನಿನ್ನ ಹತ್ತಿರ ಹೋಗಬೇಕೆಂದರು"

"ಹೋಗು. ದೊಡ್ಡಪ್ಪನ ಹತ್ತಿರ ಹೇಳು. [illegible] ಹೋಗಿ [illegible] ಎಂದು ಹೇಳು.. ಹೋಗು. [illegible]

(ಇನ್ನೂ ಇದೆ)

ಪರಿಶಿಷ್ಟ ವರ್ಗದವರಿಗೆ ಹತ್ತು ವರುಷ ಮಾತ್ರ ಪ್ರತ್ಯೇಕ ಪ್ರಾತಿನಿಧ್ಯ

ಘಟನಾಸಮಿತಿಯಲ್ಲಿ ಮಹತ್ವದ ನಿರ್ಣಯ

ಕಾಂಗ್ರೆಸ್ ವರಿಷ್ಠರಲ್ಲಿ ಕರ್ನಾಟಕದ ಶಿಷ್ಟಮಂಡಲ

ಘಟನಾ ಸಮಿತಿಯಲ್ಲಿ

ಘಟನಾಸಮಿತಿಯಲ್ಲಿ ಹಿಂದುಸ್ತಾನದ ಭಾವೀ ರಾಜ್ಯಘಟನೆಯ ಕಲಮುಗಳ ಚರ್ಚೆ ಮುಂದೆ ಸಾಗಿದೆ. ಶಾಸನಸಭೆಗಳಲ್ಲಿ ಹಿಂದು ಮತ್ತು ಶೀಖ ಪರಿಶಿಷ್ಟ ವರ್ಗಗಳ ಹೊರತಾಗಿ ಉಳಿದ ಅಲ್ಪಸಂಖ್ಯರಿಗೆ ಸ್ಥಳಗಳನ್ನು ಕಾದಿಡುವದನ್ನು ರದ್ದುಪಡಿಸಬೇಕು ಎಂದು ಸಲಹೆ ಸಮಿತಿಯವರು ಮಾಡಿದ ವರದಿಯ ಮೇಲೆ ಚರ್ಚೆ ನಡೆಯಿತು. ಈ ರೀತಿ ಸ್ಥಳಗಳನ್ನು ಕಾದಿಟ್ಟಿದ್ದಾದರೆ ೧೦ ವರುಷಗಳನಂತರ ಅದು ತಂತಾನೆ ಹೋಗಬೇಕು ಎಂದು ಪಂ. ಠಾಕೂರದಾಸರು ತಿದ್ದುಪಡಿ ತಂದಿದ್ದರು. ಅಲ್ಪಸಂಖ್ಯರಿಗೆ ಪ್ರತ್ಯೇಕ ಮತದಾರಸಂಘಗಳನ್ನು ಹಾಗೆಯೇ ಸಾಗಿಸಿಕೊಂಡು ಹೋಗಬೇಕೆಂದು ಮದ್ರಾಸಿನ ಮಹಮ್ಮದ ಇಸ್ಮಾಯಿಲರು ಉಪಸೂಚನೆ ತಂದಿದ್ದರು. ಬಹುಸಂಖ್ಯಾಕ ಮತದಾರಸಂಘಗಳಲ್ಲಿ ಸಾಮೂಹಿಕ ಮತಪದ್ಧತಿ ಪ್ರಾರಂಭಿಸಬೇಕೆಂದು ಯುಕ್ತಪ್ರಾಂತದ ಲಾರಿಯವರು ಮತ್ತೊಂದು ತಿದ್ದುಪಡಿ ತಂದಿದ್ದರು. ಈ ತಿದ್ದುಪಡಿ ಮತ್ತು ಮೂಲ ಸೂಚನೆಯ ಮೇಲೆ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಸಲಹೆ ಸಮಿತಿಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ಅಲ್ಪಸಂಖ್ಯರ ವಿಷಯಕ್ಕೆ ಬಹುಸಂಖ್ಯರು ಔದಾರ್ಯವನ್ನು ತೋರಿಸಬೇಕು. ಅಲ್ಪಸಂಖ್ಯರ ಹಿಂದಿನದೆಲ್ಲವನ್ನು ಮರೆತುಬಿಡಬೇಕು ಎಂದು ಸಲಹೆ ಇತ್ತರು. ಈ ಸೂಚನೆಯನ್ನು ಹರಿಜನಸದಸ್ಯರು ಸ್ವಾಗತಿಸುತಿದ್ದು ಮುಸಲ್ಮಾನರು ಇದನ್ನು ವಿರೋಧಿಸುತ್ತಿರುವರು. ಚರ್ಚೆಯ ಕೊನೆಯಲ್ಲಿ ಸರದಾರರು ಉತ್ತರ ಕೊಟ್ಟನಂತರ ಪಂಡಿತ ಠಾಕುರದಾಸರ ತಿದ್ದುಪಡಿಯೊಂದಿಗೆ ಮೂಲ ಸೂಚನೆ ಸ್ವೀಕೃತವಾಯಿತು.

೨೪ ನೇ ತಾರೀಖು ವರಿಷ್ಠ ನ್ಯಾಯಮಂಡಲ ಸ್ಥಾಪನೆಯ ಕಲಮಿನ ಚರ್ಚೆ ನಡೆದು ಅದು ಸ್ವೀಕೃತವಾಯಿತು. ಸ್ವೀಕೃತವಾದ ಕಲಮಿನಲ್ಲಿ ಹಿರಿಯೋಲಗದಿಂದ ನ್ಯಾಯಾಧೀಶರ ಹೆಚ್ಚಿನ ಸಂಖ್ಯೆ ನಿರ್ದಿಷ್ಟವಾಗುವ ವರೆಗೆ ಹಿಂದುಸ್ತಾನದ ಮುಖ್ಯ ನ್ಯಾಯಾಧೀಶರು ಹಾಗು ಇತರ ನ್ಯಾಯಾಧೀಶರನ್ನೊಳಗೊಂಡು ವರಿಷ್ಠ ನ್ಯಾಯಾಲಯವನ್ನು ಸ್ಥಾಪಿಸಬೇಕು. ನ್ಯಾಯಾಧೀಶರನ್ನು ಅಧ್ಯಕ್ಷರು ಮುಖ್ಯ ನ್ಯಾಯಾಧೀಶರೊಂದಿಗೆ ವಿಚಾರವಿನಿಮಯ ಮಾಡಿ ನೇಮಿಸಬೇಕು ಎಂದು ಹೇಳಲಾಗಿದೆ. ಮೂಲ ಸೂಚನೆಗೆ ಒಟ್ಟು ೩೮ ತಿದ್ದುಪಡಿಗಳು ಬಂದದ್ದರಿಂದ ದೀರ್ಘ ಭಾಷಣ ಮಾಡಬಾರದೆಂದು ಅಧ್ಯಕ್ಷರು ಆಗಾಗ ಹೇಳಬೇಕಾಗುತಿದ್ದಿತು.

ಪಾರ್ಲಿಮೆಂಟಿನ ಬಿಡುವಿನಲ್ಲಿ ಅಧ್ಯಕ್ಷರು ಸುಗ್ರೀವಾಜ್ಞೆಗಳನ್ನು ಹೊರಡಿಸಲು ೧೦೩ ನೇ ಕಲಮು ಅಧಿಕಾರಕೊಡುತ್ತದೆ. ಈ ಕಲಮಿಗೆ ಬಂದ ತಿದ್ದುಪಡಿಗಳೆಲ್ಲ ನಿರಾಕೃತವಾಗಿ ಮೂಲ ಸೂಚನೆ ಸ್ವೀಕೃತವಾಯಿತು. ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸಬೇಕೆಂಬ ಹೊಸ ಕಲಮನ್ನು (೧೦೩ ಅ) ಸೇರಿಸಬೇಕೆಂದು ಶ್ರೀ ಕೆ. ಟಿ. ಶಹಾರು ತಂದಿದ್ದ ಸೂಚನೆ ನಿರಾಕೃತವಾಯಿತು.

ಲಂಡನ ನಿರ್ಣಯಕ್ಕೆ ಮನ್ನಣೆ

ಕಾಮನವೆಲ್ತ ಪರಿಷತ್ತಿನ ಲಂಡನ ನಿರ್ಣಯದ ಬಗ್ಗೆ ತಾ|| ೧೬—೧೭ ಎರಡು ದಿನ ಸುದೀರ್ಘ ಚರ್ಚೆಯಾಗಿ ಅದಕ್ಕೆ ಒಪ್ಪಿಗೆದೊರೆಯಿತು. ಚರ್ಚೆಗೆ ಉತ್ತರಕೊಡುತ್ತ ಮುಖ್ಯಮಂತ್ರಿ ಜವಾಹರಲಾಲರು ಕೇವಲ ಒಂದು ಪಕ್ಷದ ದೃಷ್ಟಿಯಿಂದಇದನ್ನು ನೋಡಬಾರದು. ದೇಶದ ಅಂತರಿಕ ಧೋರಣದ ಬಗ್ಗೆ ಸಾಕಷ್ಟು ಮತಭೇದ ಕಂಡುಬರಬಹುದು. ಆದರೆ ವಿದೇಶಧೋರಣದ ಬಗ್ಗೆ ಏಕರೂಪತೆ ಕಂಡುಬರಬೇಕೆಂದು ನನಗೆ ಎನಿಸುತ್ತದೆ. ಹಿಂದುಸ್ತಾನವನ್ನು ಬಿಟ್ಟು ಬೇರೆ ರಾಷ್ಟ್ರಗಳತ್ತ ನೋಡುವ ಜನರೊಂದಿಗೆ ಮತ್ಯೆಕ್ಯವಾಗುವದು ಸಾಧ್ಯವಿಲ್ಲ. ಆದರೆ ಹಿಂದುಸ್ತಾನದ ಭವಿತವ್ಯವನ್ನು ಸ್ವಾತಂತ್ರ್ಯವನ್ನೊಪ್ಪುವವರಿಗೆ ನಮ್ಮ ವಿದೇಶಧೋರಣದಲ್ಲಿ ವ್ಯತ್ಯಾಸ ಕಂಡು ಬರಬಾರದೆಂದು ಮುಂತಾಗಿಹೇಳಿದರು. ಕಾಮನ್‌ವೆಲ್ತದ ಘೋಷಣೆಯು ನಮ್ಮ ಹಳೆಯ ಪ್ರತಿಜ್ಞೆಗಳಿಗೆ ಬಾಧಕವೂ ಇದ್ದಿಲ್ಲ. ಹಿಂದುಸ್ತಾನದ ಸ್ವಾತಂತ್ರ್ಯ ಸಾರ್ವಭೌಮತ್ವಗಳಿಗೆ ನಿರ್ಬಂಧ ತಂದೊಡ್ಡುವಂತೆಯೂ ಇರಲಿಲ್ಲ. ಕಾಮನ್‌ವೆಲ್ತದಲ್ಲಿರುವದು ಹಿಂದುಸ್ತಾನಕ್ಕೆ ಸದ್ಯಕ್ಕೆ ಹಿತಕರವಾಗಿದೆ. ನಿಷೇಧಾರ್ಥದಲ್ಲಿ ಹೇಳಬೇಕೆಂದರೆ ಈ ಕಾಮನವೆಲ್ತದ ಸಂಬಂಧವಿದ್ದಿರದಿದ್ದರೆ ಜಾಗತಿಕ ಸಮಸ್ಯೆಗಳಿಗೆ ವಿಘ್ನವುಂಟಾಗುತಿತ್ತು ಎಂದು ಮುಂತಾಗಿ ಪಂಡಿತ ಜವಾಹರಲಾಲರು ಹೇಳಿಕೆಯನ್ನು ಕೊಡುತ್ತ ಚರ್ಚೆಯನ್ನು ಪ್ರಾರಂಭಿಸಿದ್ದರು. ಬಂದ ತಿದ್ದುಪಡಿಗಳೆಲ್ಲ ನಿರಾಕೃತವಾಗಿ ಮೇಲೆ ಹೇಳಿದಂತೆ ಒಡಂಬಡಿಕೆಗೆ ಮನ್ನಣೆ ಕೊಡಲಾಯಿತು.

ಏಕೀಕರಣಶಿಷ್ಟಮಂಡಲ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸು ನೇಮಿಸಿದ್ದ ಕರ್ನಾಟಕ ಏಕೀಕರಣ ಶಿಷ್ಟಮಂಡಲವು ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲಿ ಕಾಂಗ್ರೆಸ ಕಾರ್ಯ ಸಮಿತಿಯ ಸದಸ್ಯರನ್ನೂ ಕಾಂಗ್ರೆಸ ವರಿಷ್ಠರನ್ನೂಕಂಡು ಸ್ವತಂತ್ರ ಕರ್ನಾಟಕಪ್ರಾಂತದ ಬಗ್ಗೆ ಕನ್ನಡಿಗರು ಎಷ್ಟು ಆತುರರಾಗಿರುವರೆಂಬುದನ್ನು ಒತ್ತಿ ಹೇಳಿತು.

ಶನಿವಾರ ದಿನ ಡೆಹರಾಡೂನಿನಲ್ಲಿ ಶಿಷ್ಟಮಂಡಲವು ಕಾಂಗ್ರೆಸ ಕಾರ್ಯ ಸಮಿತಿಗೆ ಒಪ್ಪಿಸಿದ ಮನವಿಯಲ್ಲಿ, ಕರ್ನಾಟಕ ಪ್ರಾಂತ ರಚನೆಯ ಬೇಡಿಕೆ ನ್ಯಾಯವಾಗಿದೆ, ಈಗ ಈ ಬೇಡಿಕೆಯನ್ನು ಮನ್ನಿಸದಿದ್ದರೆ ಜನರಲ್ಲಿ ಅತೀವ ನಿರಾಶಾಭಾವನೆಗೆ ಅವಕಾಶವುಂಟಾಗುವದು; ಭಾಷಾವಾರ ಪ್ರಾಂತ ರಚನೆಯನ್ನು ಮಾಡುವಾಗ ಎಲ್ಲ ಪ್ರಾಂತಗಳನ್ನು ಒಮ್ಮೆಲೆ ಮಾಡುವದು ಅವಶ್ಯವಾಗಿದೆ ಎಂದು ಮುಂತಾಗಿ ಪ್ರತಿಪಾದಿಸಲಾಗಿದೆಯೆಂದು ತಿಳಿಯುತ್ತದೆ. ಕನ್ನಡಿಗರ ಬೇಡಿಕೆ ನ್ಯಾಯ್ಯವಾಗಿದೆ- ಎಂದು ಕಾರ್ಯ ಸಮಿತಿಗೆನಿಸಿದೆಯೆಂದೂ ಜುಲೈ ತಿಂಗಳ ಮೊದಲ ವಾರದಲ್ಲಿ ಕಾರ್ಯಸಮಿತಿಯು ಸಭೆ ಸೇರಿ ಈ ಮನವಿಯನ್ನು ಕೂಲಂಕಷವಾಗಿ ವಿಚಾರಿಸುವದೆಂದೂ ತಿಳಿಯುತ್ತದೆ. ಅಲ್ಲಿಯವರೆಗೆ ಪ್ರಾಂತೀಯ ಕಾಂಗ್ರೆಸ ಸಮಿತಿ ಅನಿವಾರ್ಯವಾಗಿ ಕಾಯಬೇಕಾಗುತ್ತದೆಂದೂ ಹೇಳಲಾಗುತ್ತದೆ. ಈ ಮಧ್ಯಾವಧಿಯಲ್ಲಿ ಭಾಷಾವಾರ ಪ್ರಾಂತ ರಚನೆಯಲ್ಲಿ ಆಸಕ್ತಿಯುಳ್ಳವರು ಒಂದೆಡೆ ಸೇರಿ ಗಡಿಗಳನ್ನು ಗೊತ್ತುಪಡಿಸಿಕೊಳ್ಳುವ ಪ್ರಯತ್ನಗಳು ನಡೆಯಬಹುದೆಂದೂ ತೋರುತ್ತದೆ. ಇಪ್ಪತ್ತೊಂದನೆಯ ತಾರೀಕಿನ ದಿನ ಶಿಷ್ಟಮಂಡಲದವರು ಸರದಾರ ವಲ್ಲಭಭಾಯಿಯವರನ್ನು ಪ್ರತ್ಯೇಕವಾಗಿ ಕಂಡು ತಮ್ಮ ಬೇಡಿಕೆಯನ್ನು ನಿವೇದಿಸಿದರು. ಸರದಾರರು ಸಹಾನುಭೂತಿಯಿಂದಅವರ ಹೇಳಿಕೆಯನ್ನು ಕೇಳಿಕೊಂಡರು. ಮಂಡಲದವರು ಘಟನಾಸಮಿತಿಯ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರನ್ನೂ ಕಂಡು ಮಾತುಕತೆಯಾಡಿದರು. ಪಂಡಿತ ಜವಾಹರಲಾಲರನ್ನು ಭೆಟ್ಟಿಯಾದಾಗ ಅವರು ಕರ್ನಾಟಕ ಪ್ರತ್ಯೇಕ ಪ್ರಾಂತವಾಗಲಿದೆಯೆಂದೂ ಮೈಸೂರಿನ ಭವಿತವ್ಯದ ನಿರ್ಣಯವು ಬರುವ ಆರು, ಹನ್ನೆರಡು ಇಲ್ಲವೆ ಹದಿನೆಂಟು ತಿಂಗಳುಗಳಲ್ಲಿ ಆಗುವದೆಂದೂ ಹೇಳಿದರೆಂದು ತಿಳಿದು ಬರುತ್ತದೆ.

ಮೈಸೂರಿನ ಭವಿತವ್ಯ

ಮುಖ್ಯಮಂತ್ರಿ ಪಂಡಿತಜವಾಹರಲಾಲರು ಮೈಸೂರಿನ ಬಗ್ಗೆ ಈ ರೀತಿ ಅಭಿಪ್ರಾಯಪಡುತಿರುವ ಸಮಯದಲ್ಲಿಯೆ ಸಂಸ್ಥಾನ ಖಾತೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್‌ರು ಬೆಂಗಳೂರಿಗೆ ಹೋಗಿ ಮಹಾರಾಜರನ್ನು ಮತ್ತು ಮಂತ್ರಿಗಳನ್ನು ಕಂಡರು. ಗವರ್ನರ ಜನರಲ್ ರಾಜಾಜಿಯವರು ಒಂದು ವಾರ ಬೆಂಗಳೂರಿನಲ್ಲಿ ಬೀಡಾರ ಬಿಟ್ಟು ಮಹಾರಾಜಾದಿಗಳನ್ನು ಭೆಟ್ಟಿಯಾದರು. ಈ ಭೆಟ್ಟಿ, ಮಾತುಕತೆಗಳ ಬಗ್ಗೆ ಬಗೆ ಬಗೆಯಾಗಿ ಊಹಿಸಲಾಗುತ್ತದೆ. ಸಂಸ್ಥಾನಗಳಿಗಾಗಿ ಹೊಸಕರಾರನ್ನು ಭಾರತ ಸರಕಾರವು ತಯಾರಿಸಿದ್ದು ಅದಕ್ಕೆಎಲ್ಲ ಸಂಸ್ಥಾನಗಳುಒಪ್ಪಿಗೆಇತ್ತಿವೆ. ಮೈಸೂರಮಹಾರಾಜರಿಗೂ ಇದನ್ನು ತಿಳಿಸಲು ಬಂದಿದ್ದೇನೆ. ಸಂಸ್ಥಾನದ ಹಣಕಾಸು ಆಡಳಿತ, ಶಾಸನಾಂಗ ಈ ವಿಷಯಗಳು ಎಲ್ಲ ಕಡೆಯಲ್ಲಿಯೂ ಒಂದೇ ವಿಧವಾಗಿರಬೇಕೆಂದು ಸರಕಾರದ ಅಭಿಪ್ರಾಯ. ಮೈಸೂರಿನ ಆಡಳಿತ ಮೊದಲಿನಿಂದಲೂ ಬಹಳ ಮುಂದುವರಿದದ್ದರಿಂದ ಈಗ ಹೆಚ್ಚಿನ ಬದಲಾವಣೆಯನ್ನೇನೂ ಮಾಡುವ ಅವಶ್ಯಕತೆಯಿರಲಾರದು. ಭಾಷಾನ್ವಯ ಪ್ರಾಂತರಚನೆಯ ನೀತಿಯನ್ನೇ ಮೈಸೂರಿನ ಭವಿತವ್ಯವು ಅವಲಂಬಿಸಿದೆ ಎಂದು ಮುಂತಾಗಿ ವಿ. ಪಿ. ಮೆನನ್‌ರು ೨೩ ಕ್ಕೆ ಪತ್ರಿಕಾ ಪ್ರತಿನಿಧಿಗಳಿಗಿತ್ತ ಸಂದರ್ಶನದಲ್ಲಿ ಹೇಳಿದರು. ಮೆನೆನ್‌ರ ಭೆಟ್ಟಿಯ ಉದ್ದೇಶವು ಕರ್ನಾಟಕದಲ್ಲಿ ಮೈಸೂರು ವಿಲೀನವಾಗುವದಕ್ಕೇನೂ ಸಂಬಂಧಿಸಿಲ್ಲ ಎಂದು ಹೇಳಲಾಗುತ್ತದೆ. ಇತ್ತ ಮೈಸೂರಿನ ಸದ್ಯದ ಧುರೀಣರಾದರೂ ಮೈಸೂರನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳಬೇಕೆಂದು ಬಯಸುತ್ತಾರೆ. ಈ ಬಗ್ಗೆ ಮೈಸೂರಿನ ಮಂತ್ರಿಗಳೊಬ್ಬರನ್ನು ಕಂಡಾಗ ಎಲ್ಲ ಸಂಸ್ಥಾನಗಳು ವಿಲೀನವಾದರೂ ಮೈಸೂರನ್ನು ಹಾಗೆಯೇ ಇಟ್ಟು ಅದರ ವೈಶಿಷ್ಟ್ಯವನ್ನು ಏಕೆ ಉಳಿಸಿಕೊಳ್ಳಬಾರದು ಎಂದು ಕೇಳಿದ್ದುಂಟು. ಕಾಲ ಬಂದಾಗ ಮೈಸೂರು ತಾನೇ ವಿಲೀನ ಹೊಂದುವದು ಅದಕ್ಕೆ ಅವಸರವೇಕೆ ? ಎಂದೂ ಹಲವರು ಕೇಳುವರು. ಅಂತೂ ಮೈಸೂರಿನ ಜನತೆಯಲ್ಲಿ ಇನ್ನೂ ಯಾವದೂ ನಿರ್ಧಾರವಾಗಿಲ್ಲ.

ಆಂಧ್ರದ ರಚನೆಯೂ ಇಲ್ಲ-

ಭಾರತ ರಾಜ್ಯಘಟನೆಯ ಕರಡು ಸ್ವೀಕೃತವಾಗುವ ಮುನ್ನ ಅದರಲ್ಲಿ ಆಂಧ್ರ ಪ್ರಾಂತ ಇಲ್ಲವೆ ಯಾವದೇ ಭಾಷಾವಾರ ಪ್ರಾಂತಗಳ ನಾಮನಿರ್ದೇಶ ಮಾಡಬಾರದೆಂದು ಸರಕಾರವು ನಿರ್ಧರಿಸಿದೆಯೆಂದು ತಿಳಿಯುತ್ತದೆ. ೨೯೦ ನೇ ಕಲ್ಮಿನನ್ವಯ ಕೂಡಲೆ ಆಂಧ್ರ ಪ್ರಾಂತವನ್ನು ರಚಿಸಬೇಕೆಂಬ ಆಂಧ್ರರ ಬೇಡಿಕೆಯು ನಿರಾಕೃತವಾಗಿದೆಯೆಂದು ಇದರಿಂದ ವ್ಯಕ್ತವಾಗುತ್ತದೆ. ಮದರಾಸ ನಗರದ ಬಗ್ಗೆ ಭಿನ್ನಾಭಿಪ್ರಾಯವಾದ್ದರಿಂದ ಸರಕಾರವು ಈ ನಿರ್ಣಯಕ್ಕೆ ಬಂದಿರುವದೆಂದು ಹೇಳಲಾಗುತ್ತದೆ. ಇತರ ಭಾಷಾನ್ವಯ ಪ್ರಾಂತಗಳಲ್ಲಿಯ ತಂಟೆಗಳನ್ನು ಬಗೆಹರಿಸಲು ಇದು ತಕ್ಕಸಮಯವಲ್ಲೆಂದೂ ಈ ತಂಟೆಗಳನ್ನು ಶಾಂತ ಮತ್ತು ಸೌಹಾರ್ದಯುತ ವಾತಾವರಣದಲ್ಲಿ ಬಗೆಹರಿಸಬೇಕಾಗಿದೆಯೆಂದೂ ಅವರ ಅಭಿಪ್ರಾಯವಂತೆ. ಅಂತೆಯೇ ಭಾಷಾನ್ವಯ ಪ್ರಾಂತರಚನೆಯ ಪ್ರಶ್ನೆಯನ್ನೇ ಮುಂದಕ್ಕೆ ಹಾಕಲಾಗಿದೆಯೆಂದು ಹೇಳಲಾಗುತ್ತದೆ.

ಪಾಕಿಸ್ತಾನದ ಧೋರಣೆ

ಪಾಕಿಸ್ತಾನವು ಬೇರೆಯಾಗಿದ್ದರೂ ಹಿಂದುಸ್ತಾನದ ಬಗ್ಗೆ ಅದರಲ್ಲಿ ಇನ್ನೂ ಸಂಶಯಬುದ್ಧಿ ದೂರವಾಗಿಲ್ಲ. ಪಾಕಿಸ್ತಾನಕ್ಕೆ ನಿಷ್ಠೆ ತೋರುವುದಿಲ್ಲೆಂದು ಡಾ. ಖಾನಸಾಹೇಬ ಖಾನ ಅಬ್ದುಲ್‌ಗಫರಖಾನ ಮತ್ತು ಕೆಂಪಂಗಿಯ ಸ್ವಯಂಸೇವಕರನ್ನು ಬಂಧನದಲ್ಲಿ ಇಡಲಾಗಿದೆ. ಇವರ ಮೇಲಿನ ಆರೋಪಗಳಾದರೋ ಸಿದ್ಧವಾಗಿಲ್ಲ. ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು ಈ ಬಗ್ಗೆ ಬರೆಯುತ್ತ ಡಾ. ಖಾನ ಸಾಹೇಬ ಮೊದಲಾದವರು ಪಾಕಿಸ್ತಾನದ ಬಗ್ಗೆ ನಿಷ್ಠೆ ತೋರಿದ್ದಾದರೆ ಅವರನ್ನು ಅನಿರ್ಬಂಧ ಬಿಡುಗಡೆ ಮಾಡಬೇಕೆಂದು ಅಭಿಪ್ರಾಯಪಟ್ಟಿದೆ. ಕಾಶ್ಮೀರದಲ್ಲಿ ಮತಗಣನೆ ನಡೆಯುವ ಸಂದರ್ಭದಲ್ಲಿ ಪಠಾಣರು ಬಂಡೇಳಬಹುದೆಂದು ಪಾಕಿಸ್ತಾನದ ಅಧಿಕಾರಿಗಳಿಗೆ ಭೀತಿಯುಂಟಾಗಿದೆಂದೂ ಅದರ ಅಭಿಪ್ರಾಯ. ಸರದಾರ ವಲ್ಲಭಭಾಯಿ ಪಟೇಲರೂ ಪಾಕಿಸ್ತಾನದ ಈ ಧೋರಣೆಯ ಬಗ್ಗೆ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುತ್ತ ಭಾರತವನ್ನು ಯಾವದೇ ರಾಷ್ಟ್ರದ ಸುಳ್ಳು ಅಥವಾ ಮೋಸಕ್ಕೆ ಬಲಿಬೀಳಗೊಡುವದಿಲ್ಲೆಂದು ಸಾರಿದ್ದಲ್ಲದೆ ವಿದೇಶದ ದಬ್ಬಾಳಿಕೆಯಿಂದ ಭಾರತವನ್ನು ರಕ್ಷಿಸುವದಕ್ಕಾಗಿ ಸಮರ್ಥ ಮತ್ತು ಬಲಿಷ್ಠ ಸೈನ್ಯವನ್ನಿಡಲು ಸರಕಾರವು ದೃಢ ನಿರ್ಧಾರ ಮಾಡಿದೆಯೆಂದೂ ಅವರು ನುಡಿದರು. ಪಾಕಿಸ್ತಾನದ ಸಂಬಂಧದಲ್ಲಿ ಮಾತಾಡುತ್ತ ಅವರು ಪಾಕಿಸ್ತಾನದ ಮೇಲೆ ದಾಳಿ ಮಾಡುವ ಇಚ್ಛೆ ನಮಗಿಲ್ಲ; ದೇಶದ ವಿಭಜನೆಯಾದಂದಿನಿಂದಲೂ ಪಾಕಿಸ್ತಾನ ವಹಿಸಿದ್ದ ಧೋರಣವನ್ನು ಹಾಗೆಯೇ ಮುಂಬರಿಸಿದ್ದಾದರೆ ಆತ್ಮರಕ್ಷಣೆಗಾಗಿ ಭಾರತವು ಯೋಗ್ಯವೆನಿಸಿದ ಕ್ರಮಗಳನ್ನು ಕೈಗೊಳ್ಳಬೇಕಾಗುವದೆಂದೂ ಎಚ್ಚರಿಕೆ ಕೊಟ್ಟರು. ಪಾಕಿಸ್ತಾನದ ಪ್ರಗತಿಗೆ ಭಾರತವು ಅಡ್ಡ ಬಂದಿದೆ ಎಂಬ ಪಾಕಿಸ್ತಾನದ ಆರೋಪವು ಹುಚ್ಚುತನದ್ದಿದ್ದು ಪಾಕಿಸ್ತಾನಕ್ಕೆ ಹಾನಿಗೀಡಾಗಿದ್ದರೆ ಅದರ ದೌರ್ಬಲ್ಯ ಮತ್ತು ಮೌಢ್ಯಗಳೇ ಅದಕ್ಕೆ ಕಾರಣವಾದವುಗಳು ಎಂದೂ ಹೇಳಿದರು. ಪಾಕಿಸ್ತಾನದ ವಿದೇಶ ಮಂತ್ರಿಗಳಾದ ಜಾಫರುಲ್ಲಾಖಾನರು ಹೈದರಾಬಾದದ ಸಂಬಂಧದಲ್ಲಿ ಯುಕ್ತರಾಷ್ಟ್ರ ಸಂಘದಲ್ಲಿ ನಡೆಸಿದ ಉಪಾದ್ವ್ಯಾಪವು ಅವಿವೇಕತನದ್ದಾಗಿದೆ. ಪಾಕಿಸ್ತಾನವು ಇಂತು ಭಾರತದ ಗೊಡವೆಗೆ ಬಂದುದೇ ಆದರೆ ಆತ್ಮರಕ್ಷಣೆಯ ಮಾರ್ಗವನ್ನನುಸರಿಸುವದು ಯುಕ್ತವಾದುದು.

ಭಾರತದ ಬಂದರಗಳು

ಕರಾಚಿ ಬಂದರವು ಪಾಕಿಸ್ತಾನಕ್ಕೆ ಹೋದದ್ದರಿಂದ ಪರದೇಶಗಳಿಂದ ಬರುವ ಹಡಗುಗಳಿಗೆ ಹೊಸ ಬಂದರವನ್ನು ನಿರ್ಮಿಸುವ ಅವಶ್ಯಕತೆ ಭಾರತಕ್ಕೆ ಎನಿಸಹತ್ತಿದೆ. ಅಂತೆಯೇ ಪಶ್ಚಿಮ ಕರಾವಳಿಯಲ್ಲಿ ಇನ್ನೆರಡು ದೊಡ್ಡ ಬಂದರಗಳನ್ನು ಕಟ್ಟಬೇಕೆಂದು ಸರಕಾರದವರು ಯೋಚಿಸಿರುವರೆಂದು ತಿಳಿಯುತ್ತದೆ. ಕಚ್ಛದಲ್ಲಿ ಕಾಂಡ್ಲಾ ಬಂದರವನ್ನು ಅಭಿವೃದ್ಧಿ ಪಡಿಸುವ ಯೋಜನೆಗೆ ೧೨ ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ. ಕಾರವಾರ, ಭಟಕಳ ಮಲ್ಪೆ ಅಥವಾ ಮಂಗಳೂರು, ಇವುಗಳಲ್ಲಿ ಯಾವುದಾದರೊಂದನ್ನು ಅಭಿವೃದ್ಧಿ ಪಡಿಸಿ ಇನ್ನೊಂದು ಮಹತ್ವದ ಬಂದರವನ್ನು ರಚಿಸಲಾಗುವದೆಂದು ತಿಳಿಯುತ್ತದೆ. ಈ ನಾಲ್ಕು ಬಂದರಗಳ ಅಭಿವೃದ್ಧಿಯ ಬಗ್ಗೆ ವಿಚಾರ ಮಾಡಿ, ವರದಿಯನ್ನೊಪ್ಪಿಸಲು ನೇಮಿಸಲಾಗಿದ್ದ ಬಂದರಸಮಿತಿಯವರ ವಿಚಾರಣೆ ಮುಗಿದಿದ್ದು ಅವರನಿರ್ಣಯವಿನ್ನೂ ಹೊರಬೀಳಲಿದೆ. ಈ ಕಾಂಡ್ಲಾ ಬಂದರವನ್ನು ಅಹಮದಾಬಾದಕ್ಕೆ ರೇಲ್ವೆಯಿಂದ ಜೋಡಿಸುವ ಕಾರ್ಯ ಭರದಿಂದ ಸಾಗಿದೆ. ಈ ಬಂದರವು ಅಸ್ತಿತ್ವದಲ್ಲಿ ಬಂದರೆ ಇಲ್ಲಿಂದ ಪ್ರತಿವರುಷ ೩೦ ಲಕ್ಷ ಟನ್ನುಗಳಷ್ಟು ನೌಕಾವ್ಯವಹಾರವು ಸಾಗುವದು. ದಕ್ಷಿಣದಲ್ಲಿ ಕೊಚ್ಚಿಯಿಂದ ಮಾರ್ಮಗೋವಾದ ವರೆಗೆ ಯಾವ ದೊಡ್ಡ ಬಂದರವೂ ಇರದ್ದರಿಂದ ಸಾಗಾಟಕ್ಕೆ ಬಹಳ ತೊಂದರೆಯಾಗಿದೆ. ಅಂತೆಯೇ ಮೇಲೆ ಉಲ್ಲೇಖಿಸಿದ ನಾಲ್ಕು ಬಂದರಗಳಲ್ಲಿ ಯಾವುದಾದರೊಂದನ್ನು ಅಭಿವೃದ್ಧಿಪಡಿಸಬೇಕಾಗಿದೆ.

ಹಿಂದುಸ್ತಾನದಲ್ಲಿ ಮೋಟಾರ ಕಾರಖಾನೆ

ಹಿಂದುಸ್ತಾನವು ಸದ್ಯಕ್ಕೆ ಪ್ರತಿ ವರುಷ ೨೦ ಸಾವಿರ ಮೋಟಾರ ಕಾರುಗಳನ್ನು ಮತ್ತು ೧೫ ಸಾವಿರ ಟ್ರಕ್ಕುಗಳನ್ನು ಪರದೇಶಗಳಿಂದ ತರಿಸುತ್ತಿರುವದರಿಂದ ಹಿಂದುಸ್ತಾನದ ೧೬ ಕೋಟಿ ರೂಪಾಯಿಗಳಷ್ಟು ಹಣವು ಪರದೇಶಗಳಿಗೆ ಹೋಗಬೇಕಾಗುತ್ತಿದೆ. ಇದನ್ನು ಉಳಿಸುವದಕ್ಕಾಗಿ ಹಿಂದುಸ್ತಾನದಲ್ಲಿಯೇ ಮೋಟರ ಕಾರಖಾನೆಯನ್ನು ಪ್ರಾರಂಭಿಸುವ ವಿಚಾರವನ್ನು ಸರಕಾರವು ನಡೆಸಿ ಅದಕ್ಕಾಗಿ ಮೋಟರ ಕಾರಖಾನೆದಾರರ ಪ್ರತಿನಿಧಿಗಳ ಸಭೆಯನ್ನು ಕರೆದಿದ್ದರು. ಹಿಂದುಸ್ತಾನ ಸರಕಾರದ ಉದ್ಯಮ ಮತ್ತು ಪೂರಯಿಕೆ ಮಂತ್ರಿಗಳಾದ ಡಾ. ಶಾಮ ಪ್ರಸಾದ ಮುಕರ್ಜಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಸಭೆಯಲ್ಲಿ ಈ ಬಗ್ಗೆ ಕೂಲಂಕಷ ವಿಚಾರ ಮಾಡಿ ಎರಡು ತಿಂಗಳುಗಳಲ್ಲಿ ವರದಿಯನ್ನೊಪ್ಪಿಸಲು ಸಮಿತಿಯೊಂದು ನೇಮಕವಾಯಿತು. ಬರುವ ಐದು ಅಥವಾ ಹತ್ತು ವರುಷಗಳಲ್ಲಿ ಹಿಂದುಸ್ತಾನದಲ್ಲೆಲ್ಲ ದೇಶೀ ಮೋಟಾರುಗಳು ದೊರೆಯುವಂತೆ ಮಾಡಬೇಕೆಂದು ಸರಕಾರದ ಯೋಚನೆಯಿದೆಯೆಂದು ತೋರುತ್ತದೆ.

❋ ಗಣೇಶ ಗಂಗಾಧರ ದೇಶಕರ ಎಂಬ ೬೨ ವರ್ಷ ವಯಸ್ಸಿನ ಶಿಕ್ಷಕರೊಬ್ಬರು ಈ ವರ್ಷ ನಾಗಪುರ ವಿಶ್ವವಿದ್ಯಾಲಯದಿಂದ ಮರಾಠಿ ತೆಗೆದುಕೊಂಡು ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವರು. ಅವರು ೧೯೪೭ ರಲ್ಲಿ ಬಿ. ಎ. ಪಾಸಾದಾಗ ೬೦ ವರ್ಷದವರಿದ್ದರು.

● ಆ[illegible]ನ್ಸೋಲ (ಪ. ಬಂಗಾಲ) ನಗರದ ಹೊರ[illegible]ರುವ ಒಂದು ಹೊಲದಲ್ಲಿ ೨೪ ನೇ ತಾರೀ[illegible]ನ ದಿನ ಎಂಟು ಜನರಿಗೆ ಸಿಡಿಲಿನ ಆಘಾತವಾಗಿ ಅವರು ಅಲ್ಲಿಯೇ ತತ್‌ಕ್ಷಣ ಮೃತರಾದರೆಂದು ತಿಳಿಯುತ್ತದೆ.

ಕೋತಿ ಮೃಗಗಳೊಳಗ್ಗಳನು!

ನಿರೀಕ್ಷಕನಿಂದ

ಮನುಷ್ಯಪ್ರಾಣಿಗಳ ಬುದ್ಧಿಶಕ್ತಿಯನ್ನು ಅಳೆಯುವ ಪ್ರಯತ್ನ ಮತ್ತು ವಿಧಾನಗಳನ್ನೂ ಅವುಗಳ ಪರಿಣಾಮವನ್ನೂ ಕುರಿತು ಈ ಪುಟಗಳಲ್ಲಿ ಹಿಂದೆ ನಿಮಗೆ ತಿಳುವಳಿಕೆ ಮಾಡಿ ಕೊಟ್ಟಿದ್ದುಂಟು. ಆದರೆ ನಮ್ಮ ಚತುಷ್ಪಾದ ಬಂಧುಗಳ—ಅಥವಾ ಡಾರ್ವಿನ್ ಶಾಸ್ತ್ರಾನುಗುಣವಾಗಿ ಹೇಳಬೇಕಾದರೆ, ನಮ್ಮ ತಾತ ಮುತ್ತಾತಂದಿರಾದ ವಾನರಾದಿಗಳ—ಬುದ್ಧಿಶಕ್ತಿಯನ್ನು ಅಳೆಯುವ ಸಾಹಸಗಳ ಕತೆಯನ್ನು ನಿಮಗೆ ಈಗ ಹೇಳುವವನಿದ್ದೇನೆ. ಪ್ರಾಚೀನಕಾಲದಿಂದ ಬಂದ ಪ್ರಾಣಿಬುದ್ಧಿ ವಿಷಯಕವಾದ ಅಭಿಪ್ರಾಯಗಳನ್ನು ನೀವೂ ನಂಬಿದ್ದರೆ ಖಂಡಿತವಾಗಿ ನಿರಾಶರಾಗಲು ಸಿದ್ಧರಿರಬೇಕೆಂದು ಮೊದಲೇ ಹೇಳಿಬಿಡುವೆ. ಏಕೆಂದರೆ ಮನುಷ್ಯನಿಗೆ ಅತಿಪ್ರಿಯವಾಗಿರುವ ಕೆಲ ಪ್ರಾಣಿಗಳು ಶತದಡ್ಡ ಎಂದು ಪ್ರಯೋಗಗಳಿಂದ ಕಂಡುಬಂದಿದೆ.

ಮೊದ್ದು ಜಂತು ನಾಯಿ !

ನಾಯಿಯನ್ನು ಮನುಷ್ಯನ ಜೀವದ ಗೆಳೆಯ ಎಂದು ಕರೆಯುವದು ವಾಡಿಕೆ. ನಾಯಿಯ ಸ್ವಾಮಿಭಕ್ತಿ ಮತ್ತು ಅದರ ಬುದ್ಧಿವಂತಿಕೆ ಸಾಹಸಗಳನ್ನು ಕುರಿತು ಅನೇಕ ಕತೆಗಳು ಬಳಕೆಯಲ್ಲಿವೆ. ಅದರ ಸ್ವಾಮಿಭಕ್ತಿ ಅಸಮಸದೃಶವೆಂದು ಒಪ್ಪಿಕೊಳ್ಳಲೇಬೇಕು. ಆದರೆ ಅದರ ಬುದ್ಧಿವಂತಿಕೆಯೋ ? ಅದು ಯಜಮಾನನ ಸೂಚನೆಯನ್ನು ಅನುಸರಿಸಿ ಹಾರುವದನ್ನು, ಕುಣಿಯುವದನ್ನು, ವಸ್ತುಗಳನ್ನು ಕಚ್ಚಿಕೊಂಡು ಓಡಾಡುವದನ್ನು ನೀವು ನೋಡಿ ಆಶ್ಚರ್ಯಪಟ್ಟಿರಬಹುದು. ಆದರೆ ನಾಯಿ ಅತಿ ದಡ್ಡ ಜಾತಿಯ ಪ್ರಾಣಿಗಳಲ್ಲೊಂದು ಅದಕ್ಕೆ ತರ್ಕಶಕ್ತಿಯೇ ಇಲ್ಲ. ಹೊಸ ಸಮಸ್ಯೆಗಳನ್ನು ಬಿಡಿಸಬೇಕಾಗಿ ಬಂದಾಗ ಅದು ಪೆಚ್ಚಾಗುವದು. ಪ್ರಯತ್ನಶೀಲತೆಯಿಲ್ಲವೆಂದಲ್ಲ; ಆಗಾಗ್ಗೆ ಬೆನ್ನುಚಪ್ಪರಿಸುತ್ತ ಇದ್ದರೆ ಬೇಕಾದಷ್ಟು ಹೆಣಗುವದು ನಾಯಿ. ಯಜಮಾನನನ್ನು ಮೆಚ್ಚಿಸುವ ಆತುರ ಅದಕ್ಕೆ ತುಂಬ. ಆದರೆ ಬುದ್ಧಿಶಕ್ತಿ ಸೊನ್ನೆ.

ಕುದುರೆಯ ಚುರುಕತನದ ಕತೆಗಳೂ ಬೇಕಾದಷ್ಟು ಪ್ರಸಿದ್ಧವಾಗಿದೆ. ಆದರೆ ಬುದ್ಧಿ ಮಾಪನದಲ್ಲಿ ಅದು "ದಡ್ಡಾಗ್ರೇಸರ"ನೆಂದು ಸಿದ್ಧವಾಗಿದೆ. ನಿಜವಾಗಿ ಕೇಳಿದರೆ ಹಂದಿ ಕೂಡ ಪಾಸಾಗಬಲ್ಲ ಪರೀಕ್ಷೆಗಳಲ್ಲಿ ಅದು ನಪಾಸಾಗುತ್ತದೆಂದು ಅಮೇರಿಕೆಯ ಮೇಲೆ ವಿಶ್ವವಿದ್ಯಾಲಯದ ಪ್ರೊ. ಫ್ರಾಂಕ್ ಬೀಚರು ಹೇಳುತ್ತಾರೆ. ದನಗಳು ಕುದುರೆಗಳಿಗಿಂತ ಹೆಚ್ಚು ತರ್ಕಬುದ್ಧಿಯನ್ನು ತೋರ್ಪಡಿಸಿವೆ.

ಸ್ವಕಾರ್ಯಸಾಧನೆಗೆ ಹೆಸರಾದ "ಬೆಕ್ಕಿನ ಬಿಡಾರ ಬೇರೆ" ಎಂಬ ಗಾದೆಗೆ ಹೇತುವಾದ ಆ ಪ್ರಾಣಿಯ ಬುದ್ಧಿಶಕ್ತಿಯೂ ನಾಯಿಗಿಂತ ವಿಶೇಷ ಮೇಲ್ತರಗತಿಯದಿಲ್ಲವೆಂದು ಗೊತ್ತಾಗಿದೆ.

ಮೃಗಸ್ಪರ್ಧೆ !

ಪಶುಗಳಿಗೆ ಆಹಾರವೇ ಎಲ್ಲಕ್ಕಿಂತ ಆಕರ್ಷಕ ವಸ್ತು. ಆದ್ದರಿಂದ ಅವುಗಳ ಬುದ್ಧಿಮಾಪನಕ್ಕೆ ಆಹಾರವಸ್ತುಗಳೇ ಪ್ರೋತ್ಸಾಹಕವಾಗಿ ಉಪಯೋಗಿಸಲ್ಪಡುತ್ತವೆ. ಕಬ್ಬಿಣದ ಬಲೆಯಿಂದ ಮಾಡಿದ ಗೋಡೆಗಳುಳ್ಳ ಪೆಟ್ಟಿಗೆಯಲ್ಲಿ ಆಹಾರವನ್ನಿಟ್ಟು ಅದರ ಬಾಗಿಲನ್ನು ತೆರೆಯಬೇಕಾದರೆ ಒಂದು ಕೀಲಿಯನ್ನು ಒತ್ತುವದೋ ಒಂದು ತಗಡನ್ನು ಹತ್ತುವದೋ ಅಥವಾ ಮತ್ತಾವುದೋ ಯುಕ್ತಿಯನ್ನುಪಯೋಗಿಸುವಂತೆ ಮಾಡಿಟ್ಟಾಗ ಮುಳ್ಳು ಹಂದಿಗಳು ಕೀಲಿಯನ್ನು ಒತ್ತಿ, ಕೊಂಡಿಯನ್ನು ಸರಿಸಿ, ಬೆಣೆಯನ್ನು ಕಿತ್ತು ಬಿರಡಿಯನ್ನು ತಿರುಗಿಸಿ ಬಾಗಿಲು ತೆರೆಯಲು ಸಮರ್ಥವಾದವು. ಬಾಗಿಲು ತೆರೆಯಬೇಕಾದರೆ ಬೇರೆ ಬೇರೆ ತಗಡಿನ ತುಂಡುಗಳ ಮೇಲೇರಿ ಇಳಿಯಬೇಕಾಗುವಂಥ ಪೆಟ್ಟಿಗೆಗಳನ್ನುಪಯೋಗಿಸಿದಾಗ ಎರಡು ತಗಡುಗಳ ಕೀಲಿಯನ್ನು ತೆರೆಯಲು ಇಲಿಗೆ ಸಾಧ್ಯವಾಯಿತು. ಬೆಕ್ಕಿನ ಮರಿಯೊಂದು ಏಳು ತಗಡುಗಳನ್ನೇರಬೇಕಾದ ಪೆಟ್ಟಿಗೆಯನ್ನು ತೆರೆಯಲು ಸಮರ್ಥವಾಯಿತು. ನಾಯಿಯೋ ಒದ್ದಾಡಿ ಒದ್ದಾಡಿ ತೆರೆದರೂ ಬರಿ ಅಕಸ್ಮಾತ್ತಾಗಿ ಹೊರತು ತರ್ಕವನ್ನುಪಯೋಗಿಸಿ ಅಲ್ಲ. ಆದರೆ ಮಂಗ ಮಾತ್ರ ಸರಿಯಾದ ಕ್ರಮದಲ್ಲಿ ೨೨ ತಗಡುಪಟ್ಟಿಗಳನ್ನೇರಿ ಬಾಗಿಲು ತೆರೆಯಿತು.

ಇನ್ನೊಂದು ಸ್ಪರ್ಧೆಯಲ್ಲಿ ಒಂದು ಕುದುರೆ, ಒಂದು ಬೆಕ್ಕು, ಒಂದು ನಾಯಿ, ಮತ್ತು ಒಂದು ಮಂಗ ಭಾಗ ವಹಿಸಿದ್ದವು. ನಾಲ್ಕು ಬಾಗಿಲುಗಳುಳ್ಳ ಒಂದು ಕೋಣೆಯಲ್ಲಿ ತಿನಿಸನ್ನು ಇರಿಸಲಾಯಿತು. ಬಾಗಿಲುಗಳಲ್ಲಿ ಮೂರಕ್ಕೆ ಬೀಗಹಾಕಿ ಒಂದನ್ನು ಮಾತ್ರ ಹಾಗೇ ಮುಚ್ಚಿಡುತಿದ್ದರು. ಬೀಗವಿಲ್ಲದ ಬಾಗಿಲನ್ನು ಕಂಡು ಹಿಡಿಯುವದೇ ಸಮಸ್ಯೆ. ಆದರೆ ಒಂದನೆ ಪರೀಕ್ಷೆಯಲ್ಲಿ ಬೀಗವಿಕ್ಕಿದ ಬಾಗಿಲಿಗೆ ಎರಡನೆಯದರಲ್ಲಿ ತಪ್ಪದೆ ಬೀಗ ಹಾಕಲಾಗುತಿತ್ತು. ಹೀಗೆ ಪರೀಕ್ಷೆ ನಡೆದಾಗ ಹಿಂದಿನ ಸಲ ಬೀಗವಿಕ್ಕದ ಬಾಗಿಲಿಗೆ ಮುಂದಿನ ಸಲ ಬೀಗ ಹಾಕಲ್ಪಟ್ಟಿರುತ್ತದೆಂದು ಮಂಗ ಬಹಳ ಬೇಗನೆ ಕಂಡು ಕೊಂಡಿತು. ಮತ್ತು ಬೀಗವಿಲ್ಲದ ಬಾಗಿಲು ಹುಡುಕುವಾಗ ಆ ಬಾಗಿಲನ್ನು ಬಿಟ್ಟೇ ತಳ್ಳುತ್ತಿತ್ತು. ಬೆಕ್ಕು ಮತ್ತು ನಾಯಿಗೆ ಈ ಯುಕ್ತಿ ಹೊಳೆಯಲೇ ಇಲ್ಲ. ಆದರೂ ಅವು ಪ್ರತಿಬಾರಿಯೂ ಪ್ರತಿಬಾಗಿಲನ್ನೂ ತಳ್ಳಿ ನೋಡಿಯಾದರೂ ಕೊನೆಗೆ ಒಳ ಹೋಗುತಿದ್ದವು. ಕುದುರೆ ಮಾತ್ರ, ಪಾಪ, ಮತ್ತೂ ಮತ್ತೂ ಒಂದೇ ಬಾಗಿಲನ್ನು ದೂಡುತಿತ್ತಲ್ಲದೆ ತರ್ಕಬದ್ಧವಾದ ವಿಚಾರಶಕ್ತಿಯನ್ನು ತೋರಿಸಲೇ ಇಲ್ಲ!

ಮಂಗರಾಯನ ಪಾಂಡಿತ್ಯ

ಪ್ರಾಣಿಗಳಲ್ಲಿ ತರ್ಕಬುದ್ಧಿಗೆ (ಮತ್ತು ಕುತರ್ಕಕ್ಕೆ) ಕೋತಿಯೇ ಶ್ರೇಷ್ಠವೆಂದು ನಿರ್ವಿವಾದವಾಗಿ ಸಿದ್ಧವಾಗಿದೆ. ಒಬ್ಬ ಮನಃಶಾಸ್ತ್ರಿ ಒಂದು ಕೋಣೆಯಲ್ಲಿ ಯಾಂತ್ರಿಕ ಉಪಕರಣವನ್ನು ಚೆಲ್ಲಾಪಿಲ್ಲಿಯಾಗಿ ಚೆಲ್ಲಿ ಒಂದು ಚಿಂಪಾಂಜಿ (ಒಂದು ಜಾತಿಯ ಬಾಲವಿಲ್ಲದ ಕೋತಿ) ಯನ್ನು ಅಲ್ಲಿ ತಂದಿರಿಸಿ ಸದ್ದಿಲ್ಲದೆ ಹೊರಬಂದು ಬಾಗಿಲು ಮುಚ್ಚಿ ಹೊರಬಂದು ಬಾಗಿಲ ಸಂದಿನಿಂದ ಒಳಗೇನು ನಡೆಯುವದೆಂದು ಒಕ್ಕಣ್ಣಿನಿಂದ ನೋಡತೊಡಗಿದ. ಅವನಿಗೇನು ಕಂಡಿತು ಗೊತ್ತೇ? ಬಾಗಿಲಿನ ಬಳಿ ಬಂದು ಆ ಕೋತಿ ಅದೇ ಸಂದಿನಿಂದ ಹೊರಗೇನು ನಡೆಯುವದೆಂದು ಒಕ್ಕಣ್ಣಿನಿಂದ ಪರೀಕ್ಷಿಸುತಿತ್ತು! ಇನ್ನೊಬ್ಬ ಪರೀಕ್ಷಕನು ಒಂದು ಬಾಳೆಹಣ್ಣಿನ ಗೊನೆಯನ್ನು ಚಿಂಪಾಂಜಿಗೆಟಕುವದಕ್ಕಿಂತ ಐದು ಅಡಿ ಎತ್ತರದಲ್ಲಿ ತೂಗಹಾಕಿ ಕೆಳಗೆ ಕೆಲವು ಖಾಲಿ ಪೆಟ್ಟಿಗೆಗಳನ್ನು ಸಿಕ್ಕ ಸಿಕ್ಕಂತೆ ಒಗೆದಿದ್ದನು. ಚಿಂಪಾಂಜಿ ಆ ಪೆಟ್ಟಿಗೆಗಳನ್ನು ಒಂದರಮೇಲೊಂದಿರಿಸಿ ಅದನ್ನೇರಿ ಹಣ್ಣು ತಿನ್ನುವದೋ ಎಂದು ನೋಡುವದೇ ಅವನ ಉದ್ದೇಶವಾಗಿತ್ತು. ಆದರೆ ಅವನು ಹೊರಗೆ ಹೋಗುತ್ತಿದ್ದಾಗ ಆ ಕೋತಿ ಓಡಿ ಬಂದು ಅವನ ಚಣ್ಣ ಹಿಡಿದು ಎಳೆಯತೊಡಗಿತು. ಕುತೂಹಲದಿಂದ ಅವನು ಅದು ಎಳೆದತ್ತ ಬಂದರೆ ಅದು ಅವನನ್ನು ಹಣ್ಣಿನ ಗೊನೆಗೆ ನೇರವಾಗಿ ಕೆಳಗ ನಿಲ್ಲಿಸಿತು. ಕಣ್ಣುಮುಚ್ಚಿ ತೆರೆಯುವದರೊಳಗೆ ಅದು ಹಾರಿ ಅವನ ಹೆಗಲನ್ನೇರಿ ಹಣ್ಣುಗಳನ್ನು ಹರಿದು ಕಬಳಿಸತೊಡಗಿತು. ಪೆಟ್ಟಿಗೆಗಳನ್ನು ಒಂದರ ಮೇಲೊಂದು ಇಟ್ಟು ಹೊತ್ತುಕಳೆಯುವದೇಕೆ, ಇಷ್ಟು ಸುಲಭೋಪಾಯವಿರುವಾಗ!.

ಮಾರವಾಡಿ ಚಿಂಪಾಂಜಿ

ಯೇಲ್ ವಿಶ್ವವಿದ್ಯಾಲಯದ ಡಾ. ವೂಲ್ಫರ ಪ್ರಯೋಗಗಳಿಂದ ಬಾಲವಿಲ್ಲದ ಕೋತಿಗಳು ಇದಕ್ಕಿಂತಲೂ ಹೆಚ್ಚಿನ ತರ್ಕಶಕ್ತಿಯನ್ನು ಪ್ರದರ್ಶಿಸಬಲ್ಲವೆಂದು ಗೊತ್ತಾಗಿದೆ. ಮೂಸನೆಂಬ ಅವರಚಿಂಪಾಂಜಿಗೆ ಹಣದ ಉಪಯೋಗ ಕೂಡ ಗೊತ್ತಿದೆಯಂತೆ. ಅದಕ್ಕಾಗಿಯೆ ಅವರು ಒಂದು ಯಂತ್ರವನ್ನು ನಿರ್ಮಿಸಿದರು. ರೇಲ್ವೆ ನಿಲ್ದಾಣಗಳಲ್ಲಿ, ಒಂದಾಣೆಯನ್ನು ತೂತಿನಲ್ಲಿ ತುರುಕಿದೊಡನೆ ಪ್ಲಾಟ್‌ಫಾರ್ಮ ಟಿಕೇಟನ್ನು ಕೊಡುವ ಯಂತ್ರವನ್ನು ಎಲ್ಲರೂ ನೋಡಿರಬಹುದು. ಅಂಥ ಯಂತ್ರದಲ್ಲಿ ಒಂದು ಬಿಳಿ ಲೋಹದ ಬಿಲ್ಲೆಯನ್ನು ತುರುಕಿದೊಡನೆ ಒಂದು ದ್ರಾಕ್ಷೆ ಹಣ್ಣು ಉದುರುವ ಏರ್ಪಾಡು ಮಾಡಿದರು. ನಾನಾ ವರ್ಣದ ಬಿಲ್ಲೆಗಳನಡುವೆ ಬಿಳಿಯ ಬಿಲ್ಲೆ ಬಿದ್ದರೇ ಹಣ್ಣು ಸಿಗುವದೆಂದು ಮೂಸನು ಒಂದೇ ಪ್ರಯೋಗದಿಂದ ಅರಿತು ಕೊಂಡಿತು. ಹೀಗೆ ಹತ್ತುಹನ್ನೆರಡು ಚಿಂಪಾಂಜಿಗಳಿಗೆ 'ಹಣದ' ಉಪಯೋಗ ಗೊತ್ತಾದ ಮೇಲೆ ಅವು ಹಣಕ್ಕಾಗಿ ದುಡಿಯಲು ಕೂಡ ಸಿದ್ಧವಾದವು. ಒಂದು ಮಣ ಭಾರದ ಕಲ್ಲುಗಳನ್ನು ಒಮ್ಮೊಮ್ಮೆ ಎತ್ತಿದ್ದಕ್ಕೆ ಒಂದೊಂದು ಬಿಳಿ "ನಾಣ್ಯ" "ಸಂಬಳ" ಕೊಡುವ ಪರಿಪಾಠ ಮಾಡಿದರು. ಮೂಸನ ಧನಪಿಪಾಸೆಯೆಷ್ಟಿತ್ತೆಂದರೆ ಅದು ಹತ್ತೇ ಮಿನಿಟುಗಳಲ್ಲಿ ೧೮೫ ನಾಣ್ಯಗಳನ್ನು ಸಂಪಾದಿಸಿ ಆಶ್ರಮದಿಂದ ಸುಸ್ತಾಗಿ ಹೋಯಿತು. ಇಷ್ಟೇ ಏಕೆ, ಅದು ಹಣದ ಸಂಗ್ರಹ ಕಡಿಮೆಯಾದಾಗ ತುಂಬ ಶ್ರಮಪಟ್ಟು "ದುಡಿ"ಯುತಿತ್ತು. ಮತ್ತು ಸಾಕಷ್ಟು ಕೂಡಹಾಕಿದ ಮೇಲೆ ವಿಶ್ರಾಂತಿ ತೆಗೆದುಕೊಳ್ಳುತಿತ್ತು! ಮನುಷ್ಯರಿಗೆ ಎಷ್ಟು ಹತ್ತಿರ! ಡಾ. ವೂಲ್ಫರ ಪ್ರಯೋಗ ಅಷ್ಟಕ್ಕೇ ಮುಗಿಯಲಿಲ್ಲ. ಅವರು ನಾಣ್ಯಗಳ ಯೋಗ್ಯತಾಭೇದವನ್ನು ಚಿಂಪಾಂಜಿಗಳಿಗೆ ಕಲಿಸಿದರು. ಬಿಳಿ ನಾಣ್ಯಕ್ಕೆ ಒಂದು ದ್ರಾಕ್ಷಿಯಾದರೆ ನೀಲಿ ನಾಣ್ಯಕ್ಕೆ ಎರಡು. ಹಿತ್ತಾಳೆ ನಾಣ್ಯಕ್ಕೆ ಏನೂ ದೊರೆಯುವದಿಲ್ಲ. ಮತ್ತು ಕೆಂಪು ನಾಣ್ಯ ಕೊಟ್ಟರೆ ಯಜಮಾನನ ಹೆಗಲ ಮೇಲೇರಿ ಒಂದು ಸುತ್ತು ಸವಾರಿ ಮಾಡಬಹುದು ಎಂದು ಗೊತ್ತುಪಡಿಸಿದರು. ಚಿಂಪಾಂಜಿಗಳು ಬೇಗನೆ ಹಿತ್ತಾಳೆ ನಾಣ್ಯಗಳನ್ನು ತಿರಸ್ಕಾರದಿಂದ ಕಾಣತೊಡಗಿದವು. ಬಿಳಿ ನಾಣ್ಯಕ್ಕಿಂತ ನೀಲಿ ನಾಣ್ಯದ ಬೆಲೆ ಹೆಚ್ಚೆಂದೂ ಅವು ತಿಳಿದುಕೊಂಡವು. ಒಂದು ದಿನ ವೂಲ್ಫರು ಒಂದು ಇಲಿಯನ್ನು ತಂದು ಚಿಂಪಾಂಜಿಯಿರುವ ಕೋಣೆಯಲ್ಲಿ ಬಿಟ್ಟರು. ಇಲಿಗಳೆಂದರೆ ಚಿಂಪಾಂಜಿಗೆ ಅಸಾಧ್ಯ ಭಯ. ಆದ್ದರಿಂದ ಅದು ಇಲಿಯನ್ನು ಕಂಡೊಡನೆ ಗಾಬರಿಯಾಗಿ ಕೆಂಪು ನಾಣ್ಯವನ್ನು ಯಂತ್ರದ ತೂತಿನಲ್ಲಿ ತುರುಕಿ ಚಟ್ಟನೆ ಯಜಮಾನನ ಹೆಗಲೇರಿ ಹೊರಗೆ ಹೋಗೋಣೆಂದು ಚೀರಹತೊಡಗಿತು.

ನಾಡುಪ್ರಾಣಿ—ಕಾಡುಪ್ರಾಣಿ

ಸಾಕಿದ ಪ್ರಾಣಿಗಳಿಗಿಂತ ಕಾಡುಪ್ರಾಣಿಗಳ ಬುದ್ಧಿ ಚುರುಕೆಂದೂ ಪರೀಕ್ಷೆಯಿಂದ ತಿಳಿದುಬಂದಿದೆ. ಪಳಗಿದ ಪ್ರಾಣಿಗಳಿಗಿಂತ ಕಾಡುಪ್ರಾಣಿಗಳಿಗೆ ಜೀವನ ಸಂಗ್ರಾಮ ಕಠೋರವಾಗಿರುವದೇ ಇದಕ್ಕೆ ಕಾರಣವಿರಬಹುದು. ಕಾಡುಪ್ರಾಣಿಗಳಲ್ಲೆಲ್ಲ ಅಮೇರಿಕೆಯ ರಕೂನ್ ಎಂಬ ಕರಡಿ ತುಂಬ ಚುರುಕು. ಆನೆಯೆಂದರೆ ಮೊದ್ದು ಪ್ರಾಣಿಯೆಂದು ಬಗೆಯುವದುಂಟು. ಆದರೆ ಅದು ಅನೇಕ ಕಷ್ಟಕೆಲಸಗಳನ್ನು ಶಿಸ್ತಾಗಿ ಮಾಡುವ ಅವುಗಳ ಸಾಮರ್ಥ್ಯ ಭಾರತೀಯರಿಗೆ ಗೊತ್ತಿದೆ. ಚಿಕ್ಕಪುಟ್ಟ ಯಾಂತ್ರಿಕ ಯುಕ್ತಿಗಳನ್ನೂ ಅದು ಸುಲಭವಾಗಿ ಕಲಿತುಕೊಳ್ಳುತ್ತದೆ.

ಆದರೆ ಕೋತಿಗಳಲ್ಲಿಯೂ ಗೋರಿಲ್ಲಾ ಜಾತಿಯೆ ಸರ್ವಶ್ರೇಷ್ಠವೆಂದು ಡಾ. ರಾಬರ್ಟ ಯರ್ಕ್ಸರ ಮತ. ಅವರ ಕೈಯಲ್ಲಿ ತರಬೇತಾದ ಒಂದು ಗೋರಿಲ್ಲ ತಾನೇ ತನ್ನ ಆಧುನಿಕ ಮಾದರಿಯ ಸ್ನಾನಗೃಹದಲ್ಲಿ ಸ್ನಾನ ಮಾಡಿ, ತನ್ನದೇ ಹಾಸಿಗೆಯಲ್ಲಿ ಮಲಗುತ್ತದೆ. ಮಲಗುವಾಗ ವಿದ್ಯುದ್ದೀಪದ ಸ್ವಿಚ್ ತೆಗೆದು ಕತ್ತಲು ಮಾಡಿಕೊಂಡು ಹಾಸಿಗೆ ಹೊಕ್ಕು ಹೊದಿಕೆಯನ್ನು ಕೊರಳತನಕ ಎಳೆದುಕೊಳ್ಳಲು ಮರೆಯುವದಿಲ್ಲ!

ಪತ್ರಿಕಾ ಸಂಪಾದಕರ ಸಮ್ಮೇಲನ

ಈ ಸಲದ ಅಧಿವೇಶನದ ವೈಶಿಷ್ಟ್ಯ

(ಪರೀಕ್ಷಕನಿಂದ)

ಕಳೆದ ೧೬-೧೭ಕ್ಕೆ ಬೆಂಗಳೂರಿನಲ್ಲಿ ಸೇರಿದ್ದ ಅಖಿಲಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನ ಎಂಟನೆಯ ಅಧಿವೇಶನವು ಅಪೂರ್ವವಾಗಿದ್ದಿತು, ವೈಶಿಷ್ಟ್ಯಪೂರ್ಣವಾಗಿದ್ದಿತು. ಈ ಸಮ್ಮೇಲನವು ಮೊದಲ ಸಲವೆ ದೇಶ ಭಾಷಾಪತ್ರಿಕೆಯ ಸಂಪಾದಕರೊಬ್ಬರ ಅಧ್ಯಕ್ಷತೆಯಲ್ಲಿ ನಡೆಯಿತು. ಮದ್ರಾಸಿನ ಸ್ವದೇಶ ಮಿತ್ರನ್ ಎಂಬ ತಮಿಳು ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಸಿ ಆರ್ ಶ್ರೀನಿವಾಸನ್‌ರು ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಅಧ್ಯಕ್ಷಪದದ ಆಯ್ಕೆಯು ಈ ವರೆಗೆ ಅವಿರೋಧವಾಗಿ ನಡೆಯುತ್ತ ಬಂದ ಪರಂಪರೆಯನ್ನು ಬಿಟ್ಟುಗೊಡಬಾರದೆಂದು ಅಧ್ಯಕ್ಷಸ್ಥಾನದ ಆಯ್ಕೆಗೆ ನಿಂತಿದ್ದ ಶ್ರೀ ಎ ಡಿ ಮಣಿ ಮತ್ತು ಹಣಮಂತರಾವ ಮೋಹರೆ ಇವರು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಂಡಿದ್ದರಿಂದ ಶ್ರೀ ಶ್ರೀನಿವಾಸನ್‌ರ ಆಯ್ಕೆ ಅವಿರೋಧವಾಗಿ ಆಗಲು ಅವಕಾಶ ದೊರೆಯಿತು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಇದನ್ನು ಒಪ್ಪಿಕೊಂಡು ನಾಮಪತ್ರಗಳನ್ನು ಹಿಂತೆಗೆದುಕೊಂಡದ್ದಕ್ಕೆ ಶ್ರೀ ಮಣಿ ಮತ್ತು ಮೋಹರೆಯವರಿಗೆ ಧನ್ಯವಾದಗಳನ್ನರ್ಪಿಸಿರುವರು.

ಗವರ್ನರ ಜನರಲ್‌ರಂಥ ನಾಡ ಹಿರಿಯರು ಪರಿಷತ್ತನ್ನು ಪ್ರಾರಂಭಿಸಿ ತಮ್ಮ ಅನುಭವ ಪೂರ್ಣವಾದ ಭಾಷಣದಿಂದ ಸಂಪಾದಕರ ಕರ್ತವ್ಯ, ಹಕ್ಕುಬಾಧ್ಯತೆ ಮತ್ತು ನಾಡಹಿತದ ದೃಷ್ಟಿಯಿಂದ ಅವರ ಮೇಲೆ ಇರುವ ಹೊಣೆಯನ್ನು ತಿಳಿಸಿಕೊಟ್ಟದ್ದು ಅಪೂರ್ವವಾದುದು. ಮಾನ್ಯ ಚಕ್ರವರ್ತಿ ರಾಜಗೋಪಾಲಾಚಾರ್ಯರು ತಮ್ಮ ಮಗಳಾದ ನಾಮಗಿರಿ ಮತ್ತು ಮಗ ಸಿ ಆರ್ ಕೃಷ್ಣಮೂರ್ತಿ ಹಾಗು ಪರಿವಾರದೊಡನೆ ೧೬ ನೆ ತಾರೀಕಿನ ದಿನವೆ ವಿಮಾನಮಾರ್ಗವಾಗಿ ಬೆಂಗಳೂರಿಗೆ ಬಂದು ರೆಸಿಡೆನ್ಸಿಯಲ್ಲಿ ಉಳಿದುಕೊಂಡಿದ್ದರು. ಸೋಮವಾರ ದಿನ ಸಾಯಂಕಾಲ ೪॥ ಗಂಟೆಗೆ ಸರ್ ಪುಟ್ಟಣ್ಣಚೆಟ್ಟಿ ಸಭಾಗೃಹಕ್ಕೆ ಮಾನ್ಯ ರಾಜಾಜಿಯವರು ಬಂದರು. ಸ್ವಾಗತಾಧ್ಯಕ್ಷ ಶ್ರೀ ಡಿ ವಿ ಗುಂಡಪ್ಪನವರು ಮತ್ತು ಇತರರು ಅವರನ್ನು ಬರಮಾಡಿಕೊಂಡರು. ಹಿಂದುಸ್ಥಾನೀ ಸೇವಾದಳದವರು ಅವರಿಗೆ ಗೌರವರಕ್ಷೆಯನ್ನು ಕೊಟ್ಟರು. ಸಭಿಕರ ವಂದನೆಗಳನ್ನು ಸ್ವೀಕರಿಸುತ್ತ ಮಾನ್ಯ ಗವರ್ನರ ಜನರಲ್‌ರು ವೇದಿಕೆಯನ್ನೇರಿ ಆಸನಾಸೀನರಾಗುವಾಗ ಸಭಿಕರ ಚಪ್ಪಾಳೆಗಳಿಂದ ಸಭಾಗೃಹವು ಪ್ರತಿಧ್ವನಿತವಾಯಿತು.

ನಿಯುಕ್ತ ಸ್ವಾಗತಾಧ್ಯಕ್ಷ ಶ್ರೀ ಡಿ ವಿ ಗುಂಡಪ್ಪನವರು ಸದ್ಯದಲ್ಲಿ ಗೋಖಲೆ ಸಂಸ್ಥೆಯ ಪರವಾಗಿ ಸಾರ್ವಜನಿಕ ಎಂಬ ಸಣ್ಣ ಮಾಸ ಪತ್ರಿಕೆಯನ್ನು ತೆಗೆಯುತ್ತಿದ್ದರೂ ಹೆಸರಾಂತ ಪತ್ರಿಕಾಕರ್ತರು, ಕರ್ನಾಟಕದ ಹಿರಿಯ ಪತ್ರಿಕೋದ್ಯೋಗಿಗಳಲ್ಲಿ ಒಬ್ಬರು, ಕನ್ನಡ ಅಂಗ್ಲ ಪತ್ರಿಕೆಗಳನ್ನು ಹೊರಡಿಸಿ ನಾಡುನುಡಿಗಳ ಸೇವೆಯನ್ನು ಮಾಡಿದವರು. ?ಸದ್ಯದಲ್ಲಿ ಪತ್ರಿಕಾ ಪ್ರಪಂಚದಲ್ಲಿ ಅಷ್ಟೊಂದು ಮುಂದೆ ನಿಂತು ತಾವು ಕಾರ್ಯ ಮಾಡುತ್ತಿಲ್ಲವಾದರೂ ತಮ್ಮ ಹಿಂದಿನ ಸೇವೆಯನ್ನು, ವಯಸ್ಸನ್ನು ನೆನೆದು ಈ ಗೌರವಸ್ಥಾನವನ್ನು ತಮಗೆ ಕೊಟ್ಟದ್ದಕ್ಕಾಗಿ ಶ್ರೀ ಗುಂಡಪ್ಪನವರು ಸ್ವಾಗತ ಸಮಿತಿಯವರ ಸಜ್ಜನಿಕೆಯನ್ನು ಹೊಗಳಿದರು. ಅವರ ಭಾಷಣವು ಉಪಯುಕ್ತ ಸಲಹೆ ಸೂಚನೆಗಳಿಂದ ಕೂಡಿದ್ದಿತು. ಇಂದಿನ ಅಧಿವೇಶನವನ್ನು ಪ್ರಾರಂಭಿಸುತ್ತಿರುವ ಮಾನ್ಯ ಗವರ್ನರ ಜನರಲ್ ಶ್ರೀ ರಾಜಾಜಿಯವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಓದಿದವರಿರುವರು. ಅಧ್ಯಕ್ಷರಾಗಿ ನಿಯುಕ್ತರಾಗಿರುವ ಶ್ರೀ ಶ್ರೀನಿವಾಸನ್‌ರು ಮೊದಲು ಬೆಂಗಳೂರಿನಲ್ಲಿಯೇ ಕೆಲಸ ಮಾಡಿದವರಿರುವರು ಮತ್ತು ಸಮ್ಮೇಲನದ ಮೊದಲನೇ ಅಧ್ಯಕ್ಷರಾದ ಹಿಂದೂ ಪತ್ರಿಕೆಯ ಸಂಪಾದಕ ಶ್ರೀ ಕಸ್ತೂರಿ ಶ್ರೀನಿವಾಸನ್‌ರ ಹೆಸರನ್ನು ಬೆಂಗಳೂರು ಮುನಿಸಿಪಾಲಿಟಿ ರಜಿಸ್ಟರದಲ್ಲಿ ಕಾಣಬಹುದು ಎಂದು ಮುಂತಾಗಿ ಹೇಳಿ ಇಂತು ಆಪ್ತಬಂಧುಗಳ ಹಿರಿಯತನದಲ್ಲಿ ನಡೆಯುವ ಸಮ್ಮೇಲನವು ಯಶಸ್ವಿಯಾಗುವದೆಂಬಲ್ಲಿ ಸಂದೇಹವಿಲ್ಲೆಂದು ಅಭಿಪ್ರಾಯಪಟ್ಟು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಗುಂಡಪ್ಪನವರ ಭಾಷಣವು ವಿದ್ವತ್ಪೂರ್ಣವೂ ಸ್ಫೂರ್ತಿಪ್ರದವೂ ಆಗಿದ್ದಿತು. ಅಂತೆಯೇ ಅವರ ಭಾಷಣವನ್ನು ಕೇಳಿ ತಮಗೂ ಸ್ಫೂರ್ತಿಯುಂಟಾಗಿದ್ದು ಆಶು ಭಾಷಣ ಮಾಡುವ ಹುರುಪು ಬಂದಿದೆಂದೂ ಆದರೆ ತಮ್ಮ ಅಧಿಕಾರಸ್ಥಾನ ಹಾಗೆ ಮಾಡಗೊಡುವುದಿಲ್ಲೆಂದೂ ಗವರ್ನರ ಜನರಲ್ ರಾಜಾಜಿಯವರು ತಮ್ಮ ಭಾಷಣದ ಪ್ರಾರಂಭದಲ್ಲಿ ಹೇಳಿ ಬರೆದು ತಂದ ತಮ್ಮ ಭಾಷಣವನ್ನೋದಿದರು. ಶ್ರೀ ಗುಂಡಪ್ಪನವರು ಶ್ರೀ ರಾಜಗೋಪಾಲಾಚಾರ್ಯರ ಹಳೆಯ ಮಿತ್ರರಾದ್ದರಿಂದ ಆ ಬಾಲ್ಯಸ್ನೇಹಕ್ಕೆ ಕಾವು ಬಂದು ಅವರಲ್ಲಿ ಆಶು ಭಾಷಣದ ಸ್ಫೂರ್ತಿಯನ್ನುಂಟು ಮಾಡಿರಲು ಸಾಕು. ಆದರೆ ಗವರ್ನರ ಜನರಲ್‌ರ ಹೊಣೆಗಾರಿಕೆಯ ಸ್ಥಾನವು ಅವರ ಆಶು ಭಾಷಣವನ್ನು ಕೇಳುವ ಸಂಧಿಯನ್ನು ಸಂಪಾದಕರಿಗೆ ಒದಗಿಸಿ ಕೊಡಲಿಲ್ಲ.

ಅಧ್ಯಕ್ಷರಾಯ್ಕೆ

ಗವರ್ನರ ಜನರಲ್‌ರು ಭಾಷಣ ಮಾಡಿ ಪರಿಷತ್ತು ಪ್ರಾರಂಭವಾಯಿತೆಂದು ಸಾರಿ ಹರ್ಷೋದ್ಗಾರಗಳ ನಿನಾದದಲ್ಲಿ ಆಸನಾರೂಢರಾದರು. ಸಾಮಾನ್ಯವಾಗಿ ಪರಿಷತ್ತುಗಳನ್ನು ಪ್ರಾರಂಭಿಸುವವರು, ಅದರಲ್ಲಿಯೂ ದೊಡ್ಡ ಹುದ್ದೆಗಳಲ್ಲಿರುವವರು ತಮ್ಮ ಕೆಲಸವಾದ ಕೂಡಲೆ ಹೊರಟುಹೋಗುವ ರೂಢಿಯುಂಟು. ಆದರೆ ಮಾನ್ಯ ರಾಜಗೋಪಾಲಾಚಾರ್ಯರು ಹಾಗೆ ಮಾಡದೆ ಅಂದಿನ ಕಾರ್ಯ ಮುಗಿಯುವ ವರೆಗೆ ಸಭಾಭವನದಲ್ಲಿ ಉಳಿದು ಅದಕ್ಕೆ ವಿಶೇಷ ಕಳೆಯನ್ನು ತಂದುದು ಅಪೂರ್ವವೆಂದೇ ಹೇಳಬಹುದು. ಗವರ್ನರ ಜನರಲ್‌ರು ಸ್ಥಾನಾಪನ್ನರಾದ ಬಳಿಕ ನಿವೃತ್ತ ಅಧ್ಯಕ್ಷ ಶ್ರೀ ದೇವದಾಸ ಗಾಂಧಿಯವರು ಕಳೆದ ವರುಷ ಸಂಸ್ಥೆಯು ಸಾಧಿಸಿದ ಕಾರ್ಯಗಳನ್ನು ಸಂಕ್ಷೇಪತಃ ಹೇಳಿ ಈ ಸಲದ ಸಮ್ಮೇಲನಕ್ಕೆ ಆರಿಸಲ್ಪಟ್ಟ ಶ್ರೀ. ಸಿ. ಆರ್. ಶ್ರೀನಿವಾಸನ್‌ರ ಗುಣ ಪ್ರಶಂಸೆ ಮಾಡಿ ಈ ಹೊಣೆಗಾರಿಕೆಯ ಸ್ಥಳಕ್ಕೆ ಅವರು ಸರ್ವ ರೀತಿಯಿಂದಲೂ ಯೋಗ್ಯರಾಗಿರುವರೆಂದು ಹೇಳಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಅವರನ್ನು ಬಿನ್ನವಿಸಿಕೊಂಡರು. ಅನಂತರ ಅಮೃತಬಜಾರ ಪತ್ರಿಕೆಯ ಸಂಪಾದಕ ಶ್ರೀ ತುಷಾರಕಾಂತಿ ಘೋಷರು, ಪಾಟಣಾದ ಆರ್ಯವೃತ್ತವೆಂಬ ಹಿಂದೀ ಪತ್ರಿಕೆಯ ಸಂಪಾದಕ ಶ್ರೀ ಠಾಕುರರು ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯ ಸಹಸಂಪಾದಕ ಶ್ರೀ ನಾಯಕ ವೆಂಕಟರಾಯರು ದೇವದಾಸರ ಸೂಚನೆಗೆ ಬೆಂಬಲಕೊಟ್ಟರು. ಶ್ರೀ ಠಾಕೂರರು ಹಿಂದಿಯಲ್ಲಿಯೂ ಶ್ರೀನಾಯಕರು ಕನ್ನಡದಲ್ಲಿಯೂ ಭಾಷಣ ಮಾಡಿ ಸೂಚನೆಗೆ ಬೆಂಬಲ ಕೊಟ್ಟರು. "ಕರ್ನಾಟಕದಲ್ಲಿ ಅಖಿಲಭಾರತ ಪತ್ರಿಕಾ ಸಂಪಾದಕರ ಸಮ್ಮೇಲನ ಕೂಡುತ್ತಿರುವುದು ಇದೇ ಮೊದಲ, ದೇಶಭಾಷಾ ಪತ್ರಿಕೆಯ ಸಂಪಾದಕರೊಬ್ಬರು ಸಮ್ಮೇಲನದ ಅಧ್ಯಕ್ಷತೆ ವಹಿಸುವುದೂ ಇದೇ ಪ್ರಥಮ ಸಲ ಹೀಗೆ ಅಪೂರ್ವವಾದ ಈ ಸಮ್ಮೇಲನದ ಅಧ್ಯಕ್ಷತೆ ವಹಿಸಲು ಶ್ರೀ. ಶ್ರೀನಿವಾಸನ್‌ರು ಸರ್ವದೃಷ್ಟಿಯಿಂದಲೂ ಸಮರ್ಥರಿರುವರು. ಇವರಲ್ಲಿಯ ಈ ಯೋಗ್ಯತೆಯನ್ನು ಕಂಡೇ ಮಂಗಳೂರಿನಲ್ಲಿ ಕೂಡಿದ್ದ ಕರ್ನಾಟಕ ಪತ್ರಿಕಾಕರ್ತರ ಸಮ್ಮೇಲನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಂಡು ಗೌರವಿಸಿದ್ದುಂಟು. ಆದುದರಿಂದ ಶ್ರೀ ಸಿ. ಆರ್. ಶ್ರೀನಿವಾಸನ್‌ರು ಈ ಸಲದ ಅಧಿವೇಶನಕ್ಕೆ ಅಧ್ಯಕ್ಷರಾಗಬೇಕೆಂದು ಶ್ರೀ ದೇವದಾಸ ಗಾಂಧಿಯವರು ತಂದ ಸೂಚನೆಗೆ ನಾನು ಸಂತೋಷದಿಂದ ಸಮರ್ಥಿಸುತ್ತೇನೆ" ಎಂದು ಮುಂತಾಗಿ ಶ್ರೀ ನಾಯಕರು ನುಡಿದರು. ಮಹನೀಯರೇ, ಮತ್ತು ಮಹಳೆಯರೇ ಎಂದು ಶ್ರೀ ನಾಯಕರು ಭಾಷಣ ಪ್ರಾರಂಭಿಸಿದ ಕೂಡಲೆ ಸಭಿಕರು ಪ್ರಚಂಡ ಕರತಾಡನದಿಂದ ಅದನ್ನು ಸ್ವಾಗತಿಸಿದರು. ನಾಯಕರು ಮಾತಾಡುತ್ತಿರುವಾಗ ಮಾನ್ಯ ರಾಜಗೋಪಾಲಾಚಾರ್ಯರು ಆ ಕಡೆಗೆ ಲಕ್ಷವಿಟ್ಟು ಕುತೂಹಲದಿಂದ ಅದನ್ನು ಆಲಿಸುತ್ತಿದ್ದರು. ಶ್ರೀ ರಾಜಾಜಿಯವರಿಗೆ ಕನ್ನಡ ಭಾಷೆ ತಿಳಿಯುತ್ತಿರುವದು ವಾಚಕರನೇಕರಿಗೆ ಗೊತ್ತಿರಲು ಸಾಕು. ಈ ರೀತಿ ಅಧ್ಯಕ್ಷರಾಯ್ಕೆಯ ನಂತರ ಶ್ರೀ ದೇವದಾಸರು ಶ್ರೀ ಸಿ. ಆರ್. ಶ್ರೀನಿವಾಸನ್‌ರ ಕೈಹಿಡಿದುಎಬ್ಬಿಸಿ ಅವರನ್ನು ಅಧ್ಯಕ್ಷಸ್ಥಾನದಲ್ಲಿಕುಳ್ಳಿರಿಸಿದರು. ಆಬಳಿಕ ಅಧ್ಯಕ್ಷರು ತಮ್ಮ ವಿದ್ವತ್ಪೂರ್ಣವಾದ ಭಾಷಣ ಪ್ರಾರಂಭ ಮಾಡುವ ಮೊದಲು ಶ್ರೀ ಕೆ. ಶ್ರೀನಿವಾಸನ್‌ರು ಕಳೆದ ವರುಷ ಅಧ್ಯಕ್ಷರಾಗಿ ಪರಿಷತ್ತಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದ ಅಧ್ಯಕ್ಷ ದೇವದಾಸರನ್ನಭಿನಂದಿಸುವ ಗೊತ್ತುವಳಿಯನ್ನು ಮಂಡಿಸಿದರು. ಶ್ರೀ ದೇಶಬಂಧು ಗುಪ್ತರು ಅದಕ್ಕೆ ಅನುಮೋದನ ಕೊಟ್ಟ ನಂತರ ಸೂಚನೆ ಸ್ವೀಕೃತವಾಯಿತು. ಸ್ಥಾಯೀ ಸಮಿತಿಯ ಸದಸ್ಯರ ನಾಮಪತ್ರ ಸ್ವೀಕಾರದ ನಂತರ ಅಧಿವೇಶನವು ಮರುದಿನಕ್ಕೆ ಮುಂಬರಿಯಿತು. ಸಾಯಂಕಾಲ ೬ ಗಂ. ಸ್ವಾಗತಸಮಿತಿಯವರು ಲಾಲಬಾಗಿನಲ್ಲಿಯ ಕಾಜಿನಮನೆಯಲ್ಲಿ ಸಂಪಾದಕರಿಗೆ ಸತ್ಕಾರಕೂಟವನ್ನೇರ್ಪಡಿಸಿದ್ದರು. ಈ ಸಮಾರಂಭಕ್ಕೆ ಮೈಸೂರಿನ ಮಂತ್ರಿಗಳೂ ಅನೇಕ ಪ್ರತಿಷ್ಠಿತ ನಾಗರಿಕರೂ ದಯಮಾಡಿಸಿದ್ದರು. ಸತ್ಕಾರಕೂಟದ ನಂತರ ಸೆಂಟ್ರಲ್ ಕಾಲೇಜಿನ ನೃತ್ಯಸಂಸ್ಥೆಯ ಬಾಲಿಕೆಯರು ವಿವಿಧ ನೃತ್ಯಗಳನ್ನು ಪ್ರದರ್ಶಿಸಿದರು. ಶೈಕ್ಷಣಿಕ ಚಿತ್ರಗಳನ್ನೂ ಪ್ರದರ್ಶಿಸಲಾಯಿತು. ಇಂದಿನ ಕಾರ್ಯಕ್ರಮ ಇಂತು ಮನೋರಂಜನೆಯಲ್ಲಿ ಕೊನೆಗೊಂಡಿತು.

ಮಂಗಳವಾರ ದಿನ

ಮಂಗಳವಾರ ದಿನ ಮುಂಜಾನೆ ವಿಷಯನಿಯಾಮಕ ಸಮಿತಿಯ ಸದಸ್ಯರನ್ನಾರಿಸುವ ಮೊದಲು ಸ್ಥಾಯೀ ಸಮಿತಿಯ ಸದಸ್ಯರನ್ನಾರಿಸುವ ಕಾರ್ಯನಡೆಯಿತು ಸ್ಥಾಯಿಸಮಿತಿಗೆ ೨೧ ಸದಸ್ಯರನ್ನಾರಿಸುವದಿದ್ದು ಹೆಚ್ಚು ಜನರು ನಿಂತದ್ದರಿಂದ ಮತದಾನ ನಡೆಯಿತು. ಬಹಿರಂಗ ಅಧಿವೇಶನದಲ್ಲಿ ಹೆಚ್ಚು ಚರ್ಚೆ ನಡೆಯಬಾರದೆಂದು ಪ್ರತಿನಿಧಿಗಳನ್ನೆಲ್ಲ ವಿಷಯನಿಯಾಮಕ ಸಮಿತಿಯಲ್ಲಿ ಸೇರಿಸಿಕೊಂಡದ್ದರಿಂದ ಅಲ್ಲಿ ಚರ್ಚೆಗೆ ಹೆಚ್ಚು ಸಮಯ ಹತ್ತಿತು. ಸಂಪಾದಕರ ಬರೆಹದ ಮಟ್ಟ ಎಂತಿರಬೇಕು, ಎಂಥ ಬರೆವಣಿಗೆಗಳಿಗೆ ಅವರು ಪ್ರೋತ್ಸಾಹ ಕೊಡಬಾರದು, ಸ್ವತಂತ್ರ ಭಾರತದ ಇಂದಿನ ಯುಗದಲ್ಲಿ ವಿಧಾಯಕ ಸೂಚನೆಗಳತ್ತ ಸಂಪಾದಕರು ಗಮನಕೊಡುವದರ ಅವಶ್ಯಕತೆ, ಟೀಕೆಯ ರೀತಿ ನೀತಿ ಎಂತಿರಬೇಕು ಮುಂತಾದ್ದರ ಬಗ್ಗೆ ಸ್ವಾರಸ್ಯದ ಚರ್ಚೆ ನಡೆಯಿತು. ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳದೆ ಮಾತಾಡಿದವರೂ ಹಲವರಿದ್ದರು. ಪತ್ರಿಕಾ ಸಂಪಾದಕರ ಹೊಣೆಯನ್ನರಿಯದೆ ಹಿಂದುಸ್ತಾನ ಟಾಯಿಮ್ಸ ಪತ್ರಿಕೆಯ ಸಂಪಾದಕರು ಬರೆಹಗಳನ್ನು ಪ್ರಸಿದ್ಧಿಸಿದ್ದಕ್ಕಾಗಿ ಅವರನ್ನು ನಿಷೇಧಿಸುವ ಗೊತ್ತುವಳಿಯ ಸೂಚನೆಯೊಂದನ್ನು ಬ್ಲಿಜ್ಜ ಪತ್ರಿಕೆಯ ಸಂಪಾದಕರು ಕಳುಹಿ ತಮ್ಮ ಪರವಾಗಿ ಶ್ರೀ ತ್ಯಾಗರಾಜನ್‌ರು ಅದನ್ನು ಮಂಡಿಸುವರೆಂದು ತಿಳಿಸಿದ್ದರು. ಆದರೆ ಅವಧಿಮೀರಿ ಬಂದದ್ದರಿಂದ ಆ ಗೊತ್ತುವಳಿ ಚರ್ಚೆಗೆ ಬರಲಿಲ್ಲ. ಭೋಜನೋತ್ತರ ಮತ್ತೆ ವಿಷಯನಿಯಾಮಕ ಸಮಿತಿಯ ಸಭೆ ಸೇರಿ ಎಲ್ಲ ವಿಷಯಗಳ ಚರ್ಚೆ ಮುಗಿದ ನಂತರ ಅದೇ ಬಹಿರಂಗ ಸಭೆಯಾಗಿ ಪರಿವರ್ತನೆ ಹೊಂದಿ ಎಲ್ಲ ನಿರ್ಣಯಗಳು ಸ್ವೀಕೃತವಾದವು. ಅಧ್ಯಕ್ಷರು ಸ್ವಲ್ಪದರಲ್ಲಿಯೇ ಸಮಾರೋಪ ಮಾಡಿ ಪತ್ರಿಕಾ ಸಂಪಾದಕರು ತಮ್ಮ ಹೊಣೆಯನ್ನರಿತುಕೊಂಡು ವ್ಯವಸಾಯ ಸಾಗಿಸಿಕೊಳ್ಳಬೇಕೆಂದು ಹೇಳಿ ತಮಗೆ ಎಲ್ಲರೂ ಈ ಕಾರ್ಯದಲ್ಲಿ ನೆರವಾದುದಕ್ಕೆ ಧನ್ಯವಾದಗಳನ್ನರ್ಪಿಸಿದರು. ಶ್ರೀ ಜೋಕಿಂ ಆಳ್ವರು ಅಧ್ಯಕ್ಷರನ್ನು ಅಭಿನಂದಿಸಿದ ನಂತರ ಅಧಿವೇಶನವು ಕೊನೆಗಂಡಿತು.

ಪೌರ ಸಭೆಯವರ ಸತ್ಕಾರ

ಸಾಯಂಕಾಲ ೬ ಗಂಟೆಗೆ ಪೌರ ಸಭೆಯವರು ಈಜುವ ಕೊಳದ ಪಟಾಂಗಣದಲ್ಲಿ ಸತ್ಕಾರಕೂಟವನ್ನೇರ್ಪಡಿಸಿದ್ದರು. ದಿವಾಣರೂ ಮಂತ್ರಿಗಳೂ ಪ್ರತಿಷ್ಠಿತ ನಾಗರಿಕರೂ ಸಮಾರಂಭಕ್ಕೆ ದಯಮಾಡಿಸಿದ್ದರು ಈಜುವ ಪಂದ್ಯಾಟಗಳೂ ನಡೆದುವು. ಪೌರ ಸಭೆಯ ಅಧ್ಯಕ್ಷರಾಗಿರುವ ಶ್ರೀ ಆರ್. ಸುಬ್ಬಣ್ಣಾ ಇವರು ಕನ್ನಡದಲ್ಲಿ ಎಲ್ಲರನ್ನೂ ಸ್ವಾಗತಿಸಿ ತಾವು ಬರೆದ ಭಾಷಣವನ್ನೋದಿದರು. ಅದರಲ್ಲಿ ಅವರು ಪತ್ರಿಕಾ ಪ್ರಪಂಚವನ್ನು ಬಣ್ಣಿಸಿ ಕರ್ನಾಟಕವೂ ಮೈಸೂರೂ ಇದರಲ್ಲಿ ಹಿಂದೆ ಬಿದ್ದಿಲ್ಲ ಎಂದು ಉದಾಹರಣೆಗಳನ್ನು ಕೊಟ್ಟು ಹೇಳಿರುವರು. ಅವರ ಭಾಷಣದ ನಂತರ ಅಧ್ಯಕ್ಷ ಶ್ರೀನಿವಾಸನ್‌ರು ತಮಿಳಿನಲ್ಲಿಅಯಿದು ನಿಮಿಷ ಮಾತಾಡಿ ತಮಗೆ ಸತ್ಕಾರ ಮಾಡಿದುದಕ್ಕೆ ಪೌರ ಸಭೆಯವರನ್ನು ಅಭಿನಂದಿಸಿ ಅನಂತರ ಅಂಗ್ಲ ಭಾಷೆಯಲ್ಲಿ ಭಾರತದಲ್ಲಿಯ ಪತ್ರಿಕೆಗಳ ಭವಿತವ್ಯವನ್ನು ಕುರಿತು ಹೇಳಿದರು. ಅನಂತರ ಶ್ರೀ ಮೋಹರೆ ಹಣಮಂತರಾಯರು ಪೌರಸಭೆಯವರನ್ನೂ ಸ್ವಾಗತ ಸಮಿತಿಯವರನ್ನೂ ಅಭಿನಂದಿಸುತ್ತ ಸಮ್ಮೇಲನವನ್ನು ಬೆಂಗಳೂರಿನಲ್ಲಿ ಕೂಡಿಸಬೇಕೆಂದು ವಿಚಾರ ನಡೆದಾಗ ತಾವು ಬೆಂಗಳೂರಿಗೆ ಬಂದುದನ್ನು ಉಲ್ಲೇಖಿಸಿ ತಾವು ಸಂಪಾದಕರ ಪರಿಷತ್ತಿನ ಸದಸ್ಯರಾಗಿರದಿದ್ದರೂ ಬೆಂಗಳೂರಿನ ಪತ್ರಿಕಾಕರ್ತರು ಸಮ್ಮೇಲನವನ್ನು ಯಶಸ್ವಿ ಮಾಡಲು ಇಷ್ಟೊಂದು ಪರಿಶ್ರಮಪಟ್ಟದ್ದಕ್ಕಾಗಿ ಅವರನ್ನು ಅಭಿನಂದಿಸಿದರು. ಈ ವರೆಗೆ ನಡೆದ ಅಧಿವೇಶನಗಳೆಲ್ಲಕ್ಕಿಂತ ಬೆಂಗಳೂರಿನ ಅಧಿವೇಶನವು ಎಲ್ಲ ಬಗೆಯಿಂದ ಅಪೂರ್ವವಾಗಿದ್ದಿತು. ಹಿಂದಿನ ಯಾವ ಅಧಿವೇಶನಗಳಲ್ಲಿಯೂ ಸಂಪಾದಕರೆಲ್ಲರನ್ನು ಒಂದೇ ಕಡೆ ಇಳಿಸುವ ಮತ್ತು ಊಟ ಉಪಚಾರದ ವ್ಯವಸ್ಥೆಯಿರಲಿಲ್ಲ. ಇಲ್ಲಿಯ ತಿಂಡಿ ತಿನಿಸುಗಳಾದರೊ ರಾಜಠೀವಿಯವಾಗಿದ್ದವು ವಾಹನ ಸೌಕರ್ಯದ ಏರ್ಪಾಟು ಚನ್ನಾಗಿದ್ದಿತು. ಅಲ್ಲದೆ, ಮುಖ್ಯ ಭಾಷಣಗಳೂ ಅಪೂರ್ವವಾಗಿದ್ದುವು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅಂಗ್ಲ ಭಾಷೆಯ ಪತ್ರಿಕೆಗಳ ಯುಗವು ಮುಗಿಯುತ್ತ ಬಂದಿದೆ. ದೇಶ ಭಾಷಾ ಪತ್ರಿಕೆಗಳಿಗೆ ಇನ್ನು ಹೆಚ್ಚು ಮಹತ್ವ ಬರಲಿದೆ, ಬರುವದು. ದೇಶ ಭಾಷಾ ಪತ್ರಿಕೆಗಳನ್ನು ಹೆಚ್ಚಾಗಿ ಹಳ್ಳಿಗರು ಓದುವರು. ಇದನ್ನೆಲ್ಲ ಅರಿತುಕೊಂಡು ಅಧಿಕಾರಿಗಳು ದೇಶ ಭಾಷಾ ಪತ್ರಿಕೆಗಳ ಬಗ್ಗೆ ಇದ್ದ ತಮ್ಮ ಧೋರಣವನ್ನು ಬದಲಿಸಬೇಕು, ಅವುಗಳಿಗೆ ಹೆಚ್ಚು ಮನ್ನಣೆಯನ್ನು ಕೊಡುವುದನ್ನು ಕಲಿಯಬೇಕು. ಅಂದರೇನೆ ಆಡಳಿತಗಾರ ಮತ್ತು ಪ್ರಜೆಗಳಲ್ಲಿ ಸ್ನೇಹ ಸೌಹಾರ್ದ ಬೆಳೆಯಲನುಕೂಲವಾಗುವದು. ಇದರಲ್ಲಿ ಪತ್ರಿಕೆಗಳು ಹೆಚ್ಚು ಸಹಾಯ ಮಾಡಬಲ್ಲವು. ಎಂದು ಮುಂತಾಗಿ ಹೇಳಿ ಸಮ್ಮೇಲನವನ್ನು ಇಷ್ಟೊಂದು ಯಶಸ್ವಿಯಾಗಿಸುವದಕ್ಕೆ ಕಾರಣರಾದವರೆಲ್ಲರನ್ನು ಅಭಿನಂದಿಸಿದರು. ಇಷ್ಟಕ್ಕೆ ಕಾರ್ಯಕ್ರಮ ಕೊನೆಗಂಡಿತು.

ಸಮ್ಮೇಲನದ ಸವಿನೆನಪೆಂದು ಸ್ವಾಗತ ಸಮಿತಿಯವರು ಸಂಚಿಕೆಯೊಂದನ್ನು ಹೊರಡಿಸಿ ಮೈಸೂರಿನಲ್ಲಿಯ ಪತ್ರಿಕಾ ವ್ಯವಸಾಯದ ಪ್ರಗತಿಯನ್ನು ಹೊರಗಿನ ಸಂಪಾದಕರಿಗೆಲ್ಲ ಮಾಡಿಕೊಟ್ಟಿರುವರು. ಹಿಂದುಸ್ತಾನ ಸರಕಾರದ ಸುದ್ದಿ ಮತ್ತು ಆಕಾಶವಾಣಿ ಶಾಖೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಈ ಸಂಚಿಕೆಗಾಗಿ ಸಂದೇಶ ಕಳಿಸುತ್ತ ಮಾನ್ಯ ರಾಜಗೋಪಾಲಾಚಾರ್ಯರವರಿಂದ ಪ್ರಾರಂಭಿಸಲ್ಪಡಲಿರುವ ಸಮ್ಮೇಲನವು ಯಶಸ್ವಿಯಾಗಲೆಂದು ಹಾರಯಿಸಿ ಸಂಸ್ಥಾನಗಳಲ್ಲಿಯ ಸಂಪಾದಕರಿಗೆ ಈ ಪರಿಷತ್ತಿನಲ್ಲಿ ಪ್ರವೇಶವಿಲ್ಲದಿರುವ ನಿರ್ಬಂಧವು ಈಗಲಾದರೂ ದೂರಾಗಲೆಂದು ಬಯಸಿರುವರು. ಈ ಸಲ ಸ್ವೀಕೃತವಾದ ಗೊತ್ತುವಳಿಹೊಂದರಿಂದ ಸಂಸ್ಥಾನಗಳಲ್ಲಿಯ ಸಂಪಾದಕರಿಗೆ ಪರಿಷತ್ತಿನ ಸದಸ್ಯರಾಗುವ ಅವಕಾಶ ದೊರೆತಿದೆ. ಮೈಸೂರಿನಲ್ಲಿ ಪತ್ರಿಕಾ ಸ್ವಾತಂತ್ರ್ಯವೆಂಬ ಪ್ರಕಟನೆಯೊಂದು ಸಂಪಾದಕರಿಗೆ ಕೊಡಲಾಯಿತು. ಪತ್ರಿಕೆಗಳ ಮೇಲೆ ಸರಕಾರದವರು ಎಂತು ಗದಾಪ್ರಹಾರ ಮಾಡಿರುವರೆಂಬುದು ಇದರಲ್ಲಿ ಉಲ್ಲೇಖಿಸಲಾಗಿದೆ.

ಸ್ವತಂತ್ರ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಆಸ್ಥಾನ ವಿದ್ವಾನ್ ಶ್ರೀ ಬಿ ಶಿವಮೂರ್ತಿಶಾಸ್ತ್ರಿಗಳು ಮೈಸೂರು ಸಂಸ್ಥಾನ ಹೊರಗಿನಿಂದ ಬಂದ ಕರ್ನಾಟಕದ ಸಂಪಾದಕರಿಗೆಲ್ಲ ಬುಧುವಾರ ಮುಂಜಾನೆ ತಮ್ಮ ಮನೆಯಲ್ಲಿ ಸತ್ಕಾರಕೂಟವನ್ನೇರ್ಪಡಿಸಿದ್ದರು. ಶ್ರೀ ಜಿನರಾಜ ಹೆಗ್ಗಡೆ ಮತ್ತು ರೆ. ಚನ್ನಪ್ಪ ಉತ್ತಂಗಿ ಮತ್ತು ಆಗರಂ ರಂಗಯ್ಯ ಇವರೂ ಬಂದಿದ್ದರು. ಆ ಕಾಲಕ್ಕೆ ಕರ್ನಾಟಕ ಏಕೀಕರಣದ ಬಗ್ಗೆ ಮಹತ್ವದ ಮಾತುಕತೆಗಳು ನಡೆದುವು.

—ಹರಿಜನ್‌ದಲ್ಲಿ
ಶ್ರೀ ಮಶ್ರೂವಾಲಾರಿಂದ

...ಪಡಿಸುವ ಉಪಾಯ

...ೋಷಗಳು—ಪಕ್ಷಪಂಗಡಗಳಿರುವ

ನಿಯಾಮಕ ಸಮಿತಿ ತಾನೇ ಮೊದಲು ಪಾಸು ಮಾಡಿದ ನಿರ್ಣಯವನ್ನು ಪಂಡಿತ ಜವಾಹರಲಾಲರ ಬಿನ್ನಹದ ಮೇರೆಗೆ ಬದಲಿಸಿತು.) ಹೀಗೆ ಕೊನೆಗೆ ನಿರ್ಣಯವಾಗುವದು ತಲೆಯ ಬಲಾಬಲಗಳ ಮೇಲೆಯೆ. ತಲೆ ಬಲವಾಗಿದ್ದರೆ ಕೈಗಳು ಮುಗಿಯುತ್ತವೆ; ಕೈಗಳು ಬಲವಾಗಿದ್ದರೆ ತಲೆ ಬಾಗುತ್ತದೆ. ಹಾಗಾದರೆ ಪ್ರಜಾ

ಯೊಬ್ಬ ಅಧ್ಯಕ್ಷನೂ ತಾನು ಅಧಿಕಾರ ಸ್ವೀಕಾರ ಮಾಡಿದ ಕ್ಷಣದಿಂದ ಪಕ್ಷಾತೀತನಾಗಿ ನಡೆದುಕೊಳ್ಳುವದಾಗಿ ಎಲ್ಲ ಪಕ್ಷಗಳಿಗೂ ಆಶ್ವಾಸನ ಕೊಡುವದಿಲ್ಲವೆ? ಸರಕಾರದ ಮಂತ್ರಿಗಳಿಗೂ ಇದೇ ನಿಯಮ ಅನ್ವಯಿಸಬೇಕು. ಅವರು ಶಾಸನ ಸಭೆಯ ಬಹುಮತ ಪಕ್ಷದವರಿಂದಲೇ ಆರಿಸಲ್ಪಟ್ಟು ತಮ್ಮದೇ ಪಕ್ಷವನ್ನು ಮಾಡಿಕೊಳ್ಳಬಹುದು. ಆದರೆ ಅವರನ್ನು ಆ ಪಕ್ಷಕ್ಕೆ ಅಥವಾ ವರ್ಗಕ್ಕೆ ಸೇರಿದವರೆಂಬ ಒಂದೇ ಕಾರಣಕ್ಕಾಗಿ ಆರಿಸದೆ, ಆಡಳಿತೆಯ ಕಾರ್ಯಗಳಲ್ಲಿ ಪಕ್ಷ ವರ್ಗಗಳನ್ನು ಮೀರಿ ನ್ಯಾಯವಾಗಿ ನಡೆದುಕೊಳ್ಳುವ ಶಕ್ತಿಯುಳ್ಳವರೆಂದು ಆರಿಸಬೇಕು.

ಅಧಿಕಾರ ಸ್ಥಾನವನ್ನು ತನ್ನ ಪಕ್ಷದ ಬಲವರ್ಧನೆಗಾಗಿ ಅಥವಾ ತನ್ನ ವರ್ಗದ ಜನರಿಗೆ ಅನುಗ್ರಹ ಮಾಡುವದಕ್ಕಾಗಿ ಉಪಯೋಗಿಸಿಕೊಂಡರೆ ಅದು ಕರ್ತವ್ಯಚ್ಯುತಿ ಮತ್ತು ಅಧಿಕಾರಸ್ವೀಕಾರ ಪ್ರತಿಜ್ಞೆಯ ಭಂಗ ಎಂದು ಪರಿಗಣಿಸಲ್ಪಡಬೇಕು. ಆದರೆ ಅಧು



ಬ್ರಿಟಿಶರ ಅದ್ಭುತ ಯುದ್ಧೋತ್ತರ ಪುನರುತ್ಥಾನ ಪ್ರಯತ್ನದಲ್ಲಿ ನಿರ್ಯಾತ ಬೆಳೆಸುವ ಸಾಹಸವೂ ಒಂದು. ಜಪಾನು ಸೋತನಂತರ ಬ್ರಿಟನ್ನು ನಿರ್ಯಾತ ಮಾಡಿದ ಸೈಕಲ್ಲುಗಳ ಸಂಖ್ಯೆ ೧೦ ಲಕ್ಷ ಮೀರಿದೆ. ಆ ಸಂದರ್ಭದಲ್ಲಿ ಬ್ರಿಟನ್ನಿನ ಪೂರೈಕೆ ಮಂತ್ರಿ ಶ್ರೀ ಸ್ಮಾಸರು ೧೦,೦೦,೦೬೦ ನೇ ನಿರ್ಯಾತ ಸೈಕಲ್ಲನ್ನು ಏರಿ ತೋರಿಸಿದ್ದು.

ತಂತ್ರವನ್ನುಸು — ರಾಜ್ಯಹೇತುವಾಗುವಂತೆ ಹೇಗೆ ವ್ಯವಸ್ಥೆಗೊಳಿಸಬೇಕು?

ಪಕ್ಷಾತೀತತೆ ಅವಶ್ಯ

"ಕ" ನಿಗೂ "ಗ" ನಿಗೂ ಜಗಳವಾದರೆ ಇಲ್ಲವೆ ಮತಭೇದವುಂಟಾದರೆ, ಮತ್ತು ಅವರಿಬ್ಬರೂ ವಿವೇಕಿಗಳಾಗಿದ್ದು ಸಮಂಜಸವಾದ ಒಪ್ಪಂದವಾಗಬೇಕೆಂದು ಅಪೇಕ್ಷಿಸುತಿದ್ದರೆ, ಅವರು ವಿವಾದವನ್ನು ಒಬ್ಬ ಅಥವಾ ಕೆಲ ನ್ಯಾಯಾಧೀಶರಿಗೋ ಮಧ್ಯಸ್ಥರಿಗೋ ಒಪ್ಪಿಸುವರು. ನ್ಯಾಯಾಧೀಶರನ್ನಾಗಲಿ ಮಧ್ಯಸ್ಥರನ್ನಾಗಲಿ ಆರಿಸುವಾಗ ಅವರು ಯಾವುದಾದರೊಂದು ಪಕ್ಷದ ಪ್ರಸಿದ್ಧ ಪಕ್ಷಪಾತಿಗಳು ಅಥವಾ ಅದರಲ್ಲಿ ಆಸಕ್ತಿಯುಳ್ಳವರು ಎಂಬುದನ್ನು ನೋಡದೆ, ಭಯ ದಾಕ್ಷಿಣ್ಯಗಳಿಗೊಳಗಾಗದೆ ಮತ್ತು ಪಕ್ಷಪಾತವಿಲ್ಲದೆ ತೀರ್ಪು ಕೊಡಲು ಸಮರ್ಥರೋ ಎಂದು ನೋಡಲಾಗುತ್ತದೆ. ವಿವಾದಿಗಳಲ್ಲೊಬ್ಬನ ಮೇಲೆ ವಿಶೇಷ ಪ್ರೀತಿ ಅಥವಾ ಅಪ್ರೀತಿಯುಳ್ಳ ಅಥವಾ ಅವನ ಹಿತದಲ್ಲಿ ವಿಶೇಷ ಆಸಕ್ತಿಯುಳ್ಳ ಮನುಷ್ಯನು ತೀರ್ಪು ಕೊಡಲು ಯೋಗ್ಯನೆಂದು ಸಾಮಾನ್ಯವಾಗಿ ಭಾವಿಸಲ್ಪಡುವದಿಲ್ಲ. ನ್ಯಾಯಸ್ಥಾನಗಳಲ್ಲಿಯೂ ಪಂಚಾಯತಿಗಳಲ್ಲಿಯೂ ನಮಗಿರುವ ವಿಶ್ವಾಸ ಅವುಗಳ ಮುಖ್ಯಾಧಿಕಾರಿಗಳ ನಿಷ್ಪಕ್ಷಪಾತ, ನಿರ್ವಿಕಾರತೆಗಳನ್ನೇ ಅವಲಂಬಿಸಿದೆ.

ಅದೇ ಪ್ರಕಾರ, ಇತರ ಆಡಳಿತೆಯ ಶಾಖೆಗಳಲ್ಲಿಯೂ ಜನರು ಅಪೇಕ್ಷಿಸಬೇಕಾದ್ದು ಮತ್ತು ಆಳುವವರು ಅಧಿಕಾರ ಸ್ವೀಕಾರ ಮಾಡುವ ಮೊದಲು ವಾಗ್ದಾನ ಮಾಡಬೇಕಾದ್ದೆಂದರೆ, ತಾವು ಭಯ ದಾಕ್ಷಿಣ್ಯಗಳಿಗೊಳಗಾಗದೆ ಕರ್ತವ್ಯಗಳನ್ನು ನೆರವೇರಿಸುವೆವೆಂದು. ಅಂದರೆ, ತಮ್ಮ ರಾಜಕೀಯ ವಿಚಾರಗಳೇನೇ ಇರಲಿ, ಮತ್ತು ತಾವು ಯಾವ ವರ್ಗಕ್ಕೆ ಸೇರಿದವರೇ ಆಗಲಿ, ತಮ್ಮ ಈ ವಿಶಿಷ್ಟ ಸಂಬಂಧಗಳನ್ನು ಲಕ್ಷಿಸದೆ, ಮನುಷ್ಯ ಯತ್ನಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಪಕ್ಷದ ಅಥವಾ ವರ್ಗದ ವಿಚಾರಗಳನ್ನು ಮೀರಿ ನ್ಯಾಯ ರೀತಿಯಲ್ಲೇ ಅವರು ವಿಚಾರಿಸಲು ವಾಕ್ಬದ್ಧರಾಗಬೇಕು. ಶಾಸನ ಸಭೆಯ ಅಥವಾ ನಗರ ಸಭೆಯ ಪ್ರತಿ

ನಿಕ ಪ್ರಜಾತಂತ್ರದಲ್ಲಿ ಪ್ರಚಲಿತವಾಗಿರುವ ರೂಢಿ ತದ್ವಿರುದ್ಧವಾದುದು. ಎಲ್ಲ ಸಣ್ಣದೊಡ್ಡ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಅನುಪ್ರಮಾಣ ಪ್ರಾತಿನಿಧ್ಯದ ಬೇಡಿಕೆಯೇಳಲು ಇದೇ ಕಾರಣ. ಅನುಪ್ರಮಾಣ ಪ್ರಾತಿನಿಧ್ಯದ ಬೇಡಿಕೆಯ ಕೊಳೆ ಎಷ್ಟು ಹಬ್ಬಿದೆಯೆಂದರೆ, ಯಾವುದೊಂದು ಸಾರ್ವಜನಿಕ ಸಂಸ್ಥೆಯ ಆಯ್ಕೆಯಾಗಲಿ ನೇಮಕವಾಗಲಿ ಆಗಬೇಕಾದರೂ ತನ್ನವರ ತಲೆಗಳನ್ನೆಣಿಸಿ ತನಗೆ ಇಷ್ಟು ಸ್ಥಾನಗಳು ಸಿಕ್ಕಲೇಬೇಕೆಂದು ಕೂಗೆಬ್ಬಿಸದ ಒಂದೇ ಒಂದು ದೊಡ್ಡ ಜಾತಿಯಾಗಲಿ, ಪಂಥವಾಗಲಿ, ಪ್ರದೇಶವಾಗಲಿ, ಘಟಕವಾಗಲಿ ಇಲ್ಲವೆನ್ನಬಹುದು. ಸಾಮರ್ಥ್ಯಕ್ಕೂ ಸಚ್ಚಾರಿತ್ರ್ಯಕ್ಕೂ ಬೆಲೆಯೇ ಇಲ್ಲ. ಆ ವರ್ಗಕ್ಕೆ ಸೇರಿದ್ದರೆ ತೀರಿತು.

ಇದರಿಂದ ಸುರಾಜ್ಯ ಹುಟ್ಟಲಾರದು. ಈ ಪದ್ಧತಿಯನ್ನನುಸರಿಸುವ ರಾಜ್ಯಪದ್ಧತಿ, ಕೇಂದ್ರೀಕೃತವಾಗಿರಲಿ ವಿಕೇಂದ್ರೀಕೃತವಾಗಿರಲಿ, ಅದು ಅತ್ಯಂತ ವ್ಯಾಪಕವಾದ ಮತದಾನ ಪದ್ಧತಿಯಿಂದ ಬೇಕಾದರೂ ಆರಿಸಲ್ಪಟ್ಟಿರಲಿ, ನೀತಿಭ್ರಷ್ಟವಾಗಿ ಪರಿಣಮಿಸದಿರದು. ಅದರಲ್ಲಿ ಬಲಿಷ್ಠರು ದುರ್ಬಲರನ್ನು ಹತ್ತಿಕ್ಕದಿರರು. ಪ್ರಾಚೀನ ಭಾರತದ ಗಣರಾಜ್ಯ ಸಂಸ್ಥೆಗಳೂ ಪಂಚಾಯತಿಗಳೂ ಅವನತಿ ಹೊಂದಿದ್ದಕ್ಕೂ ವಿದೇಶದ ಆಕ್ರಮಣಶೀಲರು ಭಾರತವನ್ನು ಬಾರಿಬಾರಿಗೂ ಗೆದ್ದದ್ದಕ್ಕೂ ಈ ಬಗೆಯ ದಬ್ಬಾಳಿಕೆಯೇ ಕಾರಣವಾಗಿರಬೇಕೆಂದು ನನಗೆ ಅನಿಸುತ್ತದೆ. ಅದು ನಿಜವಾಗಿ ಬಲಿಷ್ಠವಾದ ಕೇಂದ್ರವನ್ನು ಉಂಟುಮಾಡಲಾರದು.

ಆಡಳಿತೆಗಾರರು ಪ್ರಜೆಯ ಮತ್ತು ಅದರ ಪ್ರತಿಯೊಂದು ವರ್ಗದ ಮನಸನ್ನು ಅರಿತಿರಬೇಕಾದ್ದು ಅಗತ್ಯ. ಯಾವುದೊಂದು ಸೂಚನೆಯ ಬಗ್ಗೆ ಅದಕ್ಕೆ ನೇರವಾಗಿ ಸಂಬಂಧಿಸಿದ ವರ್ಗದ ಅಭಿಪ್ರಾಯವೇನಿದೆ, ಆದರೆ ಜೀವನದ ಮೇಲೆ ಒಂದು ನೀತಿಯಿಂದಾಗಬಹುದಾದ ಪರಿಣಾಮವೇನೆಂದು ಅವರಿಗೆ ಸರಿಯಾದ ಸುದ್ದಿಯೂ ಯೋಗ್ಯ ಕಲ್ಪನೆಯೂ ಇರಬೇಕು. ಆ ಪ್ರಶ್ನೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಯೋಗ್ಯವಾದುದು

— ೧೦ ನೆಯ ಪುಟಕ್ಕೆ

ಮೂಲೆ ಮೂಲೆಗಳಿಂದ

ಅಮೇರಿಕೆದ ಹಿಂದಿನ ಸಂರಕ್ಷಣ ಮಂತ್ರಿಗಳಾಗಿದ್ದ ಜೇಮ್ಸ್ ಫೋರೆಸ್ಟಾಲರು ವಸತಿನ ೨ ಗಂಟೆಯ ಹೊತ್ತಿನಲ್ಲಿ ವಾಶಿಂಗ್ಟನ್ನಿನ ಬೆಥೆಸ್ಡಾ ಆಸ್ಪತ್ರೆಯ ಕಿಟಕಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡರು. ರಶಿಯನ್ನರು ಅಮೇರಿಕದ ಮೇಲೆ ದಾಳಿ ಮಾಡುವರೆಂಬ ವಿಚಾರದಿಂದ ಅವರ ತಲೆ ಕೆಲದಿನಗಳಿಂದ ನರಗಳ ದುರ್ಬಲತೆಗೀಡಾಗಿತ್ತು.

ದಕ್ಷಿಣ ಆಫ್ರಿಕವು ಹಿಂದುಸ್ತಾನದೊಡನೆ ದುಂಡುಮೇಜಿನ ಪರಿಷತ್ತಿನಲ್ಲಿ ಸೇರಲು ಸಿದ್ಧವಿದ್ದರೆ ರಾಜಕೀಯ ಪ್ರತಿನಿಧಿಗಳ ಮುಖಾಂತರ ದುಂಡುಮೇಜಿನ ವ್ಯವಸ್ಥೆ ಮಾಡಬಹುದೆಂದು ಜಿನೀವಾದಲ್ಲಿ ನಡೆದ ಸಂ. ರಾ. ಸಂಘದ ಸಾಮಾನ್ಯ ಸಭೆಗೆ ತೆರಳಿದ ಹಿಂದೀ ಶಿಷ್ಟಮಂಡಲದ ಧುರೀಣರಾದ ಶ್ರೀ ಎಂ. ಸಿ. ಸೆಟಲವಾಡರು ಹೇಳಿದರು. ಶ್ರೀ ಸೆಟಲವಾಡರು ಸ್ವಿಜರ್‌ಲೆಂಡಿನಲ್ಲಿ ಈಗ ವಿಶ್ರಾಂತಿ ಪಡೆಯುತ್ತಿದ್ದಾರೆ.

ಪಶ್ಚಿಮ ಬರ್ಲಿನ್ ರೇಲ್ವೆ ಕೆಲಸಗಾರರು ಸಂಪು ಹೂಡಿದಾಗ ಸೋವಿಯಟ್ ಕಾರಿಗೆಯ ಮುಖ್ಯಾಧಿಕಾರಿಯಾದ ಜನರಲ್ ನಾವಿಶಿನ್ನನು ಅಮೇರಿಕನ್ ವಿಭಾಗದಲ್ಲಿ ನಿರೀಕ್ಷಣೆಗೆ ಹೋದಾಗ ಸಂಪುಗಾರರು ಅವರ ಮೇಲೆ ದಾಳಿ ಮಾಡಿದರು. ಪಶ್ಚಿಮ ಭಾಗದ ಪೋಲೀಸರು ನಾವಿಶಿನ್ನನನ್ನು ಅವರಿಂದ ಪಾರು ಮಾಡಿ ರಕ್ಷಣೆಯಲ್ಲಿ ಸೋವಿಯಟ್ ಪ್ರದೇಶಕ್ಕೆ ಮುಟ್ಟಿಸಿದರು.

ಪ್ಯಾರಿಸ್ಸಿನಲ್ಲಿ ಸೇರಲಿರುವ ಚತೂರಾಷ್ಟ್ರ ಪರಿಷತ್ತಿಗಾಗಿ ಸೋವಿಯಟ್ ವಿದೇಶ ಮಂತ್ರಿಗಳಾದ ಆ್ಯಂಡ್ರ್ಯೂ ವಿಶಿನಸ್ಕಿಯವರು ಅಲ್ಲಿಗೆ ತಲುಪಿದ್ದಾರೆ. ಉಳಿದ ಮೂರು ರಾಷ್ಟ್ರಗಳ ವಿದೇಶ ಮಂತ್ರಿಗಳು ಆಗಲೇ ಅಲ್ಲಿಗೆ ಹೋಗಿದ್ದಾರೆ. (೧) ಜರ್ಮನಿಯಲ್ಲಿ ಒಂದೇ ಆಳಿಕೆ ಇರಬೇಕೋ ಹೇಗೆ (೨) ಅದು ಶಕ್ಯವಿಲ್ಲದಲ್ಲಿ ಆರ್ಥಿಕ ಐಕ್ಯ ಸ್ಥಾಪಿಸಿ ರಾಜಕೀಯವಾಗಿ ಅದನ್ನು ವಿಭಾಗಿಸಬೇಕೋ ಹೇಗೆ (೩) ಜರ್ಮನಿಯ ಒಂದು ಇಲ್ಲವೆ ಎರಡೂ ಭಾಗಗಳ ಪ್ರತಿನಿಧಿಗಳನ್ನು ಸಾಕ್ಷಿಗಾಗಿ ಕರೆಯಬೇಕೋ ಹೇಗೆ (೪) ಮಂತ್ರಿಗಳು ಒಪ್ಪಿದರೆ ಪಶ್ಚಿಮ ಜರ್ಮನಿಯ ಧುರೀಣರು ರಶಿಯನ್ ಪ್ರದೇಶದ ಕಮ್ಯುನಿಸ್ಟ ನಿಯಂತ್ರಿತ ಜರ್ಮನ್ ಜನತಾ ಕಾಂಗ್ರೆಸ್ಸಿನ ಪ್ರತಿನಿಧಿಗಳೊಂದಿಗೆ ಚರ್ಚೆ ಮಾಡಲು ಒಪ್ಪಬಹುದೋ ಹೇಗೆ ಎಂಬಿವೇ ಚರ್ಚಿಸಲ್ಪಡತಕ್ಕ ಸಂಗತಿಗಳು.

ಮಲಯಾದಲ್ಲಿ ಇರುವ ೬॥ ಲಕ್ಷ ಹಿಂದೀಯರಲ್ಲಿ ಯಾರೂ ಬಂಡುಗಾರರೊಡನೆ ಸಹಕರಿಸುತ್ತಿಲ್ಲವೆಂದು ಹಿಂದೀ ಪ್ರತಿನಿಧಿ ಶ್ರೀ [illegible] ಯವರು ಹೇಳಿದರು. ಮಲಯಾದ [illegible] ಅವಸರದ ನಿಬಂಧನೆಗಳನುಸಾರ ಸಂಶಯದ

ಮೇಲೆ [illegible] ಅವರ [illegible] ತ್ತಿರುವರೆಂದೂ ಅವರು [illegible]

ಕಾಂಭೋಡಿಯಾ: [illegible] ಕ್ಕೆ ಬಿಟ್ಟು [illegible]

[illegible] ಪ್ರದೇಶದಲ್ಲಿಯ ಬ್ರಿಟಿಶ [illegible] ಅಂತರಿಕ ಗಲಭೆಯಾದರೆ [illegible] ಜೋಡಣೆಗಳನ್ನು ಸಿದ್ಧಪಡಿಸಲಾಗಿದೆ [illegible] ಅಲ್ಲಿಯ ಸಂರಕ್ಷಣ ಖಾತೆಯ [illegible] ಹೇಳಿದನು.

ರಂಗೂನಿನ [illegible] ದೂರದಲ್ಲಿರುವ ಮತ್ತು ಕಾರೆನ್ನರ ಧಿಕ್ಕಾರ [illegible] ವಾಗಿದ್ದ ಇನ್‌ಸೀನ್ ನಗರವನ್ನು [illegible] ಸರಕಾರೀ ಸೈನ್ಯವು ಪುನಃ [illegible] ಬ್ರಹ್ಮೀ ಸೈನ್ಯ ಖಾತೆಯ [illegible] ಆದರೆ [illegible] ಕಾರದನ್ನು ಸ್ಥಾಪಿಸಿರುವುದಾಗಿ [illegible] ಘೋಷಿಸಿದ್ದಾರೆ.

ಬ್ರೆಜಿಲ್ಲಿನಲ್ಲಿ ಭಾರತದ [illegible] ಗಿದ್ದ ಶ್ರೀ ಎಂ. ಆರ್. [illegible] ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು [illegible] ಕಂಪನಿಯೊಡನೆ ಪುನಃ ವ್ಯಾಪಾರ [illegible] ವನ್ನು ಬೆಳೆಸಿಕೊಳ್ಳಲಿದ್ದಾರೆ. [illegible] ವನ್ನು ಅರ್ಜೆಂಟೀನದಲ್ಲಿ ಭಾರತದ [illegible] ಭಾರಿಗಳಾಗಿರುವ ಶ್ರೀ [illegible] ರಿಗೆ ಕೊಡಲಾಗುವದು.

ಸೈಪ್ರಸ್ ದ್ವೀಪದ ನಗರ ಸಭೆಯ [illegible] ಸ್ಥರ ಚುನಾವಣೆಯ ಕಾಲದಲ್ಲಿ [illegible] ಗಳಲ್ಲಿ ಘರ್ಷಣೆಯುಂಟಾಗಿ [illegible] ಸುದ್ದಿ. ರಾಜಧಾನಿಯಾದ [illegible] ಆಸ್ಪತ್ರೆಗೆ ಗಾಯಗೊಂಡ ಇಬ್ಬರನ್ನು [illegible] ಲಾಯಿತು. ಚುನಾವಣೆಯ ಗದಿಬಿಡಿಯ [illegible] ವಾಗಿ ಒಬ್ಬ ಮತದಾರನು ಹೃದಯ [illegible] ದಿಂದ ಸತ್ತನು.

ಟೋಕಿಯೋದಲ್ಲಿ ಇತ್ತೀಚೆಗೆ [illegible] ಭೂಕಂಪವು ದೊಡ್ಡ ದೊಡ್ಡ ಸೌಧಗ [illegible] ತೂಗಿ ತೊನೆಯಿಸಿತು; ಆದರೆ ಹೆಚ್ಚಿನ [illegible] ಸಂಭವಿಸಿಲ್ಲವೆಂದು ಸರಕಾರೀ ವರದಿ [illegible] ತ್ತದೆ.

ನ್ಯೂಯಾರ್ಕಿಗೆ ಹೋದ ಭಾರ [illegible] ಬಂಡವಾಳದಾರ ಎನಿಸಿದ ಶ್ರೀ [illegible] ಅಲ್ಲಿಯ ಪ್ರಮುಖ ಬಂಡವಾಳಿಗರನ್ನು [illegible] ಭಾರತೀಯ ಉದ್ಯಮಗಳ ಬೆಳವಣಿಗೆಗೆ [illegible] ರಿಂದ ಧನ, ಯಂತ್ರೋಪಕರಣ, [illegible] ತಂತ್ರಜ್ಞ ಮುಂತಾದ ಸೌಕರ್ಯಗಳನ್ನು [illegible] ಯಲು ಪ್ರಯತ್ನಿಸುತ್ತಿದ್ದಾರೆಂದು [illegible] ತ್ತದೆ.



ಸ್ತ್ರೀಯರಿಗೆ [illegible] ಕೊಡುವ ಉದ್ದೇಶದಿಂದ [illegible] ವಿವಿಧ ಕಾಲೇಜುಗಳ [illegible] ಕೊಡಲು ರಾಷ್ಟ್ರೀಯ [illegible] ಎಂಜಿನ್ನುಗಳ [illegible]

ಹೊಸರಂಗ

ಅಂಜನಗಡ

ಅಂಜನಗಡವೆಂಬುದೊಂದು ಪುಟ್ಟ ಸಂಸ್ಥಾನ ದರಂಶದಾಗಿತ ಹಕ್ಕುದಾರಿಕೆಯಿಂದ ಅರ ಸ್ಸನು ಆಳುತ್ತಿದ್ದನು. ಅರಸನ ರಾಜ್ಯ ಪ್ರಜೆಗಳು ಬಹಳ ಕಷ್ಟದಿಂದ ಬಳಲುತ್ತಿ ರೆ ಅವರ ಬಗ್ಗೆ ರಾಜನಿಗಾಗಲಿ ರಾಜನ ಗಿನ ಅಧಿಕಾರಿಗಳಿಗಾಗಲಿ ಕನಿಕರ ಹುಟ್ಟಿ ಅವರು ಮೊದಲಿನಂತೆಯೇ ಅವರಿಂದ ಕೆಲಸ ಮಾಡಿಸಿಕೊಳ್ಳುವುದು, ಅಧಿಕ ಂದು ವಸೂಲು ಮಾಡುವುದು ಮುಂತಾದ ಕೆಪ್ಪತ್ತಿಯಲ್ಲೇ ನಿರತರಾಗಿದ್ದರು. ಜಿಕರಿಗಿದವರು ತೆರೆದ ಒಂದು ಕಂಪನಿ ಕೆಲಸ ಮಾಡುವುದರಿಂದ ಅಲ್ಲಿಯ ಪ್ರಜೆ ಮತ್ತಿನ ಮಹತ್ವದ ಅರಿವಾಯಿತು. ನಿಗೆ ಬಿಟ್ಟು ಕೆಲಸ ಮಾಡಿ ಕೊಡುವುದು ಗೆ ಒಗ್ಗದಾಯಿತು. ಕಂಪನಿಯ ಮಿತಿ ದ ಲಾಭದ ದೆಸೆಯಿಂದ ರಾಜ್ಯದಲ್ಲಿ ಅತಿ ಟ ಹರಡಿತು. ಅದರಿಂದ ಸಂಸ್ಥಾನದಲ್ಲಿ



ಡಾ. ಚೌಧರಿ

ಅಲ್ಪ ಉಂಟಾಗಿ ಅನ್ನಾಹಾರಗಳು ಮೊಗುತ್ತ ಬಂದವು. ಬಡತನ ಬುಸ್ಸೆಂದು ರುತ್ತಿತು, ಆದರೆ ರಾಜನಿಗೂ ಅವನ ಂಡಿಗರಿಗೂ ಏನು ಮಾಡಲೂ ತೋರದು! ಡಿ ಶೀಮಿ, ವೈಭವ, ವಿಲಾಸ, ಅಧಿಕಾರ, , ಕಂದಾಯ ವಸೂಲಿ ಮುಂತಾದವನ್ನು ಸಿ ಅವರ ಮನವೊಪ್ಪದು.

ರಾಜ್ಯದಲ್ಲಿ ಡಾಕ್ಟರ್ ಚೌಧುರಿ ಎಂಬೊಬ್ಬ ದಕೀಲನೂ ಜನಸೇವಾತತ್ಪರನೂ ಆದ ರತೆಯುನಿದ್ದನು. ಅವನು ಪ್ರಜೆಗಳ ಕಷ್ಟ ಕಂಡು ಕರಗಿ ಅವರ ಸಂಘಟನೆಗೆ ಧಾರಿಯಾಗಿ ನಿಂತನು. ಅವನು ಒಬ್ಬ ನಿಷ್ಠ ಪ್ರಜಾಮಂಗಲಸಮಿತಿಯನ್ನು ಲು ಅಣೆಮಾಡಿದನು, ಅವನು ಅದರಂ ೯ ಕಟ್ಟಿದನು. ಈ ಚಟುವಟಿಕೆ ರಾಜ ಷರ ಅವಗಾಹನೆಗೆ ಬಂದು ಅವರು ಕತ್ತಿಕ್ಕಲು ಹಿಂಸಾಚಾರಕ್ಕಾರಂಭಿಸಿ ಆ ಹಿಂಸಾಪ್ರಕರಣದಲ್ಲಿ ಪ್ರಥಮತಃ ಕ್ಟರ್ ಚೌಧುರಿಯೇ ಬಲಿಯಾದನು. ಅಗ ಮಗಳು ಶುಭೆ ಅವನ ಉಪದೇಶ ದವನ್ನು ಮುಂಬರಿಸಲು ನಿಂತಳು. ಅವ ಸೆರೆಯುಳ್ಳಿಡಲಾಯಿತು. ಆ ಸಂದರ್ಭ ಅರಮನೆಯ ಖಾಸಾ ಕಾರ್ಯದರ್ಶಿ ಕ್ಷ (ಮುಕರ್ಜೀಯೆಂಬವನು ಚೌಧುರಿ ಮಗಳು ಮತ್ತು ಪ್ರಜೆಗಳ ಇಷ್ಟ ಇಷ್ಟಗಳನ್ನು ಮೊದಲೇ ಬಲ್ಲವ ದ್ದನಲ್ಲದೆ, ಅವರ ಸದುಪದೇಶವನ್ನು ತ ದವಾಡಿಸುದರ ಫಲವಾಗಿ ಚೌಧುರಿಯ ಭಕ್ತಿ, ಮಗಳ ಬಗ್ಗೆ ಪ್ರೀತಿ ಮತ್ತು ಗೆಳ ಬಗ್ಗೆ ಕನಿಕರ ತಳೆದವನಾಗಿದ್ದನು. ದರಿಂದ ಅವನು ಚೌಧುರಿಯ ಕೊಲೆಯಿಂದ ಷ್ಠನಾಗಿ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿ ತೆಯ ಅತಿಥಿಯಾದನು. ಅಗ ಸಮಸ್ತ ಗಳು ಶುಭೆಯ ಕಾರಾವಾಸದಿಂದ ಸಂತ ರಾಜದ್ವಾರಕ್ಕೆ ಅಬಾಲವೃದ್ಧರೆನ್ನದೆ ರಾಲು ಹೇಳಿಕೊಳ್ಳಲು ಬಂದರು. ನು ಕೊಡಲು ಅವರನ್ನು ಶಿಪಾಯಿಗಳಿಗೆ ಲು ಆಲೋಚಿಸಿದರೂ ಅಹಿಂಸಾಪರ ಸ್ರೇಹದಾದ ಅವರ ನಾಯಕನ ಮಾತು ಡಲೂ ಸಲಹೆಗಾರರೆ ಸಲಹೆಯಿಂದಲೂ ರದಿಗೆ ಅವರನ್ನು ಹಿಂಸಿಸದೆ ಅವರ ಇಷ್ಟ ಬಂದಿಗಳನ್ನು ಮುಕ್ತಮಾಡಿ ಪ್ರಜಾ ತ್ವಕ್ಕೆ ಆಶ್ರಯವಿತ್ತನು. ಮುಕರ್ಜೀಯು ದು ಶುಭೆ ಕಥೆಯನ್ನು ಮಂಗಲಾಂತವ ಗಿಮಾಡಿದಳು. ಪ್ರಜೆಗಳು ಚೌಧುರಿಯನ್ನು

ಕಲೆ ಮತ್ತು ವಿಮರ್ಶೆ

ಕಾವ್ಯ, ಸಂಗೀತ, ನೃತ್ಯ, ಶಿಲ್ಪಾದಿ ಕಲೆಗಳು ಜನರೆದುರು ಬರುವ ಉದ್ದೇಶವನ್ನು ಇಟ್ಟು ಕೊಂಡವು, ಪ್ರದರ್ಶನೀಯ ವಸ್ತುಗಳು. ಕಲೆಗೆ ಪ್ರತಿಭೆಯೆಂಬ ವಿಶೇಷ ಬುದ್ಧಿಗುಣ ಜನಕವೆನಿಸುವ ಒಂದು ಕಾರಣದಿಂದ ಶ್ರೀ ಕೆ. ವಿ. ಪುಟ್ಟಪ್ಪನವರೊಮ್ಮೆ "ನಾ ಹಾರ ಬಲ್ಲು ದನ್ನೇನಿ ಹಾರಬಲ್ಲಾ" ಎಂದು ಜನ ಪ್ರತಿನಿಧಿ ಯಾದ, ರಸಿಕರ ರಾಯಭಾರಿಯಾದ ವಿಮ ರ್ಶಕನಿಗೆ ರಣಾಹ್ವಾನವನ್ನು ಕೊಟ್ಟರು. ಅನೇ ಕರು ಈ ಮಾತಿಗೆ "ಸೈ ಸೈ, ಸರಿ ಸರಿ" ಎಂದರು. ಅದರಲ್ಲಿ ವಾಸ್ತವಿಕ ಸತ್ಯವಿರುವುದೂ ಸುಳ್ಳಲ್ಲ.

ಆದರೆ ನಿಜಸನ್ಯಾಸಿಗಳಿರುವವರೆಗೆ ಕಪಟ ಸನ್ಯಾಸಿಗಳಿರುವುದೂ ತ್ರಿಗುಣಾತ್ಮಕ ಪ್ರಪಂಚ ದಲ್ಲಿ ಸಹಜವೆನಿಸುವುದರಿಂದ ಶಿಷ್ಯರಿರುವಂತೆ ಶಿಪಾಯಿಗಳೂ ಇರಬೇಕಾಗುತ್ತದೆ. ಒಂದು ರಾಜ್ಯದ ಆಡಳಿತೆಯಲ್ಲಿ ದುಷ್ಟಶಿಕ್ಷಣ ಮತ್ತು ಶಿಷ್ಟಪರಿಪಾಲನಗಳಲ್ಲಿ ನಿಷ್ಣಾತರಾದ ಅಧಿಕಾರಿ ಗಳು ಇರುವುದು ಅವಶ್ಯಕವಿರುವಂತೆ ಕಲಾ ರಾಜ್ಯದಲ್ಲೂ ಪೂಜ್ಯಪೂಜಕರೂ ಅಸದನುಶಾಸ ಕರೂ ಎನಿಸುವ ವಿಮರ್ಶಕರು ಅಥವಾ ಸಹೃದ ಯರು ಎಂದಿನಿಂದಲೂ ಬಾಳಿಕೊಂಡು ಬಂದಿ ದ್ದಾರೆ. ಆದರೆ ಕವಿ ಮುಂತಾದ ಕಲೆಗಾರರಲ್ಲಿ ಹೇಗೋ ಈ ವಿಮರ್ಶಕರಲ್ಲೂ ಹಾಗೇ ಊರಿ ದ್ದಲ್ಲಿ ಹೊಲೆಗೇರಿಯಿದ್ದೇ ಇದೆ" ಎಂಬ ಗಾದೆ ಸಾರ್ಥಕತೆಯನ್ನು ಪಡೆದಿದೆ. ಆದುದರಿಂದ ಒಂದು ಕಲಾಕೃತಿಯ ನಿಜವಾದ ಯೋಗ್ಯತೆಯನ್ನು ತಿಳಿಯಲು ಬಹುಕಾಲದ ಬಹುಜನರಸಿಕರ ಏಕ ಮತ ಅಗತ್ಯವೆನಿಸುತ್ತದೆ. ಅಲ್ಲಿಯವರೆಗೆ ವಿದ್ವ ದ್ಯೋಗ್ಯವಿದ್ದರೂ ಒಬ್ಬನ ತೀರ್ಪೆಂದು ಸಾಮಾ ನ್ಯರು ಅದನ್ನು ಅಲ್ಲಗಳೆಯಬಹುದು. ಇಂಥ ಪರಿಸ್ಥಿತಿಗೆ ಸಿಕ್ಕಿಯೇ ಮಹಾಕವಿಭವಭೂತಿಯ 'ಕಾಲೋಹ್ಯಯಂನಿರವಧಿರ್ವಿಪುಲಾಚಪೃಥ್ವಿ." ಎಂದು ಸುಮ್ಮನಾದನು. ಇದು ಸಾತ್ವಿಕತೆ. ರಜಸ್ಸು ತಮಸ್ಸುಗಳು ಬೆಳೆದ ಈ ಕಾಲದಲ್ಲಿ ಮೇಲೆ ಹೇಳಿದಂತೆ ಕೆಲ ಕಲೆಗಾರರು ಕೆಲ ವೊಮ್ಮೆ ತಮ್ಮ ಕೃತಿ ವಿಮರ್ಶಕನಿಗೆ ಕಲ್ಪನಾ ತೀತವೆನಿಸಿದೆ ಎಂದು ಗಜರಿಕೊಳ್ಳುವರು, ರಾವಣ ಜಯಭೇರಿಯನ್ನು ಹೊಡೆದುಕೊಂಡು ಸಾಗುವರು.

ಪೂರ್ವದಲ್ಲಿ ಕಲೆಗಾರರು ವಿದ್ವಾಂಸರ ನಿಯ ಮಾಗ್ನಿಕುಂಡದಲ್ಲಿ ತಮ್ಮ ಕೃತಿಗಳನ್ನು ಸತ್ವಪರೀಕ್ಷೆಗೆ ಗುರಿಪಡಿಸಬೇಕಾಗಿತ್ತು. ಈ ಕಾರಣದಿಂದಲೇ ಇಂದಿನವರೆಗೆ ಅಭಿಜಾತ ವಾಙ್ಮಯದ ಪಿತ್ರಾರ್ಜಿತ ದೊರಕುವಂತಾ ಯಿತು. ಆದರೀಗ ಸ್ವಾಚ್ಛಂದ್ಯಯುಗವು ಸಾಹಿತ್ಯ, ನೃತ್ಯ, ಗೀತ, ಚಿತ್ರ ಮುಂತಾದವು ಗಳಲ್ಲಿ ಜೀವನದಲ್ಲಿ ಹೇಗೋ ಹಾಗೇ ಅವತರಿಸಿ ಬಿಟ್ಟಿದೆ. ಶೀಲವಿಮರ್ಶಕರಾದ ಗುರುಗಳಿಗೆ ಸಮಾಜದಲ್ಲಿ ಸ್ಥಾನಪಲ್ಲಟವಾಗುತ್ತ ಬಂದಿರು ವಂತೆ ರಸವಿಮರ್ಶಕರಿಗೆ ಕಲೆಗಳಲ್ಲಿ ಸ್ಥಾನ

೧೫ ನೆಯ ಪುಟಕ್ಕೆ

ಆರಾಧ್ಯದೇವತೆಯನ್ನಾಗಿ ಮಾಡಿಕೊಂಡು ಸ್ವಾತಂತ್ರ್ಯದಿಂದ ಮತ್ತರಾಗದೆ ರಾಜನಿಗೆ ನಮಿಸಿ ಅವನ ತಪ್ಪುಗಳನ್ನು ಮನ್ನಿಸಿ ಅವ ನೊಡನೆ ಸುಖವಾಗಿ ಇರಹತ್ತಿದರು.

ಕಥೆ ಭಾರತೀಯ ಕಾಂಗ್ರೆಸ್ಸಿನ ಅಹಿಂಸಾ ತ್ಮಕ ಹೋರಾಟದ ಒಂದು ನಕಲೆನಿಸುತ್ತದೆ. ವಿಶಾಲ ಭಾರತದಲ್ಲಿ ನಡೆದ ಈ ಸ್ವಾತಂತ್ರ್ಯ ಸಂಗ್ರಾಮವನ್ನು ಕಂಡು ಕೇಳಿದ ಜನರಿಗೆ ಇಲ್ಲಿ ಕಂಡುಬರುವ ಸನ್ನಿವೇಶಗಳು ಬಹಳ ಲಘು ವಾಗಿ, ಚಿಕ್ಕದಾಗಿ, ಕ್ಷುದ್ರವಾಗಿ ತೋರುತ್ತವೆ. ಕಥೆಯ ದೃಶ್ಯವಾದ ಬೆಳವಣಿಗೆಯಾದರೂ ಸ್ವಾಭಾವಿಕವೆನಿಸದೆ ಪೂರ್ವಸಿದ್ಧ ಅಥವಾ ದತ್ತಪ್ರೇರಣೆಯಂತೆ, ಭಾವಿ ಅನುಕೂಲ ಪರಿ ಣಾಮಕ್ಕೆ ತಕ್ಕ ಸನ್ನಿವೇಶವನ್ನು ಮೊದಲೇ ಉಪಾಧಿಮಿತಿಯಿಂದ ನಿಯಂತ್ರಿಸಿ ಇಟ್ಟಂತೆ ಕಾಣಿಸುತ್ತದೆ. ಈ ದೋಷವನ್ನು ಬಿಟ್ಟರೆ ಮಿಕ್ಕೆಲ್ಲ ಸಂಗತಿಗಳಲ್ಲಿ ಚಿತ್ರ ಚೆನ್ನಾಗಿದೆ. ನ್ಯೂಥಿಯೇಟರ್ಸಿನ ನಟರ ಅಭಿನಯ ಕೌಶ ಲದ ನಯ, ನಾಜೂಕು, ನಾಗರಿಕತೆ, ನುಣುಪು, ನಿಯಮಬದ್ಧತೆ ಮುಂತಾದವುಗಳಲ್ಲಿ ಯಾವ ಲೋಪವೂ ಬಂದಿಲ್ಲವೆಂಬುದು ಶ್ಲಾಘ್ಯವಾಗಿದೆ. ಸಂಸ್ಥಾನಿಕರಿಗೆ ಪಾತಕಲಿಸುವ ಈ ಕಾಲದಲ್ಲಿ ಸಂಸ್ಥಾನ ಪ್ರಜೆಗಳಿಗೆ ಇದೊಂದು ಪ್ರೋತ್ಸಾಹ ವೆನಿಸಬಹುದು, ಮಾದರಿ ಎನಿಸೀತು. ಹುಬ್ಬ ಳ್ಳಿಯ ಸುದರ್ಶನ ಟಾಕೀಸಿನಲ್ಲಿ (ಮೂರನೆಯ ವಾರ) ಈಗ ಈ ಚಿತ್ರ ಪ್ರದರ್ಶಿಸಲ್ಪಡುತ್ತಿದೆ. ಜನರ ಪ್ರೋತ್ಸಾಹ ಇತೋಪ್ಯಧಿಕ ದೊರಕ ಲೆಂದು ಹಾರೈಸುತ್ತೇನೆ.

—'ಕರ್ಮವೀರ'ದ ಪ್ರತಿನಿಧಿಯಿಂದ

ವಿಶೇಷ ಲೇಖ

ಪ್ರಜಾತಂತ್ರವನ್ನು "ಸುರಾಜ್ಯ"ಕ್ಕಾಗಿ

ಸದ್ಯದ ಪ್ರಜಾತಂತ್ರದ ಲೋ… ಅನಾಸ್ತಿನ ಮಹತ್ವ ಹೋಗಬ…

ರಾಷ್ಟ್ರಕಾರ್ಯದಲ್ಲಿ ಪ್ರಜೆಗಳಿಗೆ ನಿರ್ಣಾಯ ಕಾಧಿಕಾರವನ್ನು ಕೊಡುವ ಸಮರ್ಪಕ ವ್ಯವಸ್ಥೆಯಿರುವ ರಾಜ್ಯಪದ್ಧತಿಯೆಂಬರ್ಥ ವನ್ನು ಸೂಚಿಸಲು ಅನುಕೂಲವಾದುದೆಂದು "ಪ್ರಜಾತಂತ್ರ" ಶಬ್ದವನ್ನು ನಾನು ಉಪ ಯೋಗಿಸುತಿದ್ದೇನೆ. ಸಾಮಾನ್ಯವಾಗಿ ಜನರು ತಮ್ಮನ್ನು ತಾವೇ ತಮ್ಮ ಪ್ರತಿನಿಧಿಗಳ ಮೂಲಕ ಆಳಿಕೊಳ್ಳುವದು ಈ ಪದ್ಧತಿಯ ರೂಢ ರೂಪ. ವ್ಯವಹಾರದಲ್ಲಿ ಅದು ಸರ್ವಾನುಮತದಿಂದ ಆರಿಸಲ್ಪಟ್ಟ ಸಂಸ್ಥೆ ಯಾಗಿರದೆ ಜನರಲ್ಲಿ ಬಹುಸಂಖ್ಯರ ವಿಶ್ವಾ ಸಕ್ಕೆ ಪಾತ್ರವಾದ ಸಂಸ್ಥೆಯಾಗಿರುವದು:

ಅನುಪ್ರಮಾಣ ಪ್ರಾತಿನಿಧ್ಯ

ಆದರಿಂದ ಅನಿವಾರ್ಯವಾಗಿ ಪ್ರತಿನಿಧಿಗಳ ಆಯ್ಕೆಯಾಗಲೇಬೇಕಾಗುವದು. ಈ ಪದ್ಧ ತಿಯ ಶಾಖೆಗಳಲ್ಲಿ ಸಂಖ್ಯಾನುಗುಣ ಪ್ರಾತಿ ನಿಧ್ಯವೂ ಒಂದು. ಅಂದರೆ ಪ್ರಾತಿನಿಧ್ಯ ಪಡೆಯಬೇಕಾದ ಪ್ರತಿಯೊಂದು ವರ್ಗದ ಜನ ಸಂಖ್ಯೆಗನುಗುಣವಾಗಿ ಆಯಾ ಪ್ರತಿನಿಧಿಗಳು ಆರಿಸಲ್ಪಡುವರು.

ಇದೀಗ ಪ್ರಶ್ನೆ: ಸಂಖ್ಯಾನುಗುಣ ಪ್ರಾತಿ ನಿಧ್ಯದ ತತ್ವ ಯೋಗ್ಯವಾದುದೆ? ರಾಷ್ಟ್ರಕಾರ್ಯ ದಲ್ಲಿ ಎಲ್ಲ ಮುಖ್ಯ ವರ್ಗಗಳಿಗೂ ಸರಿಯಾದ ಪಾಲುದೊರೆಯಬೇಕೆಂಬ ತತ್ವದ ಆಧಾರದಿಂದ ಸಂಖ್ಯಾನುಗುಣ ಪ್ರಾತಿನಿಧ್ಯವನ್ನು ಸಾಮಾನ್ಯ ವಾಗಿ ಬೇಡಲಾಗುತ್ತದೆ. ಮತ್ತು ಆಯಾ ವರ್ಗಕ್ಕೆ ಸೇರಿದ ಅಥವಾ ಸಂಬಂಧಿಸಿದ ಜನರ ಸಂಖ್ಯೆಗನುಗುಣವಾಗಿ ಅದರದರ ಪ್ರತಿನಿಧಿ ಗಳಿಗೆ ರಾಜ್ಯದ ವಿವಿಧ ಅಂಗಗಳಲ್ಲಿ ಸ್ಥಾನ ಸಿಕ್ಕಿದರೆ ನ್ಯಾಯದೊರೆತಂತಾಯಿತೆಂದು ತಿಳಿ ಯಲ್ಪಡುತ್ತದೆ.

ಈ ಪದ್ಧತಿಯಲ್ಲಿ ರೊಟ್ಟಿಗಳನ್ನು ಹಂಚುವ ಪದ್ಧತಿಯನ್ನೇ ಪ್ರಾತಿನಿಧ್ಯಕ್ಕೂ ಅನ್ವಯಿಸು ತ್ತಾರೆ. ರೊಟ್ಟಿಗಳ ಸಂಖ್ಯೆ ಮಿತವಾಗಿದ್ದು ಅವನ್ನು ಪ್ರತಿಯೊಂದು ಗುಂಪಿಗೂ ಅದರದರ ಜನಸಂಖ್ಯಾನುಗುಣವಾಗಿ ಹಂಚಿದರೆ ಕೊನೆಗೆ ಪ್ರತಿಯೊಬ್ಬನಿಗೂ ಅಷ್ಟೇ ರೊಟ್ಟಿಗಳು ಸಿಕ್ಕು ತ್ತವೆ. ಅದೇ ಪ್ರಕಾರ ಸಂಖ್ಯಾನುಗುಣ ಅಥವಾ ಅನುಪ್ರಮಾಣ ಪ್ರಾತಿನಿಧ್ಯದಿಂದ ಪ್ರಜಾತಂತ್ರ ಅಥವಾ ಜನಸತ್ತೆ ನ್ಯಾಯವಾಗಿ ಸ್ಥಾಪಿತವಾಗುವದೆಂದು ಭಾವಿಸಲಾಗಿದೆ. ಪ್ರಾದೇಶಿಕ, ಜಾತೀಯ, ವ್ಯಾವಸಾಯಿಕ ಅಥವಾ ಇತರ ವರ್ಗಗಳ ಪ್ರತಿ ಇಷ್ಟು ಪ್ರಜೆ ಗಳಿಗೆ ಒಂದು ಪ್ರತಿನಿಧಿಸ್ಥಾನ ಎಂದು ಗೊತ್ತು ಪಡಿಸುವ ರೂಢಿ ಇದರಿಂದಲೇ ಉದ್ಭವಿಸಿತು.

ಆದರೆ ಸರ್ವಾನುಮತದಿಂದ ಮಾಡದೆ ಬಹುಮತದಿಂದ ನಿರ್ಣಯಗಳನ್ನು ಮಾಡಿದಲ್ಲಿ - ಆ ಬಹುಮತ ಸರಳವಿರಲಿ ಬೇಕೆಂದು ಉಬ್ಬಿ ಸಿದ್ದಿರಲಿ—ಅನುಪ್ರಮಾಣ ಪ್ರಾತಿನಿಧ್ಯದಿಂದ ಸ್ಥಾಪಿಸಬೇಕೆಂದು ಮಾಡಿದ ನ್ಯಾಯವು ವ್ಯವ ಹಾರದಲ್ಲಿ ವಿಫಲವಾಗುತ್ತದೆ. ಏಕೆಂದರೆ ಒಂದು ನಿತ್ಯ ಅಲ್ಪಸಂಖ್ಯ ವರ್ಗವು ತಾನೆಷ್ಟೇ ಯೋಗ್ಯಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದಿದ್ದರೂ ತನ್ನ ಅಭಿಪ್ರಾಯಗಳನ್ನು ನಿತ್ಯ ಬಹುಸಂಖ್ಯಾ ವರ್ಗವು ತಿರಸ್ಕರಿಸದಂತೆ ತಡೆಯಲಾರದು. ಈ ಅರಿವಿನಿಂದಲೇ ಸಂಖ್ಯಾಧಿಕ ಪ್ರಾತಿನಿಧ್ಯ ಮತ್ತು ಪ್ರತ್ಯೇಕ ಮತದಾರ ಸಂಘಗಳು ಬೇಕೆಂಬ ಬೇಡಿಕೆಗಳು ಹುಟ್ಟಿಕೊಂಡವು. ಅಧಿಕ ಪಾತಿನಿಧ್ಯವೆಂದರೆ ಬಹುಸಂಖ್ಯವರ್ಗದ ದಾರಿಯಲ್ಲಿ ಕೆಲ ಕೃತ್ರಿಮ ಕಂಟಕಗಳನ್ನು ಚೆಲ್ಲಿದಂತೆ; ಮತ್ತು ಪ್ರತ್ಯೇಕ ಮತದಾರ ಸಂಘ ಗಳು ಅಲ್ಪಸಂಖ್ಯ ಗುಂಪಿನಲ್ಲಿಯೂ ಬಹು ಸಂಖ್ಯರು ತಮ್ಮವರನ್ನೇ ನಿಲ್ಲಿಸದಂತೆ ನೋಡಿಕೊಳ್ಳುವ ಯುಕ್ತಿ.

ಆದರೆ ಎಲ್ಲಿವರೆಗೆ ಬಹುಸಂಖ್ಯರು ಬಹುಸಂಖ್ಯರಾಗಿಯೆ ಉಳಿಯುವರೋ ಅ ವರೆಗೂ ಇಂಥ ಯುಕ್ತಿಗಳಿಂದ ಮೇಲೆ ಹೇಳಿದಂಥ ನಿಜವಾದ ಅಥವಾ ಕಾಲ್ಪ ನಿಕ ಅನ್ಯಾಯಗಳನ್ನು ತಡೆಯುವದು ಸಾಧ್ಯ ವಲ್ಲ. ಅದಕ್ಕೆ ಒಂದೇ ಉಪಾಯವಿದೆ: ಬಹುಸಂಖ್ಯರ ಆಳಿಕೆಯೆನಿಸುವ ಪದ್ಧತಿಯ ಬದಲಿಗೆ, ಇಂಥ ದೌರ್ಬಲ್ಯಗಳಿಗೊಳಗಾದ ಎಲ್ಲ ಅಲ್ಪಸಂಖ್ಯ ಗುಂಪುಗಳಿಗೂ ಅನುಕೂಲವಾದ ಹೊಸ ಪದ್ಧತಿಯೊಂದನ್ನು ನಾವು ಕಂಡುಹಿಡಿ

ಯಬೇಕು. ಅ…
ಪ್ರಾತಿನಿಧ್ಯ ಮ…
ಗಳಂಥ …
ಯುಕ್ತವಾಗಿ…
ನಿರ್ಣಯಕ್ಕೆ …
ಮೂಲಭೂತ …
ಕೊಳ್ಳಲೇಬೇಕ…
ಪ್ರಜಾತಂತ್ರವ…
ಯೆಂದೂ ಅದರ…
ಕೆಯೇ ಸು…
ನಾವು ಸುರಾಜ್ಯ…
ಮರೆತುಬಿಡುತ್ತ…
ಈ ಪ್ರಶ್ನೆಯ…
ರೀತಿಯಲ್ಲಿ ವಿಚಾ…

ಮತದಾ…

ಮೊದಲನೆಯ…
ಗಳು ರೂಢವಾಗಿ…
ಆತ್ಮವಂಚನೆಯ…
ಪ್ರಮೇಯಕ್ಕೆ …
ದೊರೆತಿದೆ…
ಯಕ್ಕೆ ಬರು…
ಯಿಂದ ಆಳವಾಗಿ…
ದೋಷಗಳನ್ನು …
ವಲ್ಲ. ತೊಂಬ…
ಟನೆ ಬಲವಾಗಿದೆ…
ಪ್ರತೋದನ ಅಧಿ…
ಸುತ್ತಾರೆಂದೂ …
ಸಂಖ್ಯೆ ಬಹಳವಾ…
ತಲೆಗಳ ಸಂಖ್ಯೆ …
ಬರಿ ಒಂದೇ ತಲೆ…
ವಲ್ಲ. ವ್ಯವಹಾರ…
ಚುನಾವಣೆಯಾದ…
ಸಂಖ್ಯಾಬಲ ಇ…
ಹಾಕಿಕೊಂಡು, ಅ…
ಲೆಕ್ಕಕ್ಕೆ ಅಷ್ಟಷ್ಟು …
ಬಿಡಬೇಕೆಂದೂ ಶಾ…
ಳುಗಳನ್ನೂ ಅವರ…
ಗಳನ್ನೂ ಒಳಗೊ…
ಮಾಡಿಬಿಟ್ಟರೂ …
ನಾಯಕನು ಹೊಸ…
ತನ್ನ ಸಹಯೋಗಿ…
ಭಾರವಮಾಡಬೆ…
ಕರೂ ಅವರ …
ವಿರೋಧಿ ಪಕ್ಷ…
ಗೊತ್ತುಮಾಡಿಬಿಡ…
ರನ್ನು ಮನೆಗೆ ಕ…
ದರಿಗೆ ವಿಧೇಯ…
ಸ್ಕರಿಗಿಂತಲೂ ಸಮ…
ಮತ್ತು ಜನಾಭಿ…
ಹೆಚ್ಚು ಹಿತಕಾರಿ…
ಬಹುಮತವೇ …
ಸಾಧ್ಯವಿಲ್ಲೆಂದೂ …
ಭೂಮಿ ಸೂರ್ಯನಿಗೆ…
ಬಗೆದವನು ಅವ…
ಒಬ್ಬನೇ. ಬಹು…
ವಾಗಿದ್ದು ತಮ್ಮ …
ಅವನನ್ನು ಅವರು…
ಮಾಡಿದ್ದು ಯೋಗ್ಯ…
ವೆಂದೂ ಆಗಲಿಲ್ಲ.
ಅವನು ಎದುರಿಸ…
ದರೂ ಅವರಿಗೆ…
ಯಿತು.
ಶಾಲಿ ಮನು…
ದೊಡ್ಡ ಸ…
ಹರಣೆಗಳನ್ನೂ …
ಎದುರಿಗಿಲ್ಲದಿದ್ದ…
ಯಕ್ಕೆ ಬರಲು …
ನಿರ್ಣಯವಾಗು…
ನಾಗುತ್ತಾನೆ; …
ಮೇಲೆಯೆ ಇ…
ತ್ತದೆ. (ಜಯಪ…
ಪ್ರತ್ಯಕ್ಷ ನಿದರ್ಶ…



ಪ್ರಧಾನ ಮಂತ್ರಿ ನೆಹರು ಅವರು ಲಂಡನ್ನಿಗೆ ಹೋದಾಗ ನಮ್ಮ ಲಂಡನ್ ಹೈಕಮಿಶನರ ಶ್ರೀ ವಿ. ಕೆ. ಕೃಷ್ಣ ಮೆನನ್ನರೊಡನೆ.

ಹಿಂದು ಕಾನೂನುಗಳ ಕ್ರೋಢೀಕರಣ

ಹಿಂದು ಕಾನೂನುಗಳ ಕ್ರೋಢೀಕರಣದ ಕರಡು ಇಂದು ಕೈಸೇರಿತು. ಸದ್ಯದ ಶಾಸನಸಭೆಯಲ್ಲಿ ಅದರ ಚರ್ಚೆಯು ಬಗ್ಗೆ ಒತ್ತಾಯಪಡಿಸಲಾಗುವದಿಲ್ಲ ಎಂದು ಸರದಾರ ಪಟೇಲರು ಸಾರಿದರು. ಡಾ. ಅಂಬೇಡಕರರು ಅದರ ಮುಖ್ಯ ಪ್ರವರ್ತಕರು. ಅವರನ್ನು ನವಮನುವೆಂದು ಕಲಿತ ಕೆಲ ಹೆಂಗಸರು ಬಾಯ್ತುಂಬ ಹೊಗಳಿದ್ದಾರೆ. ಸನಾತನಿಗಳೆನಿಸಿಕೊಂಬವರು ಸರಕಾರಕ್ಕೆ ಧಾರ್ಮಿಕ ಸುಧಾರಣೆಯನ್ನು ಶಾಸನದ ಮೂಲಕ ತರುವ ಹಕ್ಕಿಲ್ಲವೆಂದೂ ಅಲ್ಲದೆ, ಈ ಕರಡು ಹಿಂದು ಧರ್ಮದ ವಿವಾಹ ಮತ್ತು ಕುಟುಂಬ ಪದ್ಧತಿಗಳ ಬುಡಕ್ಕೆ ಕೊಡಲಿ ಹಾಕುವುದೆಂದೂ ಸಿಡಿಮಿಡಿಗೊಂಡಿದ್ದಾರೆ. ಮತ್ತೆ ಕೆಲವರು ಹಿಂದುಧರ್ಮವೊಂದಕ್ಕೇ ಇಂಥ ಸುಧಾರಣೆ ಮಾಡಲು ಸರಕಾರವೇಕೆ ಕೈಹಾಕಬೇಕು, ಮಿಕ್ಕ ಧರ್ಮಗಳ ಅನುಯಾಯಿಗಳು ತಮ್ಮ ಪರಂಪರೆಯಂತೆ ನಿರ್ವಿಘ್ನವಾಗಿ ಬಾಳಬೇಕೆ? ಎಂದು ಕೇಳುತ್ತಾರೆ. ಈ ಮೂರೂ ವಿಧದ ಜನರಿಗೂ ವಿವಾಹವೆಂದರೇನು, ಸ್ತ್ರೀಪುರುಷರ ಹಕ್ಕುಬಾಧ್ಯತೆಗಳೆಂಥವು, ಈಗಿನ ಹಿಂದುಕುಟುಂಬದಲ್ಲಿ ಎಂಥ ಸುಧಾರಣೆಯಾಗಬೇಕು, ಈ ಕರಡಿನ ಸುಧಾರಣೆಯ ಪರಿಣಾಮಗಳೇನಾದಾವು? ಎಂಬುದರ ಸ್ಪಷ್ಟ ವಿಚಾರವಿದ್ದಂತೆ ತೋರುವುದಿಲ್ಲ.

ಧಾರ್ಮಿಕ ವಿವಾಹದ ಪಾವಿತ್ರ್ಯದೃಷ್ಟಿ

ಮಾನವ ನಾಗರಿಕತೆಯ ಇತಿಹಾಸದಲ್ಲಿ ಮದುವೆ ಎಂಬುದು ಕಲ್ಪಿತವಾಗಲು ಸಂತತಿಯ ಸುರಕ್ಷಿತತೆಯೇ ಪವಿತ್ರವಾದ ಮುಖ್ಯ ಉದ್ದೇಶ. ಈ ಉದ್ದೇಶವನ್ನು ಬಿಟ್ಟರೆ ಮದುವೆಗೆ ಪಾವಿತ್ರ್ಯವೆಂಬುದಿಲ್ಲ; ಅದರಲ್ಲಿ ಸ್ವಾರ್ಥವೊಂದೇ ಉಳಿಯುತ್ತದೆ; ಅದು ಕೇವಲ ಕಾಮಯೋಜನೆ. ಕಾಮಯೋಜನೆ ಕೀಳಲ್ಲವಾದರೂ ಅದೇ ಆದರ್ಶವಾದರೆ ಮಾನವನ ಬುದ್ಧಿಭಾವನೆಗಳ ವಿಕಾಸ ಅದರಿಂದ ಆಗದೆ ಅಧಃಪಾತವುಂಟಾಗುತ್ತದೆ. ಇದಕ್ಕಿಂತಲೂ ಕೀಳೆಂದರೆ ದುಡ್ಡಿಗಾಗಿ ಮದುವೆಯಾಗುವ ಅರ್ಥಯೋಜನೆ. ಸದ್ಯದ ಹಿಂದು ಕನ್ಯೆ ಅಥವಾ ಅವಳ ರಕ್ಷಕರು ವರನಲ್ಲಿ ಮೊದಲು ನೋಡುವುದು ಅರ್ಥಶಕ್ತಿಯನ್ನು. ಆದುದರಿಂದ ಅವಳದು ಕಾಮದೃಷ್ಟಿಗಿಂತಲೂ ಕೆಳತರಗತಿಯದು. ಅವಳು ಮದುವೆಯಾಗುವುದು ಹುಡುಗನನ್ನಲ್ಲ, ಅವನ ಆಸ್ತಿಯನ್ನು. ಏಕೆಂದರೆ, ಅವಳಿಗೆ ಹೊಟ್ಟೆಹೊರೆದುಕೊಂಬ ಧೈರ್ಯವಿಲ್ಲ. ಅವನು ಮದುವೆಯಾಗುವುದು ಅವಳ ರೂಪ ಅರ್ಥಾತ್ ಕಾಮಸಂಜೀವನಶಕ್ತಿಗಾಗಿ. ಹಿಂದು ಧಾರ್ಮಿಕ ವಿವಾಹಪದ್ಧತಿಗೆ ಇದು ವಿರುದ್ಧವಾದುದು. ಆದರ್ಶ ಸ್ನೇಹ ಇಂಥ ದಾಂಪತ್ಯದಲ್ಲಿ ಲಭಿಸದು, ಶಾಂತಿ ವಿರಳ, ಧರ್ಮ ಸೊನ್ನೆ.

ಸುಖವೆಂಬುದು ಮನುಷ್ಯರ ಸಂಸ್ಕಾರ ಸಹಜವಾದ ಕಲ್ಪನೆ. ಈ ಸಂಸ್ಕಾರ ರೂಢಮೂಲವಾದುದು. ಅದನ್ನು ಸಾಮಾನ್ಯವಾಗಿ ಯಾವ ಉತ್ಪಾತವೂ ನಾಶಮಾಡಲು ಶಕ್ತವಾಗದು. ಅದರಿಂದಲೇ ಇಂದಿಗೂ ಇಡೀ ಜಗತ್ತಿನಲ್ಲಿ ಮದುವೆಯಾದ ಕೂಡಲೇ ಬಹುಜನ ಸ್ತ್ರೀಯರು "ಸ್ವತಂತ್ರ" ಉದ್ಯೋಗವನ್ನು ಬಿಟ್ಟುಕೊಟ್ಟು ಗಂಡನೆಡೆಗೆ ಸೇರುವರು. ಅದರಲ್ಲಿ ತ್ಯಾಗವೆಷ್ಟಿದೆಯೋ ಅದಕ್ಕಿಂತ ಹೆಚ್ಚಿನ ಭೋಗವಿದೆ ಎಂಬುದು ಈ ಸ್ತ್ರೀಯರಿಗೆ ಗೊತ್ತು. ಶರೀರಶಾಸ್ತ್ರ, ಮನಃಶಾಸ್ತ್ರಗಳ ಆಧಾರದ ಮೇಲೆ Patriarchical Family ಪಿತೃಪ್ರಧಾನಕುಟುಂಬಗಳು ಇಡೀ ಜಗತ್ತಿನಲ್ಲಿ ಅನಾದಿಯಿಂದ ನಡೆದುಕೊಂಡು ಬಂದಿವೆ. ಕಾಯದೆ ಕಾನೂನುಗಳಿರುವುದು ವಿಶಿಷ್ಟ ಪರಿಸ್ಥಿತಿಯ ಸ್ತ್ರೀಪುರುಷರಿಗಲ್ಲ; ಸಾಮಾನ್ಯಪರಿಸ್ಥಿತಿಯಲ್ಲಿರುವ ಬಹುಸಂಖ್ಯ ಸ್ತ್ರೀಪುರುಷರಿಗಾಗಿ, ಆದುದರಿಂದ ಪಿತೃಪ್ರಧಾನವಾದ ಕುಲಗೋತ್ರ, ಮನೆತನ, ಕುಟುಂಬ ಎಂಬ ಮಾನವರ ಸಂಸ್ಕೃತಿಯ ಆದರ್ಶಪರಂಪರೆಗೆ ಈ ಹೊಸ ಕರಡು ಕೊಡಲಿಯನ್ನೊಡ್ಡಿದೆ; ವಿವಾಹದ ಧಾರ್ಮಿಕತೆಗೆ ಇದು ಭಂಗ ತಂದಿದೆ–ಎಂಬುದೇ ಮೂಲಭೂತವಾದ ತರ್ಕಶುದ್ಧ ಆರೋಪ.

"ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ" ಎಂಬ ವ್ಯಾಸವಾಣಿಯಂತೆ ರಾಜಾತೀತವಾದ ಧರ್ಮ ಋಷಿಮುನಿ ಮುಂತಾದ ಪೂಜ್ಯರ ವ್ಯಾಖ್ಯೆಗೊಳಪಡುವುದಲ್ಲದೆ ಲೌಕಿಕಶಾಸನಸಭೆಗಲ್ಲ. ಅಲ್ಲದೆ ಧರ್ಮಬದ್ಧವಾದ ಸ್ನೇಹಕ್ಕೆ ತ್ಯಾಗವೇ ಅಡಿಗಲ್ಲು, ಸತ್ಯಾಹಿಂಸೆಗಳೇ ಕೋಟೆಗಳು. ಹೀಗಿರುವುದರಿಂದ [ಧಾರ್ಮಿಕ ವಿವಾಹಕ್ಕೆ ವಿಚ್ಛೇದವೆಂಬುದಿಲ್ಲ. ಅಗ್ನಿಸಾಕ್ಷಿಯಾದ ನಂತರ ಯಾವ ಕಾರಣದಿಂದಲೂ ವಿವಾಹದ ಪರಸ್ಪರ ಒಪ್ಪಂದಕ್ಕೆ ಭಂಗ ಬರಕೂಡದು; ಬಂದರೆ ಅದರಿಂದ ಅಧಾರ್ಮಿಕತೆ ಲೋಕದಲ್ಲಿ ಬೆಳೆದು ಸಂಸ್ಕೃತಿಯು ಅಧಃಪತನವಾಗುವದು. ಈ ಧಾರ್ಮಿಕ ವ್ಯವಸ್ಥೆಯನ್ನು ನಡೆಸಲು ಧೈರ್ಯವಿಲ್ಲದ ಸ್ತ್ರೀಪುರುಷರು ರಿಜಿಸ್ಟರ್ ಮದುವೆಗಳನ್ನು ಮಾಡಿಕೊಂಡು ಅರ್ಥಕಾಮಾಧೀನರಾಗಿ ಬಾಳಿ ಅದರ ಫಲವನ್ನುಣ್ಣಲು ಸ್ವತಂತ್ರರಿರಲಿ. ಆದರೆ ಧರ್ಮದ ಹೆಸರಿನಲ್ಲಿ ಅಧರ್ಮ ಮಾತ್ರ ಆಚಾರದಲ್ಲಿ ಬರದಿರಲಿ. ಅಂಬೇಡಕರರ ಕರಡು ಧಾರ್ಮಿಕ ವಿವಾಹದಲ್ಲಿ ವಿಚ್ಛೇದವನ್ನು ಹೇಳಿದ್ದು ತಪ್ಪು; ಅದರ ಬದಲು ಧರ್ಮದ ಆದೇಶದಂತೆ ಸರ್ವತ್ಯಾಗಕ್ಕೆ ಪರಸ್ಪರ ಸಿದ್ಧರಿಲ್ಲದ ಸ್ತ್ರೀಪುರುಷರು ಧಾರ್ಮಿಕ ವಿವಾಹ ಮಾಡಿಕೊಳ್ಳಲೇಬಾರದು ಎಂದಿದ್ದರೆ ಚೆನ್ನಾಗುತ್ತಿತ್ತು. ಆ ಬಗ್ಗೆ ಪ್ರೌಢ ಸ್ತ್ರೀಪುರುಷರಲ್ಲದೆ ರಕ್ಷಿತರು ಎಂದೂ ಮದುವೆಗೆ ಅರ್ಹರಲ್ಲ ಎಂದು ಬೇಕಾದರೆ ಸಾರಬಹುದಿತ್ತು. ಆದುದರಿಂದ ವಿಚ್ಛೇದೋಲ್ಲೇಖವು ಧರ್ಮದ ಮೇಲೆ ಸುಧಾರಕಂಮನ್ಯರು ಎತ್ತಿದ ಗದೆಯಲ್ಲದೆ ಮತ್ತೇನು? ಇದೇ ಮಾತನ್ನು ಹರಿಹರಪುರ ಮಠದ ಶ್ರೀ ಅಭಿನವ ರಾಮಾನಂದ ಸರಸ್ವತಿಗಳು ತಮ್ಮ ಸಂದೇಶದಲ್ಲಿ ಸೂಚಿಸಿದ್ದಾರೆ.

ಕುಟುಂಬದ ಪುತ್ರನಿಷ್ಠತೆ

ಎರಡನೆಯದಾಗಿ, ಮಗಳಿಗೆ ತಂದೆ ತಾಯಿಗಳ ಆಸ್ತಿಯಲ್ಲಿ ಪಾಲುಕೊಡುವ ವ್ಯವಸ್ಥೆಯನ್ನು ಈ ಕರಡು ಹೇಳಿದೆ. ಇದು ಪಿತೃಪ್ರಧಾನವಾದ ವಂಶವೃಕ್ಷ, ಕುಲ, ಗೋತ್ರ, ಮನೆತನ, ಮತ್ತು ಕುಟುಂಬ ಪದ್ಧತಿಗಳ ಮೇಲೆ ವಜ್ರಪಾತ ಮಾಡಿದೆ. ಗಂಡಿಗಿಂತ ಹೆಣ್ಣು ಕೀಳೆಂದು ಅವಳಿಗೆ ಆಸ್ತಿಯಲ್ಲಿ ಪಾಲು ಕೊಡದಿರುವುದಲ್ಲ. ಧರ್ಮಾರ್ಥಕಾಮಗಳಲ್ಲಿ ಅವಳು ಗಂಡನ ಅರ್ಧಾಂಗವಾಗಿ ಹೋಗುವುದರಿಂದ ಅವಳು ಹುಟ್ಟಿದ ಮನೆಗೆ ಧರ್ಮದೃಷ್ಟಿಯಿಂದ, ವಂಶದ ಬೆಳವಣಿಗೆಯ ದೃಷ್ಟಿಯಿಂದ ಮತ್ತು ಇತರ ಸರ್ವ ವ್ಯವಹಾರಗಳ ದೃಷ್ಟಿಯಿಂದ ಹೊರಗಾಗುವುದು ಒಂದು ಜಾಗತಿಕ ಆಚಾರವಾಗಿರುವುದೇ ಅದಕ್ಕೆ ಕಾರಣ. ಆದರಿಂದ ಅವಳಿಗೂ ಅವಳ ತಾಯ್ತಂದೆ ಭ್ರಾತೃಭಗಿನಿಯರಿಗೂ ಇರುವ ಹಾರ್ದಿಕ ಪ್ರೇಮಕ್ಕೆ ಭಂಗ ಬಂದಿಲ್ಲ. ಈ ಕರಡಿನ ಮೇರೆಗೆ ಅವಳು ಕಾಯಿದೆಯ ಬಲದಿಂದ ಪಿತೃಸ್ವದಿಂದ ಅಥವಾ ಮಾತೃಸ್ವದಿಂದ ಪಾಲು ಕೇಳಿದರೆ ಮನೆತನ ಮತ್ತು ಕುಟುಂಬಗಳ ವೃದ್ಧಿಯ ದೃಷ್ಟಿಗೆ ಭಂಗ ತರುವ ಈ ಪ್ರಯತ್ನವು ಅವರ ಹಾರ್ದಿಕ ಪ್ರೇಮ, ಕರುಣೆ, ಔದಾರ್ಯಗಳಿಗೆ ನಿಃಸಂಶಯವಾಗಿ ಎರವಾಗಬೇಕಾಗುವುದು. ಮನೆಮಾಡಿಕೊಂಡಿರುವ ಯಜಮಾನನಷ್ಟೇ ಅಲ್ಲ, ಸ್ವತಃ ಸ್ತ್ರೀಯೇ ಅದ ಯಜಮಾನಿತಿಗಾದರೂ ತನ್ನ ವಂಶವೆಂದರೆ ಪುತ್ರನಿಷ್ಠ, ತನ್ನ ಪಿಂಡದಾತ ಪುತ್ರ, ತನ್ನ ರಕ್ಷಕ ಪುತ್ರ ಎಂದಿರುವುದು ಸ್ವಾಭಾವಿಕವಲ್ಲದೆ, ಅದರ ಬದಲು ಮಗಳು ಅಥವಾ ಅಳಿಯ ಎಂದಿರುವುದು ಅಸ್ವಾಭಾವಿಕ ಮತ್ತು ಅಪ್ಯವಹಾರ್ಯ; ಆದುದರಿಂದ ತನ್ನ ಮತ್ತು ತನ್ನ ಗಂಡನ ಆಸ್ತಿಯ ಪಾಲಿನ ಹಕ್ಕು ಬೇರೆಯ ಮನೆತನದವಳೆನಿಸುವ, ಸೂತಕಸಂಬಂಧ ಹರಿದ ಮದುವೆಯಾದ ಮಗಳಿಗೆ ಅಥವಾ ಅವಳ ಮಕ್ಕಳಿಗೆ (ಅಲ್ಲಿ ಭಯಂಕರ ಸಂಬಂಧ ಶೈಥಿಲ್ಯವಿದೆ) ಹೋಗುವುದನ್ನು ಎಂದೂ ಸಹಿಸಳು. ಇದರಲ್ಲಿ ನ್ಯಾಯವಿದೆ ಎಂಬ ಅಂಬೇಡಕರಬುದ್ಧಿಯವರಿಗೆ ಮನೆತನದ, ಕುಟುಂಬದ ಸಂಸ್ಕೃತಿಯ ಅರ್ಥ ಗೊತ್ತಿಲ್ಲ, ಪಾವಿತ್ರ್ಯದ ಅರಿವಿಲ್ಲ, ವ್ಯವಹಾರಜ್ಞಾನವಿಲ್ಲ, ಅದಕ್ಕೆ ಪುರಸ್ಕಾರ ಕೊಡುವ ಇಷ್ಟವಿಲ್ಲ ಎನ್ನಬೇಕಾಗುತ್ತದೆ.

ಅರ್ಥಸ್ವಾಮ್ಯದ ಹೊಸ ವ್ಯವಸ್ಥೆ

ಹಾಗಾದರೆ ಹೆಂಗಸಿಗೆ ಅರ್ಥಾಧಿಕಾರ ಸ್ವಾಮ್ಯವನ್ನು ಸಾಧಿಸಿಕೊಡಲು ಬೇರಾವುದಾದರೂ ಬಗೆಯಿರುವುದೇ? ಎಂಬ ಬಗ್ಗೆ ಬುದ್ಧಿವಂತರು ವಿಚಾರ ಮಾಡಬೇಕು. ಅದೇ ಇಂದು ಕಲಿತ ಹೆಂಗಸಿನ ಕೂಗು. ಕಾಯದೆಯ ಕರಡಿನಲ್ಲಿ ಅವಳಿಗೆ ದುಡಿದು ಹೊಟ್ಟೆ ಹೊರೆದುಕೊಂಬ ಶಕ್ತಿ ಇರಲಿ, ಇಲ್ಲದಿರಲಿ ಅವಳು ಗಂಡನಿಂದ ಬೇರಿದ್ದರೆ ಅವಳಿಗೆ-ಅವನಿಗೆ ಶಕ್ತಿಯಿರಲಿ, ಇಲ್ಲದಿರಲಿ ಜೀವನಾಂಶ ಕೊಡಬೇಕೆಂದಿದೆ. ಮಕ್ಕಳ ಮತ್ತು ಮುದುಕ ತಂದೆ ತಾಯಿಗಳ ಪೋಷಣೆ ಯಾವಾಗಲೂ ಮೊದಲು ಗಂಡನಾದವನ ಕೊರಳಿಗೇ ಕಟ್ಟಿದ್ದು, ಹೀಗೆ ಜೊತೆ ಸಾಕಷ್ಟು ತೋರಿಸದೆ ಹೆಂಗಸಿಗೆ ಹಕ್ಕುಕೊಡುವ ಸದ್ಯದ ಕರಡುಗಾಯದೆ ಕರಡಲ್ಲದೆ ಶುದ್ಧವೆನಿಸೀತೆ? ಈಗಲಾದರೂ ಹೆಂಗಸಿಗೆ ಮಾರುವ ಹಕ್ಕಿಲ್ಲದಿದ್ದರೂ ಗಂಡನ ಸಂಪೂರ್ಣ ಆಸ್ತಿಯಲ್ಲಿ ಸಮಭಾಗಿಯಾಗಿ ಅನುಭವಿಸುವ ಹಕ್ಕಾದರೂ ಇದೆ. ಈ ಕರುಡು ಕಾಯದೆಯಾದರೆ ಅವಳಿಗೆ ತಾಯ್ತಂದೆಯರಿಂದ ಬಂದ ಆಸ್ತಿಯುದ್ದರಷ್ಟೇ ಅದರ ಮೇಲೆ ಸ್ವಾಮ್ಯವಲ್ಲದೆ, ಗಂಡನು ಕಾಯದೆಯಂತೆ ಅನ್ನ, ವಸ್ತ್ರ, ವೈದ್ಯೋಪಚಾರಕೊಟ್ಟು ಅಹಿಂಸೆಯಿಂದ ಸಾತಿಶಯ್ಯತಿಫಲವಾಗಿ ಅವಳನ್ನು ಮನೆಗೆಲಸದವಳಂತೆ ನಡೆಸಿಕೊಳ್ಳಬಹುದು ಎಂದಾಗುತ್ತದೆ. ಈ ಅಂತವನ್ನು ತಿಳಿಯದ ಕಲಿತ ಹೆಂಗಸರ ಕರಡಿನ ಪುರಸ್ಕಾರ ಅಜ್ಞಾನಜನ್ಯವಲ್ಲದೆ ಮತ್ತೇನು? ಸ್ವಂತ ದುಡಿಯುವ ಧೈರ್ಯವುಳ್ಳವಳಿಗೆ, ಶಕ್ತಿಯುಳ್ಳವಳಿಗೆ ಬೇಕಾದಾಗ ದುಡಿಯಲು ಬರುತ್ತದೆ. ಹಂಗಿಲ್ಲದೆ ಬಾಳಲು ಬರುತ್ತದೆ—ಏಕೆ, ಎಷ್ಟೇ ನಿರ್ಧನನಾದರೂ ಗಂಡಸು ಹಾಗೆ ಮಾಡುವದಿಲ್ಲವೇನು?

ಆಸ್ತಿಯುದ್ದ ಅಲ್ಪಸಂಖ್ಯ ಕುಟುಂಬಗಳಲ್ಲಿ ಗಂಡಸು ಮದುವೆಯಲ್ಲಿ ಹೇಳುವ "ಧರ್ಮೇ ಚ ಅರ್ಥೇ ಚ ಕಾಮೇ ಚ ನಾತಿಚರಾಮಿ" ಎಂಬ ವಾಕ್ಯದ ಆಧಾರದಿಂದ ಮದುವೆಯಾದ ಹೆಂಗಸಿಗೆ ಗಂಡನ ಆಸ್ತಿಯಲ್ಲಿ ಅರ್ಧದ ಮೇಲೆ ಸಂಪೂರ್ಣ ಹಕ್ಕು ಬರುತ್ತದೆ ಎಂದು (ವಿಚ್ಛೇದವಿಲ್ಲದ ಧಾರ್ಮಿಕ ವಿವಾಹದಲ್ಲಿ) ಕಾಯದೆ ಮಾಡಿಬಿಡಬಹುದು; ಮತ್ತು ಗಂಡನ ಆಸ್ತಿಯನ್ನು ಗಂಡಹೆಂಡಿರಿಬ್ಬರಲ್ಲಿ ಒಬ್ಬರೂ ಪರಸ್ಪರ ಅನುಮತಿಯಿಲ್ಲದೆ (ಸಹಿಯಿಲ್ಲದೆ) ಯಾವ ಕಾಲದಲ್ಲೂ ಬಳಸಬಾರದೆಂದು ವಿಧಿಸಬಹುದು. ಇಬ್ಬರು ಕಾರ್ಯದರ್ಶಿಗಳು ಸಂಘವೊಂದರ ನಿಧಿಯನ್ನು ಸಂಯುಕ್ತವಾಗಿ ಬ್ಯಾಂಕಿನಲ್ಲಿಟ್ಟು ಬಳಸುವುದು ಇದಕ್ಕೆ ಸರಿಯಾದ ನಿದರ್ಶನ. ಅಲ್ಲದೆ ಗಂಡಹೆಂಡಿರು ಅದನ್ನು ಮತ್ತು ಅವರ ಗಳಿಕೆಯನ್ನು ಕುಟುಂಬಕ್ಕಾಗಿ ಅಲ್ಲದೆ ವೈಯಕ್ತಿಕವೆಂದು ಪರಸ್ಪರ ಅನುಮತಿ ತೆಗೆದುಕೊಳ್ಳದೆ ತಮ್ಮ ವಿಲಾಸಕ್ಕಾಗಿ ತಮ್ಮ ಅವಲಂಬಿಗಳ ಹಿತಕ್ಕೆ ಧಕ್ಕೆ ಬರುವಂತೆ ವೆಚ್ಚ ಮಾಡಿದರೆ ಅಪರಾಧವಾಗುವುದೆಂದೂ ಸಾರಬಹುದು. ಇದರಿಂದ ಕುಟುಂಬದ ಕಲ್ಪನೆಗೂ ಅಭಿವೃದ್ಧಿಗೂ ವ್ಯವಹಾರಕ್ಕೂ ಯಾವ ಆಘಾತವೂ ಬೀಳದೆ ಹೆಂಗಸಿಗೆ ಅರ್ಥಸಾಮ್ಯವೂ ಗಂಡಸಿನ ಜೊತೆಯಲ್ಲಿ ಸಾಮ್ಯವೂ ಬಂದು ತರ್ಕಶುದ್ಧವಾದ ನಿರ್ದಿಷ್ಟ ವ್ಯವಸ್ಥೆಯುಂಟಾಗಿ ಮೊದಲಿಗಿಂತಲೂ ಚೆನ್ನಾಗಿ ಕುಟುಂಬವೂ ಅದರ ಮುಖ್ಯಾಂಗಗಳಾದ ಗಂಡಹೆಂಡಿರೂ ಇನ್ನಷ್ಟು ಹೆಚ್ಚಿನ ಪ್ರೇಮಬಂಧದಿಂದ ಹೃಷ್ಟವಾಗಿ ಬೆಳೆಯಲು ಅವಕಾಶವುಂಟಾಗುತ್ತದೆ. ಪರಸ್ಪರ ದೂರ ಉಳಿವ ಆಪತ್ಪ್ರಸಂಗದಲ್ಲಿ ಅವಲಂಬಿಗಳನ್ನು ಪೋಷಿಸುವ ಹೊಣೆ ಹೊತ್ತವರಿಗೆ ಅವರ ಸಂಖ್ಯಾಪ್ರಮಾಣದ ಮೇಲೆ ಗಂಡ ಹೆಂಡಿರಿಬ್ಬರ ಒಟ್ಟು ಆದಾಯದಲ್ಲಿ ಪಾಲು ದೊರಕುವಂತೆ ಮಾಡಬಹುದು. ಇದರಿಂದ ಒಂದು ಮನೆತನದ ಮುನ್ನಡೆಯು ಬೇರಾದ ಗಂಡ ಅಥವಾ ಹೆಂಡತಿ ಯಾರಾದರೊಬ್ಬರಿಂದ ತಪ್ಪದೆ ಸಾಗಲು ಅನುಕೂಲವಾಗುತ್ತದೆ. ಇದು ಸ್ಥೂಲನ್ಯಾಸ; ವಿವರಗಳನ್ನು ಸಲಕ್ಷಣವಾಗಿ, ಶಾಸ್ತ್ರಶುದ್ಧವಾಗಿ, ತರ್ಕಬದ್ಧವಾಗಿ ಕಲ್ಪಿಸಬಹುದು. ಈ ವ್ಯವಸ್ಥೆಯಿಂದ ಸ್ತ್ರೀಯ ಅರ್ಥಾಧಿಕಾರದ ಕೂಗು ತಣಿಯುವುದಲ್ಲದೆ ತಂದೆ ತಾಯಿಗಳ ಮನೆಮುರಿಯುವ ಪಾಪಕಾರ್ಯವೂ ಇಲ್ಲದಂತಾಗುತ್ತದೆ.

ಇದು ಪ್ರಗತಿಯಲ್ಲ, ಅಧೋಗತಿ

ಮೇಲೆ ಹೇಳಿದ ಶ್ರೀ ರಾಮಾನಂದ ಸ್ವಾಮಿಗಳು ತಮ್ಮ ಸಂದೇಶದಲ್ಲಿ ಕಾನೂನು ಮತ್ತು ಧರ್ಮಶಾಸ್ತ್ರಗಳ ಸಂಬಂಧದಲ್ಲಿ ಹೇಳಿದ ಖಂಡಿತೋಕ್ತಿ ಧರ್ಮಜ್ಞರಿಗೆ ಸಮ್ಮತವಾಗದಿರದು. ಧರ್ಮವು ಲೌಕಿಕತೆಯು ಕಟ್ಟಳೆಗಳಲ್ಲೂ "ಅಕ್ಕತಿಷ್ಠಕ್ಕಾಗಲಿ" ಎಂಬಂತೆ ಲೋಕವನ್ನು ಕಟ್ಟಿಬಿಟ್ಟಲು ಬೇಕಿ ಲೋಕಕೋಕ್ಕರೆ ಅವರ ದಕ್ಕೆ ದೂಷಕರನ್ನು ಒಯ್ಯುತಕ್ಕವ್ಯಾಗಿರುವುದರಿಂದ ಧರ್ಮವೆಂದರೆ ಕೇವಲ "ಅನುಕೂಲ ಸಿಂಧು"ವೆಂದು ಗಣಿಸುವ ಲೌಕಿಕರು ಅವರ ಬಂಧ ಶಿಥಿಲವಾಗುವಂತೆ ಮುಕ್ತಿಸುವುದು ಹಿಂದುತ್ವಕ್ಕೆ ದ್ರೋಹ ಬಗೆದಂತೆಯೇ ಸರಿ. ಇಂದು ಗಂಡಸಿಗಿರುವ ಸ್ವಾತಂತ್ರ್ಯಗಳೆಲ್ಲ ಬಾಳೂ ತಪ್ಪದೆ ಹೆಂಗಸಿಗೆ ಕೊಡುವುದರಿಂದ ಗಂಡಸಿನ ದುಷ್ಪ್ರವೃತ್ತಿಗಳಿಗೆ ಕುಟುಂಬ ಪೋಷಕ ಕೆಲಸ ಬಿಟ್ಟಿಗೆಯಾಗಿ ಮಾಡಿಕೊಟ್ಟಂತೆ ಹೆಂಗಸಿನದಳಲ್ಲೂ ಭೋಗ ಮಾಡಿಕೊಟ್ಟಂತಾಗುವುದು. ಇದು ಪ್ರಗತಿಯಲ್ಲ ಅಧೋಗತಿ. ಅದರಬದಲು ಗಂಡಸಿನ ಸ್ವಾತಂತ್ರ್ಯವನ್ನು ಹೊಸ ವ್ಯವಸ್ಥೆಗೊಳಪಟ್ಟ ಹೆಂಗಸಿನ ಮಟ್ಟಕ್ಕೆ ಇಳಿಸಿ ಉಭಯ ಹಿತವನ್ನು ಬೆಳೆಸುವುದೇ ಪ್ರಗತಿಪರ. ವೈಯಕ್ತಿಕ ಆಸ್ತಿ, ಗಳಿಕೆ ಎಂಬ ಹಕ್ಕಿನ, ಅಧಿಕಾರದ, ಅಹಂಕಾರದ ಸ್ವಾತಂತ್ರ್ಯ ಅಥವಾ ಸ್ವಾಚ್ಛಂದ್ಯ ಯಾವ ಕೌಟುಂಬಿಕ ವ್ಯಕ್ತಿಗೂ ಸಲ್ಲದು. ಈ ದೃಷ್ಟಿಯಿಂದ ಮುಂಬಯಿಯು ದ್ವಿಪತ್ನೀವಿರೋಧ ಕಾಯದೆ ನಿಜವಾದ ಧರ್ಮಪೋಷಕ ಪ್ರಗತಿಪರ ಸುಧಾರಣೆಯಾಗಿದೆ. ಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ತರಬೇಕು ಮಾಡದ ತಾಯ್ತಂದೆಗಳು ಅಪರಾಧಿಗಳೆನಿಸಿದರೆ ಇಂದಿನ ಹೆಣ್ಣಿನ ಅಸಹಾಯಕ ಸ್ಥಿತಿ (ಗಂಡಸಿನದೂ ಹಾಗೇ) ಪರಿಹಾರವಾಗುತ್ತದೆ. ಇದು ಸುಧಾರಣೆ, ಪ್ರಗತಿ.

ಸನಾತನಿಗಳ ದೋಷ

ಸ್ವಾಮಿಗಳಾಗಲಿ, ಇತರ ಸನಾತನಿಗಳಾಗಲಿ, ಹಿಂದುತ್ವದ ಅಭಿಮಾನದಿಂದ ಈ ಕರಡನ್ನು ವಿರೋಧಿಸಿದ್ದಾರಲ್ಲದೆ, ಸದ್ಯದಲ್ಲಿ ಕೆಟ್ಟಿರುವ ಕುಟುಂಬದ ಪರಿಸ್ಥಿತಿಯನ್ನು ಸುಧಾರಿಸುವ ಮೇಲಿನಂತಹ ಯಾವ ಧರ್ಮಪೋಷಕ ಯೋಜನೆಯನ್ನೂ ಜನತೆಯ ಮುಂದಿಟ್ಟಿಲ್ಲ. ಅದರಿಂದಲೇ ಇಂದಿನ ಸುಧಾರಕಂಮನ್ಯರ, ಸ್ತ್ರೀವಾದಿಗಳ ವಿರುದ್ಧವಾಗಿ ಸಾಮಾನ್ಯರ ಸಹಾನುಭೂತಿಯನ್ನು ಗಣ್ಯವಾಗಿ, ತರ್ಕಸ್ಪರ್ಶಿಯಾಗಿ ಪಡೆಯುವುದರಲ್ಲಿ ಸನಾತನಿಗಳು ಹಿಂದೆ ಬಿದ್ದಿದ್ದಾರೆ. ಹೀಗೆ ಇದ್ದ ಆಚಾರ ಇದ್ದ ಹಾಗೇ ಇರಲಿ ಎಂದು ಅವರು ವಾದಿಸುತ್ತ ಕುಳಿತರೆ ಕರಡುಗಾಯದೆಯ 'ಸುಧಾರಣೆ'ಯ ಮೋಹಕ್ಕೆ ಕಾಲಾನುಕ್ರಮೇಣ ಜನರು ಬಲಿಬೀಳದೆ ಉಳಿದಾರೆಂಬುದು ನಂಬತಕ್ಕದ್ದಲ್ಲ. ಆದುದರಿಂದ ಧರ್ಮೋದ್ಧಾರಕರೆನಿಸಿಕೊಳ್ಳಬಯಸುವ ಸನಾತನಿಗಳು ಈಗ ತಮ್ಮ ಅವಧೂತ ಸಮಾಧಿಯಿಂದ ಎಚ್ಚತ್ತು ಉಕ್ತ ಸ್ವಾಮಿಗಳಂತೆ ಜನರಲ್ಲಿ ವಿವೇಕವನ್ನು ಹುಟ್ಟಿಸಲು ಪ್ರಾಮಾಣಿಕವಾಗಿ ವಿವೇಕದಿಂದ ದುಡಿಯಲು ಮುಂದೆ ಬರಬೇಕು ಮತ್ತು ಸದ್ಯದ ಧಾರ್ಮಿಕ ವ್ಯವಸ್ಥೆಯಲ್ಲಿಯ ಅಲ್ಪಸ್ವಲ್ಪ ದೋಷಗಳನ್ನು ಇಲ್ಲವೆಂದು ಸಾಧಿಸದೆ, ಅವನ್ನೊಪ್ಪಿಕೊಂಡು ಇಂಥ ಕರಡುಗಾಯದೆಗಳಿಂದ ಅವುಗಳ ಸುಧಾರಣೆಯಾಗುವುದರ ಬದಲು ಕೆಡುಕೇ ಹೆಚ್ಚಾದೀತೆಂದು ತಿಳಿಸಿ ಮೇಲೆ ಹೇಳಿದಂತಹ ನಿಜವಾದ ಧರ್ಮಸುಧಾರಕ ಯೋಜನೆಗಳನ್ನು ಪುರಸ್ಕರಿಸಿ ಜನಮತವನ್ನು ಸಂಪಾದಿಸಬೇಕು. ಇಲ್ಲದಲ್ಲಿ ಅವರ ಅಸ್ತಿತ್ವಕ್ಕೆ ಅರ್ಥವಿಲ್ಲ! ಮಠಾಧೀಶರಿದ್ದರಂತೂ ಅವರ ಆಲಸ್ಯ ಅಕ್ಷಮ್ಯವೆನಿಸುವದು.

"ಧರ್ಮೋ ವರ್ಧತಿ ವರ್ಧತಾಂ"

—ದಿ. ಎಚ್. ಶ್ರೀ.

ಕಮ್ಯುನಿಸ್ಟ್ ಸೈನ್ಯದ ಜನ್ನಸ್ಸೇವೂ ಕಿಯಾಂಗ್ಸಿ ಪ್ರಾಂತದ ರಾಜಧಾನಿಯೂ ಆದ ನಾಂಕಿಂಗ್ ನಗರವು ಚೀನೀ ಕಮ್ಯುನಿಸ್ಟರ ವಶವಾಯಿತೆಂದು ಈಗ ತಿಳಿದು ಬಂದಿದೆ. ಸರಕಾರೀ ಸೇನೆಗಳು ಪಶ್ಚಿಮಕ್ಕೆ ಓಡಿ ಹೋದವು.

[illegible]

ಮೇ ೩೦ ರಿಂದ ಜೂನ್ ೫ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ಅಂತುಕಲಹಗಳು ನಿಮ್ಮ ಪ್ರಾಪಂಚಿಕ ಸುಖಗಳನ್ನು ಹುಳಿಗೆಡಿಸದಂತೆ ಎಚ್ಚರವಿರಿ. ಉದ್ಯೋಗದಲ್ಲಿ ಪ್ರತಿಷ್ಠೆ ಅಷ್ಟೇನೂ ಹೆಚ್ಚಿದಿದ್ದರೂ ಲಾಭ ಧಾರಾಳವಾಗಿರುವದು. ದೊಡ್ಡ ದೊಡ್ಡ ಜನರ ಭೆಟ್ಟಿಯಾದರೂ ನೀವು ಸಾಧಿಸಬೇಕೆಂದಿದ್ದ ಕಾರ್ಯಕ್ಕೆ ನಿಶ್ಚಿತವಾದ ಸಹಾಯ ದೊರೆಯದು. ವಾದ ಸ್ಪರ್ಧೆಗಳಲ್ಲಿ ಈ ವಾರಕ್ಕಿಂತ ಮುಂದಿನವಾರ ನಿಮಗೆ ಲಾಭದಾಯಕ ಯೋಗವಿದೆ. ಭೆಟ್ಟಿಯ ಯೋಜನೆ ಬಿಟ್ಟು ಪತ್ರವ್ಯವಹಾರವನ್ನೇ ನಡೆಸಿರಿ. ಪ್ರವಾಸಕ್ಕೆ ಅಡ್ಡಿಯಿಲ್ಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೆ ಚರಣಗಳಿಗೆ ಅಷ್ಟು ಅನುಕೂಲ ಕಾಲವಲ್ಲ. ತಾ. ೩೦, ೩೧, ೩ ಉತ್ತಮ.

ವೃಷಭ

ಹೆಂಡತಿಯೊಡನೆ ಮತಭೇದವಾಗುವದನ್ನು ಬಿಟ್ಟರೆ ನಿಮ್ಮ ಪ್ರಾಪಂಚಿಕ ಸುಖಕ್ಕೆ ಯಾವ ವ್ಯತ್ಯಯವೂ ಬಾರದು. ಪ್ರಿಯಜನರ ಸಹವಾಸ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಪ್ರತಿಷ್ಠೆ ಲಾಭ ತುಂಬ. ಆದರೆ ಖರ್ಚು ಮಾತ್ರ ಒಂದಕ್ಕೆರಡು. ಧರ್ಮಕೃತ್ಯಗಳು ನಿಮ್ಮ ಕೈಯಿಂದ ಘಟಿಸುವವು. ವಾದ ಸ್ಪರ್ಧೆಗಳಲ್ಲಿ ಹೇಳಿಕೊಳ್ಳುವಂಥದೇನೂ ಇಲ್ಲ. ಭೆಟ್ಟಿ ಪತ್ರವ್ಯವಹಾರಕ್ಕೆ ಅನುಕೂಲವಾದರೂ ಪ್ರವಾಸ ಅಷ್ಟು ಹಿತಕರವಾಗದು. ರೋಹಿಣಿಯ ಕೊನೆಯ ೩ ಮತ್ತು ಮೃಗಶಿರದ ೧ ನೆ ಚರಣಗಳಿಗೆ ಅಹಿತ ಫಲಗಳ ಬಾಧೆ ಕಡಿಮೆ. ತಾ. ೩೦, ೩೧, ೧, ೨ ಅನುಕೂಲ.

ಮಿಥುನ

ಈ ವಾರ ನಿಮಗೆ ಎಲ್ಲವೂ ಮಧ್ಯಮ ಫಲಗಳೇ. ಪ್ರಕೃತಿ ನಿಮ್ಮದಾಗಲಿ ಹೆಂಡತಿಯದಾಗಲಿ ಅಷ್ಟು ತೃಪ್ತಿಕರವಿರದು. ಉದ್ಯೋಗದಲ್ಲಿ ಪ್ರತಿಷ್ಠೆ ಅಷ್ಟಕ್ಕಷ್ಟೆ. ಆದರೂ ಲಾಭ ಯಥೇಷ್ಟ. ವೆಚ್ಚ ತುಂಬ. ಆದರೆ ಉದ್ದೇಶ ಕೈಗೂಡಿದ್ದರಿಂದ ತೃಪ್ತಿ. ವಾದ ಸ್ಪರ್ಧೆಗಳಲ್ಲಿ ಮಧ್ಯಮಾವಸ್ಥೆ. ಪ್ರವಾಸ ಸುಖಾವಹ. ಭೆಟ್ಟಿ ಪತ್ರವ್ಯವಹಾರ ಅಷ್ಟು ಫಲಕಾರಿಯಾಗದು. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೆ ಚರಣಗಳವರು ಸ್ವಲ್ಪ ತೊಂದರೆ ಪಡಬೇಕಾದೀತು. ತಾ. ೧, ೨, ೩ ಅನುಕೂಲ.

ಕರ್ಕ

ದಂಪತಿಗಳಿಬ್ಬರೂ ಪ್ರಕೃತಿಯ ವಿಷಯಕ್ಕೆ ಅತಿಶಯ ಎಚ್ಚರಿರಬೇಕೆಂದು ಸೂಚಿಸಬೇಕಾಗಿದೆ. ಮಕ್ಕಳ ವರ್ತನೆ ತೃಪ್ತಿಕರವಾಗಿರದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳೆರಡೂ ಯಥೇಷ್ಟ. ಆದರೆ ಗೂಢ ಚಿಂತೆಯಲ್ಲಿ ನೀವೇಕೆ ನರಳುವಿರಿ? ದೇವರಲ್ಲಿ ನಂಬಿಕೆಯಿಡಿರಿ. ವಾದ ಸ್ಪರ್ಧೆಗಳಲ್ಲಿ ಯಶಸ್ವಿಗಳಾಗುವಿರಿ. ಪ್ರವಾಸಾದಿ ಕಾರ್ಯಗಳು ಸಫಲವಾಗವು. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷದ ೧ ನೆ ಚರಣಗಳಿಗೆ ಸ್ವಲ್ಪ ತೊಂದರೆ. ತಾ. ೧, ೨, ೪, ೫ ಅನುಕೂಲ.

ಸಿಂಹ

ನೀವು ವಿಚಾರದಿಂದ ವರ್ತಿಸಿದರೆ ನಿಮ್ಮ ಮಕ್ಕಳಿಗೂ ಅವರ ತಾಯಿಗೂ ಉಂಟಾದ ಮನಃಕ್ಲೇಶವನ್ನು ಹಿಡಿತಕ್ಕೆ ತರಬಲ್ಲಿರಿ. ಮಕ್ಕಳಿಗೆ ತುಸು ಅಸ್ವಸ್ಥವಾಗಬಹುದು. ಉಳಿದ ವಿಷಯದಲ್ಲಿ ನಿಮಗೆ ಈ ವಾರ ಸುಖಕರವೇ. ಉದ್ಯೋಗದಲ್ಲಿ ಉತ್ತಮ ಲಾಭ, ಪ್ರತಿಷ್ಠೆ. ಸ್ತ್ರೀ ವರ್ಗದಲ್ಲಿ ತುಂಬ ಜನಪ್ರಿಯರಾಗುವಿರಿ. ವಾದ ಸ್ಪರ್ಧೆಗಳಲ್ಲಿ ಒಪ್ಪಂದವಾಗಬಹುದು. ಪ್ರವಾಸಾದಿ ಕಾರ್ಯ ಹಿತಕರ ಪುಭೆಯ ಕೊನೆಯ ೩ ಮತ್ತು ಪೂರ್ವದ ೧ ನೆ ಚರಣಗಳಿಗೆ ಯಶಸ್ಸು ತಾನಾಗಿ ನಡೆದು ಬರಲಾರದು. ತಾ. ೩೦, ೩೧, ೪, ೫ ಅನುಕೂಲ.

ಕನ್ಯಾ

ದಂಪತಿಗಳಿಬ್ಬರ ಪ್ರಕೃತಿಯೂ ಚನ್ನಾಗಿದ್ದರೂ ಮಕ್ಕಳದು ಅಷ್ಟು ಸ್ವಸ್ಥವಾಗಿರಲಿಕ್ಕಿಲ್ಲ. ಆದರೆ ಸಂಗ್ರಹದ ಹೆಚ್ಚಳ, ಉದ್ಯೋಗದಲ್ಲಿ ಉತ್ತಮ ಪ್ರತಿಷ್ಠೆ ಲಾಭಗಳು ದೊರಕುವವು. ವೆಚ್ಚ ಮಾತ್ರ ಅತಿಶಯ. ವಾದ ಸ್ಪರ್ಧೆಗಳಲ್ಲಿ ಯಶ. ಆದರೆ ಬಹಳ ಹೆಣಗಾಡಬೇಕಾಗುವದು. ಪ್ರವಾಸಾದಿ ಕಾರ್ಯಗಳು ಹಿತಕರ. ಹಸ್ತದ ಕೊನೆಯ ೩ ಮತ್ತು ಚಿತ್ರೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ, ತಾ. ೩೦, ೩೧, ೧, ೨ ಹಿತಕರ.

ತುಲಾ

ಪ್ರಕೃತಿಯೂ ಸ್ವಲ್ಪ ಅಸ್ವಸ್ಥ. ಮೇಲೆ ಹೆಂಡತಿ ಪ್ರತಿಯೊಂದರಲ್ಲೂ ತನ್ನ ಮೂಗೇ ಮೇಲಾಗಬೇಕೆನ್ನುವಳು. ಆದರೆ ಉದ್ಯೋಗದಲ್ಲಿ ಉತ್ತಮ ಪ್ರತಿಷ್ಠೆ, ಲಾಭಗಳಲ್ಲದೆ, ಅನಿರೀಕ್ಷಿತ ಲಾಭವನ್ನು ಕೂಡ ನಾವು ನಿರೀಕ್ಷಿಸಬಹುದು. ವಾದ ಸ್ಪರ್ಧೆಗಳಲ್ಲಿ ತುಂಬ ಹಣ ವೆಚ್ಚವಾದರೂ ನಿಮಗೆ ಖಂಡಿತ ಯಶ ದೊರಕುವದು ಮತ್ತು ಈ ವಾರವೇ ನೀವು ಸಾಹಸ ಮಾಡಿದರೆ ದೈವವೂ ಅನುಕೂಲವಿದೆ. ಪ್ರವಾಸ ಪತ್ರವ್ಯವಹಾರ ಅಷ್ಟೇನೂ ಪ್ರಯೋಜಕವಲ್ಲ. ಭೆಟ್ಟಿ ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖೆಯ ೧ ನೆ ಚರಣಗಳಿಗೆ ತುಂಬ ಕಷ್ಟಪಡದೆ ಯಶ ದೊರಕದು. ತಾ. ೩೦, ೩೧, ೩, ೪ ಅನುಕೂಲ

ವೃಶ್ಚಿಕ

ನಿಮ್ಮ ಪ್ರಕೃತಿಗೆ ಕಿರುಕುಳಗಳಾಗಬಹುದಾದರೂ ಹೆಂಡತಿ ಮಕ್ಕಳು ಕ್ಷೇಮಕರವಾಗಿರುತ್ತಾರೆ. ಸ್ತ್ರೀ ಜನರಲ್ಲಿ ಆದರಪಾತ್ರರಾಗುವಿರಿ. ಉದ್ಯೋಗದಲ್ಲಿ ಲಾಭ. ಪ್ರತಿಷ್ಠೆ ಚನ್ನಾಗಿರುವದಲ್ಲದೆ ವಾದ ಸ್ಪರ್ಧೆಗಳಲ್ಲಿಯೂ ವಿಜಯಿಗಳಾಗುವಿರಿ. ಶತ್ರುಗಳಲ್ಲೊಬ್ಬನು ಅಕಸ್ಮಾತ್ತಾಗಿ ಸತ್ತುಹೋಗಬಹುದು. ಪ್ರವಾಸ ಹಿತಕರವಲ್ಲ. ಪತ್ರವ್ಯವಹಾರ ಮತ್ತು ಭೆಟ್ಟಿ ಉತ್ತಮ. ಅನುರಾಧೆಯ ಕೊನೆಯ ೩ ಮತ್ತು ಪೂರ್ವಾಷಾಢದ ೧ ನೆ ಚರಣಗಳಿಗೆ ಅಷ್ಟು ಹಿತವಲ್ಲ. ತಾ. ೨, ೩, ೪, ೫ ಅನುಕೂಲ.

ಧನು

ಇನ್ನೊಂದು ತಿಂಗಳ ನಂತರ ನೀವು ಪರಿಸ್ಥಿತಿ ಸುಧಾರಿಸುವದನ್ನು ನಿರೀಕ್ಷಿಸಬಹುದು. ಸದ್ಯಕ್ಕೆ ಧೈರ್ಯವೇ ಪ್ರಧಾನವೆಂದು ನಿಮ್ಮ ಹೆಂಡತಿಯ ಅಸ್ವಸ್ಥವನ್ನೂ ಮಕ್ಕಳ ಅಯೋಗ್ಯವರ್ತನೆಯನ್ನೂ ಸೈರಿಸಿಕೊಳ್ಳಬೇಕು. ಹಣಕಾಸಿನ ತೊಂದರೆಯೂ ಬಹಳ. ಪ್ರತಿಷ್ಠೆಯೂ ಚನ್ನಾಗಿರದು. ವಾದ ಸ್ಪರ್ಧೆಗಳಲ್ಲಿ ಮಧ್ಯಮಾವಸ್ಥೆ. ಸ್ವತಂತ್ರ ಉದ್ಯೋಗದವರಿಗಿಂತ ನೌಕರಿಯಲ್ಲಿರುವವರಿಗೆ ವಾಸಿ. ಪ್ರವಾಸಾದಿಕಾರ್ಯಗಳಿಗೆ ಕೈಹಾಕದಿರುವದೇ ಮೇಲು. ಮೂಲದ ಕೊನೆಯ ೩ ಮತ್ತು ಪೂರ್ವಾಷಾಢದ ೧ ನೆ ಚರಣಗಳಿಗೆ ವಿಶೇಷ ಸೈರಣೆ ಬೇಕು. ತಾ. ೩೦, ೪, ೫ ಅನುಕೂಲ.

ಮಕರ

ಪ್ರಕೃತಿ ಸೌಖ್ಯ ಅಷ್ಟಕ್ಕಷ್ಟೆ. ಹೆಂಡತಿಯದೂ ದಿನವೂ ಕಿರಿಕಿರಿ. ಆದರೆ ಸ್ಥಾವರದಲ್ಲಿ ಹೆಚ್ಚಳ, ಮತ್ತು ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಇಚ್ಛಿಸಿದಂತೆ. ಮಾತ್ರ, ಸಾಕೋಸಾಕಾಗುವಷ್ಟು ತೊಡಕು ತೊಂದರೆಗಳು. ವಾದ, ಸ್ಪರ್ಧೆಗಳಲ್ಲಿ ಹಾವೂ ಸಾಯುವದಿಲ್ಲ ಕೋಲೂ ಮುರಿಯುವದಿಲ್ಲ. ಪ್ರವಾಸಾದಿ ಕಾರ್ಯಗಳಿಗೆ ಅನುಕೂಲ. ಶ್ರವಣದ ಕೊನೆಯ ೩ ಮತ್ತು ಧನಿಷ್ಠೆಯ ೧ ನೆ ಚರಣಗಳಿಗೆ ತೊಂದರೆ ಕಡಿಮೆ. ತಾ. ೧, ೨, ೫ ಹಿತ.

ಕುಂಭ

ಎಲ್ಲರ ಪ್ರಕೃತಿಯೂ ನೆಟ್ಟಗೆ. ಹೆಂಡತಿ ಅನುಕೂಲಳಾಗಿ ಉತ್ತೇಜನ ಕೊಡುತಿರುವಾಗ ನಿಮಗೆ ಯಾವ ಕೆಲಸ ಅಸಾಧ್ಯ? ಉದ್ಯೋಗದಲ್ಲಿ ಪ್ರತಿಷ್ಠೆ ಲಾಭ ಚನ್ನಾಗಿರುವದು. ಆದರೆ ಎರಡನೆಯವರ ಮೇಲೆ ಪರಿಣಾಮವಾಗಬೇಕೆಂದು ಕೈಬಿಟ್ಟು ಖರ್ಚು ಮಾಡುವ ಹವ್ಯಾಸಕ್ಕೆ ಬೀಳುವಿರಿ. ಸ್ಥಾವರದಲ್ಲಿ ಅನುಕೂಲ ಮಾತುಗಳು. ವಾಹನ ಸುಖ. ವಾದ ಸ್ಪರ್ಧೆಗಳಲ್ಲಿ ಇದ್ದದ್ದು ಇದ್ದಂತೆಯೆ. ಪ್ರವಾಸವಾಗಲಿ ಭೆಟ್ಟಿಯಾಗಲಿ ಒಳಿತಲ್ಲ ಪತ್ರವ್ಯವಹಾರ ಲೇಸು. ಶತತಾರೆಯ ಕೊನೆಯ ೩ ಮತ್ತು ಪೂರ್ವಾಭಾದ್ರೆಯ ೧ ನೆ ಚರಣಗಳಿಗೆ ತೊಂದರೆ ಹೆಚ್ಚು. ತಾ. ೩೦, ೩೧, ೩, ೪ ಅನುಕೂಲ.

ಮೀನ

ನಿಮ್ಮ ಮತ್ತು ನಿಮ್ಮ ಹೆಂಡತಿಯ ಪ್ರಕೃತಿ ಸ್ವಸ್ಥ. ಮಕ್ಕಳಿಗೆ ತುಸು ಕ್ಲೇಶ. ಪ್ರಾಪಂಚಿಕ ಸುಖ ಸಾಧಾರಣವೆ, ಆದರೂ ಮನೆತನದ ಗೌರವವನ್ನು ಹೆಚ್ಚಿಸುವ ಸಂಗತಿಗಳಾಗುವವು. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ಎಣಿಸಿದಷ್ಟಿಲ್ಲ. ವಾದ ಸ್ಪರ್ಧೆಗಳಲ್ಲಿ ಉತ್ತಮ ಯಶ. ಪ್ರವಾಸ ಬೇಡ. ಭೆಟ್ಟಿ, ಪತ್ರವ್ಯವಹಾರ ಲೇಸು. ಉತ್ತರಾಭಾದ್ರದ ಕೊನೆಯ ಮೂರು ಮತ್ತು ರೇವತಿಯ ೧ ನೆ ಚರಣಗಳಿಗೆ ತೊಂದರೆಯಿಲ್ಲದೆ ಯಶವಿಲ್ಲ. ತಾ. ೧, ೨, ೫ ಅನುಕೂಲ.

ಪ್ರಜಾತಂತ್ರವನ್ನು "ಸುರಾಜ್ಯ"ಕ್ಕಾಗಿ ಅಳವಡಿಸುವ ಉಪಾಯ

(೯ ನೇ ಪುಟದಿಂದ)

ಅದೊಂದೇ ವರ್ಗ; ಮತ್ತು ಅನೇಕ ವರ್ಗಗಳಿಂದ ಕೂಡಿದ ಆ ದೊಡ್ಡ ಸಂಸ್ಥೆಯಲ್ಲಿ ಆ ವರ್ಗಕ್ಕಿರುವ ಪ್ರಾತಿನಿಧ್ಯ ಬರಿ ಕೈಬೆರಳಿನಲ್ಲೆಣಿಸುವಷ್ಟೇ ಎಂಬ ಕಾರಣದಿಂದ ಅದರ ಅಭಿಪ್ರಾಯಗಳು ಲಘುವಾಗಿ ಭಾವಿಸಲ್ಪಡಕೂಡದು. ಅಭಿಪ್ರಾಯದ ಮಹತ್ವವನ್ನು ಅದನ್ನು ವ್ಯಕ್ತಗೊಳಿಸಿದವರು ಒದಗಿಸುವ ಪ್ರಮಾಣಗಳ ಮತ್ತು ಅವರ ಪ್ರಾಮಾಣಿಕತೆಯ ಮೇಲಿಂದ ತೂಗಬೇಕಲ್ಲದೆ ಅವರ ಸಂಖ್ಯೆಯ ಮೇಲಿಂದಲ್ಲ. ವಿಷಯಗಳು ತೀರ ಜಟಿಲವಾಗಿದ್ದು ಅಭಿಪ್ರಾಯ ಭೇದಗಳು ವಿಶೇಷವಾಗಿದ್ದರೆ ಒಂದು ಬಗೆಯ ಮತಗಣನೆ ಅವಶ್ಯವೆನಿಸಬಹುದು. ಆದರೆ ಮತಗಣನೆಯಲ್ಲಿ ಯಾವಾಗಲೂ ಚಮತ್ಕಾರ ಬೀರಲು ಅವಕಾಶವಿರುವುದರಿಂದ ನಿರ್ಣಯಕ್ಕೆ ಬಹುಮತವೊಂದೇ ಸಾಲದು.

ಪರಿಹಾರೋಪಾಯ

ನನ್ನ ಸೂಚನೆ ಹೀಗಿದೆ: ಪ್ರತಿನಿಧಿಗಳ ಮೂಲಕ ಜನಾಭಿಪ್ರಾಯವನ್ನು ಗೊತ್ತು ಮಾಡಿಕೊಳ್ಳುವಾಗ, ನಿರ್ಣಯಗಳನ್ನು ಮಾಡುವಾಗ ಮತ್ತು ರಾಜ್ಯಕಾರ್ಯದ ಕಕ್ಷೆಯಲ್ಲಿ ಬರುವ ಎಲ್ಲ ವಿಷಯಗಳಲ್ಲಿಯೂ ಜನತೆಯ ಇಚ್ಛೆಯನ್ನು ಕಾರ್ಯಕಾರಿಯಾಗಿ ಮಾಡುವಾಗ, ಘಟನೆಯಲ್ಲಿ ಸಾಮಾನ್ಯ ಪ್ರತಿನಿಧಿಗಳು (ಶಾಸನ ಸಭೆ), ಆಸಕ್ತ ಪ್ರತಿನಿಧಿಗಳು, ಅಂದರೆ ಪಕ್ಷ, ಸಂಗಡ, ಆರ್ಥಿಕಾದಿ ಹಿತ ಸಂಬಂಧಗಳೇ ಮೊದಲಾದವುಗಳ ಪ್ರತಿನಿಧಿಗಳು (ವಿಧಿಮಂಡಲ ಅಥವಾ ಕೌನ್ಸಿಲ್) ಮತ್ತು ನಿಷ್ಪಕ್ಷಪಾತ, ನ್ಯಾಯಬುದ್ಧಿಗಳೇ ಮೊದಲಾದ ಗುಣವಿಶೇಷಗಳಿಗಾಗಿ ಆರಿಸಲ್ಪಟ್ಟ ಪ್ರತಿನಿಧಿಗಳು (ಮಧ್ಯಸ್ಥಮಂಡಲ) ಎಂಬ ಭೇದಗಳನ್ನು ಕಲ್ಪಿಸುವದು ಸೂಕ್ತ. ಶಾಸನ ಸಭೆ ಮತ್ತು ವಿಧಿಮಂಡಲಗಳಿಗೆ ತಮ್ಮ ಅಭಿಪ್ರಾಯವನ್ನು ಪ್ರತಿಯೊಂದು ರಾಜ್ಯಕಾರ್ಯದ ವಿಷಯದಲ್ಲೂ ಹೇಳುವ ಹಕ್ಕಿರಬೇಕಾದರೂ ಕೊನೆಯ ನಿರ್ಣಯವನ್ನು ಮಧ್ಯಸ್ಥ ಮಂಡಲವೇ ಮಾಡಬೇಕು. ಮೊದಲ ಎರಡು ಸಭೆಗಳಿಗೆ ಸರಕಾರವು ಸಾಮಾನ್ಯ ರೀತಿಯಲ್ಲಿ ಹೊಣೆಯಾಗಿರಬೇಕಾದರೂ ಮಧ್ಯಸ್ಥ ಮಂಡಲಕ್ಕೆ ವಿವರಗಳಲ್ಲಿ ಸಂಪೂರ್ಣ ವಿಧೇಯವಾಗಿರಬೇಕು.

ಶಾಸನ ಸಭೆಯಲ್ಲಿ ವಿಶಿಷ್ಟ ಪಕ್ಷಗಳಿಗೆ. ಕಾಂಗ್ರೆಸ್, ಉದಾರ, ಸಮಾಜವಾದಿ, ಕಮ್ಯುನಿಸ್ಟ್ ಮೊದಲಾದವುಗಳಿಗೆ ಸೇರಿದ ಸದಸ್ಯರಿರಬಹುದು. ಆದರೆ ಪಕ್ಷಗಳು ರಾಜಕೀಯ ಧ್ಯೇಯಗಳನ್ನಾಧರಿಸಿರಬೇಕೇ ಹೊರತು ಪ್ರಾಂತೀಯ, ಸಾಮಾಜಿಕ ಧಾರ್ಮಿಕ ಮೊದಲಾದ ಭೇದಗಳನ್ನಲ್ಲ.

ವಿಧಿ ಮಂಡಲ ಅಥವಾ ಆಸಕ್ತ ಪ್ರತಿನಿಧಿಗಳನ್ನೊಳಗೊಂಡ ಸಭೆಯಲ್ಲಿ ಎಲ್ಲ ವಿಶಿಷ್ಟ ಹಿತ ಸಂಬಂಧಗಳಿಗೆ ಪ್ರಾತಿನಿಧ್ಯವಿರತಕ್ಕದ್ದು. ಸಾಧಾರಣ ಮಹತ್ವವುಳ್ಳ ಪ್ರತಿಯೊಂದು ಹಿತ ಸಂಬಂಧ ವರ್ಗಕ್ಕೂ ಅಲ್ಲಿ ಪ್ರತಿನಿಧಿಗಳನ್ನು ನೇಮಿಸಲು ಅವಕಾಶ ದೊರೆಯಬೇಕು. ಆದರೆ ವಿವಿಧ ವರ್ಗ ಅಥವಾ ಸಂಗಡಗಳ ಜನಸಂಖ್ಯೆಯೆಷ್ಟೆ ಇರಲಿ, ಅವವುಗಳ ಪ್ರತಿನಿಧಿಗಳ ಸಂಖ್ಯೆ ಮಾತ್ರ ಸಮಾನವಾಗಿರಬೇಕು. ಹೀಗೆ ಪ್ರತಿಯೊಂದು ಪ್ರಾದೇಶಿಕ ಘಟಕಕ್ಕೂ ಪ್ರತಿಯೊಂದು ಮನ್ನಣೆ ಹೊಂದಿದ ಜಾತೀಯ ಅಥವಾ ಪಾಂಥಿಕ ಗುಂಪಿಗೂ ಪ್ರತಿಯೊಂದು ನಿರ್ದಿಷ್ಟ ವೃತ್ತಿ ವ್ಯವಸಾಯದ ವರ್ಗಕ್ಕೂ ಪ್ರತಿಯೊಂದು ಶಾಸ್ತ್ರಕಲಾ ವಿಭಾಗಕ್ಕೂ ಪ್ರಾತಿನಿಧ್ಯದ ವಿಷಯದಲ್ಲಿ ಸಮಾನತೆಯಿರಬೇಕು. ಈ ಸಂಬಂಧದಲ್ಲಿ ಯಾವುದೊಂದು ಹಿತ ಸಂಬಂಧವು ಮನ್ನಣೆ ಹೊಂದಬೇಕಾದರೆ ಕೆಲ ನಿಯಮಗಳನ್ನು ಗೊತ್ತುಮಾಡಬೇಕಾದೀತು.

ಆಳುವವರನ್ನು ಅಥವಾ ಮಂತ್ರಿಗಳನ್ನು ಶಾಸನಸಭೆಯ ಅತಿದೊಡ್ಡ ಪಕ್ಷದಿಂದ ಅಥವಾ ಅದರ ಹೇಳಿಕೆಯಂತೆ ಆರಿಸಬೇಕು. ಶಾಸನ ಸಭೆ ಧೋರಣಗಳನ್ನೂ ಶಾಸನಗಳನ್ನೂ ಮಂಡಿಸುವದು ಪ್ರತಿಯೊಂದು. ಕ್ರಮವನ್ನು ಸೂಕ್ಷ್ಮವಾಗಿ ಚರ್ಚಿಸುವ ಅದರ ಹಕ್ಕಿಗೆ ಬಾಧೆ ಬರಕೂಡದಾದರೂ ಸಾಮಾನ್ಯವಾಗಿ ಅದು ವಿಶಾಲ ತತ್ವಗಳನ್ನು ಚರ್ಚಿಸಿ ಅವುಗಳ ಬಗ್ಗೆ ಪಾಕ್ಷಿಕ ಮತ್ತು ಜನತೆಯ ಅಭಿಪ್ರಾಯಗಳನ್ನು ಮಾತ್ರ ವ್ಯಕ್ತಗೊಳಿಸಬೇಕು. ಯಾವುದೊಂದು ಕ್ರಮದ ಆಮೂಲಾಗ್ರ ಸೂಕ್ಷ್ಮ ಪರಿಶೀಲನೆ ಮಾಡುವದು ವಿಧಿಮಂಡಲದ ಮತ್ತು ಮಧ್ಯಸ್ಥ ಮಂಡಲದ (ಅನಾಸಕ್ತ ಪ್ರತಿನಿಧಿಗಳ) ಕರ್ತವ್ಯ. ಮಧ್ಯಸ್ಥ ಪ್ರತಿನಿಧಿಗಳು ಉಳಿದ ಎರಡೂ ಸಭೆಗಳಲ್ಲಿ ಕುಳಿತು ಅವುಗಳ ಮುಂದೆ ಬರುವ ಪ್ರತಿಯೊಂದು ವಿಷಯದ ಮೇಲೆ ಪಕ್ಷ ಪ್ರತಿಪಕ್ಷಗಳ ಟೀಕೆಗಳನ್ನು ಕೇಳಿಕೊಂಡ ನಂತರ ತಮ್ಮ ಕೊನೆಯ ನಿರ್ಣಯವನ್ನು ಕೊಡಬಹುದು. ನಿರ್ಣಯಕ್ಕೆ ಬರಬೇಕಾದರೆ ಅವರು ಅಧಿಕಾರದಲ್ಲಿರುವ ಸರಕಾರವು ಪ್ರಜೆಗಳಿಗೆ ವಾಗ್ದಾನ ಮಾಡಿದ ಮೂಲ ಧೋರಣೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕಾದೀತು. ಅವರ ನಿರ್ಣಯಗಳು ಸರಕಾರಕ್ಕೆ ಬಂಧಕವಾಗಿರಬೇಕು. ಅವರ ನಿರ್ಣಯ ಸರಕಾರ ಅಪೇಕ್ಷಿಸಿದ್ದಕ್ಕಿಂತ ತೀರ ಭಿನ್ನವಾಗಿರಬಹುದು. ಆದರೂ ತನ್ನ ಮೂಲಭೂತ ಧೋರಣೆಗೆ ಅದು ಅಸಂಗತವಾಗಿದೆಯೆಂದೆನಿಸಿದಲ್ಲದೆ ಸರಕಾರ ಅದನ್ನು ಸೋಲೆಂದು ಬಗೆಯಬೇಕಾಗಿಲ್ಲ.

ಶಾಸನ ಸಭೆಯನ್ನು ಪೂರ್ವ ನಿರ್ಣಯದ ಮೇರೆಗೆ ಜನರು ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ಆರಿಸಬಹುದು. ವಿಧಿ ಮಂಡಲವನ್ನು ವಿವಿಧ ಹಿತಸಂಬಂಧಗಳಿಂದ ಕೂಡಿದ ಬೇರೆ ಬೇರೆ ಮತದಾರ ಸಂಘಗಳಿಂದಲೆ ಆರಿಸಬೇಕು. ಅದು ಶಾಸನಸಭೆಗಿಂತ ಆಕಾರದಲ್ಲಿ ಕಿರಿದಾಗಿರಬಹುದು. ಮಧ್ಯಸ್ಥರನ್ನು ಈ ಎರಡು ಸಭೆಗಳು ತಾವು ಆರಿಸಲ್ಪಟ್ಟು ಸಭೆ ಸೇರಿದೊಡನೆ, ಮೊಟ್ಟಮೊದಲು ಆರಿಸಬೇಕು. ಮಧ್ಯಸ್ಥ ಮಂಡಲ ಬಹಳ ದೊಡ್ಡ ಸಭೆಯಾಗಿರಲಾರದು— ೩೦ ಸದಸ್ಯರಿಗಿಂತ ಹೆಚ್ಚು ಇರಕೂಡದು. ಅವರು ಶಾಸನ ಸಭೆ ಅಥವಾ ವಿಧಿಮಂಡಲದ ಸದಸ್ಯರಿರಬೇಕಾಗಿಲ್ಲ; ಮತ್ತು ಅವರ ಚುನಾವಣೆಯಲ್ಲಿ ಮತದಾರರು ಯಾವ ಪಕ್ಷಕ್ಕೂ ಸೇರದ ಅಥವಾ ತಮ್ಮ ಪಕ್ಷವಲ್ಲದೆ ಬೇರೆಯದಕ್ಕೆ ಸೇರಿದ ಅರ್ಹದಷ್ಟು ಸದಸ್ಯರನ್ನಾದರೂ ಆರಿಸಬೇಕೆಂಬ ಸಂಪ್ರದಾಯವನ್ನೋ ಶಾಸನವನ್ನೋ ಮಾಡಬೇಕು. ಮುಖ್ಯವಾಗಿ ಅವರು ಉತ್ತಮ ಚರಿತ್ರವುಳ್ಳವರೂ ಅನುಭವಿಗಳೂ ಕುಶಾಗ್ರಮತಿಗಳೂ ನಿರ್ಣಯಶಕ್ತಿಯುಳ್ಳವರೂ ಕರ್ತವ್ಯಬುದ್ಧಿಗಳೂ ಇರಬೇಕಲ್ಲದೆ ಈ ಕೆಳಗಿನ ಯೋಗ್ಯತೆಗಳನ್ನೂ ಪಡೆದವರಾಗಿರಬೇಕು.

(ಅ) ವಿಧಿ ಮಂಡಲದಲ್ಲಾಗುವ ಪ್ರತಿಯೊಂದು ಚರ್ಚೆಯ ಮೇಲೂ ನಿರ್ಣಯ ಕೊಡುವ ಸಾಮರ್ಥ್ಯ;

(ಆ) ಜನಪ್ರತಿನಿಧಿ ಸರಕಾರವು ಕೆಲಸ ಮಾಡಲಾರದೆ ಹೋಗಿ, ಹೊಸ ಚುನಾವಣೆಗಳಾಗುವದು ಇಷ್ಟವಲ್ಲದ ಸಮಯಗಳಲ್ಲಿ ಕೇಂದ್ರದ ಅಥವಾ ಪ್ರಾಂತದ ಸರಕಾರವನ್ನು ನಡೆಸಿಕೊಂಡು ಹೋಗುವ ಯೋಗ್ಯತೆ; ಮತ್ತು

(ಇ) ರಾಜ್ಯದ ನ್ಯಾಯಶಾಖೆಯ ನಿರ್ವಹಣವನ್ನು ಮಂತ್ರಿಗಳ ಹಸ್ತಕ್ಷೇಪವಿಲ್ಲದೆ ಸಾಗಿಸುವ ಯೋಗ್ಯತೆ; (ಇದು ಆ ಸಭೆಯ ವಿಶೇಷ ಶಾಶ್ವತ ಕರ್ತವ್ಯವಾಗಿರಬೇಕು).

ಜೆಕೊಸ್ಲೋವೇಕಿಯದ ಅಧ್ಯಕ್ಷ ಗೊಟ್ವಾಲ್ಡರು ಪ್ರೇಗಿನ ಸರಕಾರೀ ಕೋರ್ಟು ಕಾರಾಗ್ರಹಕ್ಕೆ ಕಳಿಸಿದ ಅಮೇರಿಕದ ಸೈನ್ಯದ ಇಬ್ಬರು ಗೂಢಚಾರರನ್ನು ಸಂಪೂರ್ಣವಾಗಿ ಕ್ಷಮಿಸಿದರೆಂದು ಅಮೇರಿಕದ ರಾಯಭಾರಿ ಕಚೇರಿ ತಿಳಿಸಿದೆ.

ಅಮೇರಿಕದ ಇಂಡಿಯಾ ಲೀಗಿನ ಅಧ್ಯಕ್ಷರಾದ ಸರದಾರ ಜೆ. ಜೆ. ಸಿಂಗರು ಒಂದು ಭಾಷಣದಲ್ಲಿ ದಕ್ಷಿಣ ಆಫ್ರಿಕದಲ್ಲಿಯ ಭಾರತೀಯರ ಸಮಸ್ಯೆಯನ್ನು ಸಂಯುಕ್ತ ರಾಷ್ಟ್ರ ಸಂಘವು ಸಮರ್ಪಕವಾಗಿ ಬಿಡಿಸಲಾರದೆಂದು ಅಭಿಪ್ರಾಯ ಪಟ್ಟರು. ದಕ್ಷಿಣ ಆಫ್ರಿಕ ಮತ್ತು ಭಾರತಗಳು ಸಂಧಾನ ನಡೆಸಿದರೂ ಅಷ್ಟೇ ಫಲವೆಂದು ಅವರು ಮರುನುಡಿದರು.

ಇಂಗ್ಲೆಂಡಿನ ಜಗತ್ಪ್ರಸಿದ್ಧ "ಲಘುಭಾರವಾಹಕ" ಜಟ್ಟಿ ಫ್ರೆಡ್ಡಿ ಮಿಲ್ಸನಿಗೆ ಲೆಸ್ನವಿಕ್ ಮ್ಯಾಕ್ಸಿಂ ಸ್ಪರ್ಧೆಯಲ್ಲಿ ಗೆದ್ದವನೆದುರು ತನ್ನ ಕೀರ್ತಿಯನ್ನು ಉಳಿಸಿಕೊಳ್ಳಲು ಬೆಕರ್ ಬಾಕ್ಸಿಂಗ್ ಕ್ಲಬ್ಬು ೮೦,೦೦೦ ಪೌಂಡುಗಳನ್ನು ಕೊಡುವುದಾಗಿ ಆಹ್ವಾನಿಸಿತು.

ಪಂಗಡಗಳ ರಾಜಕಾರಣ

ಪೂರ್ವಪಂಜಾಬ, ಮಹಾರಾಜಸ್ಥಾನ, ಮಧ್ಯಭಾರತ, ವಿಂಧ್ಯಪ್ರದೇಶ, ಹೈದರಾಬಾದ ಮತ್ತು ಮದ್ರಾಸುಗಳಲ್ಲಿ ಒಂದು ಪಕ್ಷದೊಳಗೆ ಹಲವು ಗುಂಪುಗಳಿರುವದರಿಂದಾಗುವ ಹಾನಿ ಈಗಾಗಲೆ ಬೆಳಕಿಗೆ ಬಂದಿದೆ. ಪ್ರಾಕ್ಷಿಕ ಸರಕಾರಗಳಾಗಿ ಈ ವರೆಗೆ ನಡೆಯುತ್ತ ಬಂದ ಇತರ ಪ್ರಾಂತಗಳೂ ಈ ಉಪದ್ರವದಿಂದ ಪೂರ್ತಿ ಮುಕ್ತವಾಗಿವೆಯೆಂದು ಹೇಳಬರುವದಿಲ್ಲ. ಕೆಲವು ಪ್ರಾಂತಗಳಲ್ಲಿ ಈಗಾಗಲೆ ರೂಢವಾದ ಹೊಣೆಗಾರ ಸರಕಾರಗಳು ಮುಂದುಬಿದ್ದಿವೆ; ಮತ್ತೆ ಕೆಲವು ಈಗಲೋ ಇನ್ನಾವಾಗಲೋ ಬೀಳುವಂತಿವೆ. ಪಾಕಿಸ್ತಾನದ ಕೆಲ ಪ್ರಾಂತಗಳಲ್ಲಿಯೂ ಇದೇ ಬಗೆಯಾದ ಪರಿಸ್ಥಿತಿ ಉದ್ಭವಿಸಿದೆ.

ತಾನೇ ಅಪ್ರತಿಹತ ಬಹುಮತವಾಗಿ ಸಾಗುವಷ್ಟು ಸಂಖ್ಯಾಬಲ ಯಾವೊಂದು ಪಂಗಡಕ್ಕೂ ಇಲ್ಲ. ಮನವೊಪ್ಪಲಿ ಒಪ್ಪದಿರಲಿ, ಮಂತ್ರಿಮಂಡಲವನ್ನು ರಚಿಸಬೇಕಾದರೆ ಅದು ಇತರ ಪಂಗಡಗಳನ್ನು ಆರಾಧಿಸಬೇಕಾಗುವದು. ಹೀಗೆ ಮಾಡಬೇಕೆಂದು ಕೇಂದ್ರ ಸರಕಾರವೇ ಅಜ್ಞಾಪಿಸಿದ ಸಂದರ್ಭಗಳೂ ಇವೆಯಂತೆ. ಪಕ್ಷನಾಯಕನನ್ನು ಅವನ ಉಚ್ಚತರದ ಯೋಗ್ಯತೆ, ಜ್ಞಾನ, ಧೀರತೆ, ಪ್ರಾಮಾಣಿಕತೆಗಳಿಗಾಗಲಿ ವಿಶಾಲದೃಷ್ಟಿಗಾಗಲಿ ಆರಿಸುವದಿಲ್ಲ. ಅವನು ಯೋಗ್ಯತಾಸಂಪನ್ನನಾಗಿದ್ದರೂ ಅದು ಚಾಣಕ್ಯತಂತ್ರದಿಂದ ಎದುರಾಳಿ ಪಂಗಡದ ಸತ್ವಹರಣ ಮಾಡುವ ಯೋಗ್ಯತೆಯೋ ಆಗಿರುತ್ತದೆ. ಅವನ ಧೀರತೆಯೋ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ನಿರ್ಭಯವಾಗಿ ನಿಗ್ರಹವ್ಯಾಪಾರ ನಡೆಸುವ ಧೀರತೆಯೋ ಆಗಿರುತ್ತದೆ. ಪ್ರಾಮಾಣಿಕತನದ ಬದಲು ಅನುಗ್ರಹದಾನ ಮಾಡುವ ಮತ್ತು ತನಗೆ ಬೇಕಾದವರ ಅಪ್ರಾಮಾಣಿಕತೆಯನ್ನು ಕಂಡೂ ಕಾಣದಿರುವ ಜಾಣತನ ಅವನಲ್ಲಿರುತ್ತದೆ. ಅವನ ದೃಷ್ಟಿಯೋ ತನ್ನ ಪಂಗಡವಾಯಿತು, ಆಶ್ರಯದಾತರಾಯಿತು, ತಾನಾಯಿತು ಎಂದಿರುತ್ತದೆ.

ಆದರೆ ಕೇಡೆಂಬುದು ಒಂದು ಹೊಲಸು ಹಳ್ಳ. ಅದನ್ನು ಒಳ್ಳೆಯತನದ ಸಹಾಯವಿಲ್ಲದೆ ದಾಟಲು ಸಾಧ್ಯವೇ ಇಲ್ಲ. ಸಾಮರ್ಥ್ಯ, ಪರಿಜ್ಞಾನಗಳಿಗಾಗಿ ಅಲ್ಲದಿದ್ದರೂ ಸಾತ್ವಿಕತೆ, ಪ್ರಾಮಾಣಿಕತೆ, ಜಾಣ್ಮೆ ಮತ್ತು ದೇಶಭಕ್ತಿಗಾಗಿಯಾದರೂ ಪ್ರಸಿದ್ಧನಾಗಿರುವ ಯಾರಾದರೊಬ್ಬನನ್ನು ಹೆಸರಿಗಾದರೂ ಮುಂದೆ ಮಾಡಿಕೊಂಡು ಹೋಗದಿದ್ದರೆ ಬಹಳ ಮುಂದುವರಿಯುವದೇ ಅಸಾಧ್ಯವೆಂದು ಸೂತ್ರಚಾಲಕರಿಗೆ ತಿಳಿಯಲು ಬಹಳ ಕಾಲ ಹಿಡಿಯುವದಿಲ್ಲ. ಬಡಿದು ಬೇಕಾದ ಆಕಾರಕ್ಕೆ ಮಾರ್ಪಡಿಸ ಬರುವ ಸಜ್ಜನಿಕೆಯೊಡನೆ ಸ್ನೇಹಾಚಾರ ಮಾಡಲು ದೌರ್ಜನ್ಯವು ಸಿದ್ಧವೇ ಆಗಿರುತ್ತದೆ. ಸಾತ್ವಿಕತೆಯೊಡನೆ ದುರ್ಬಲತೆಯೂ ಉಳ್ಳ ಕೆಲ ಜನರು ಇದ್ದೇ ಇದ್ದಾರೆ. ಅಂಥವರಲ್ಲೊಬ್ಬನನ್ನು ಮುಂದಾಳಾಗಲು ಮನವೊಲಿಸಲಾಗುತ್ತದೆ. ಅವನು ಸೂತ್ರಧಾರನಾಗಿ ನಡೆಸಿಕೊಂಡು ಹೋಗುವದಿಲ್ಲ; ಕುತಂತ್ರಿಗಳ ಸೂತ್ರದ ಬೊಂಬೆಯಾಗಿ ತಾನೇ ಕುಣಿಯುತ್ತಾನೆ. ತನ್ನ ಸ್ಥಾನದಲ್ಲಿ ಅವನು ಸುಖಿಯಾಗಿರುತ್ತಾನೆಂದೂ ಅಲ್ಲ; ಆದರೆ ಅದಕ್ಕೆ ಶರಣುಹೊಡೆಯುವಷ್ಟು ಮನೋನಿರ್ಧಾರ ಕೂಡ ಅವನಲ್ಲಿರುವದಿಲ್ಲ. ಬ್ರಿಟಿಶರು ದುಷ್ಟರ ಮತ್ತು ಸ್ವಾರ್ಥಿಗಳ ಬೆಂಬಲದಿಂದ ಇಲ್ಲಿ ಆಳುತ್ತಿರದೆ ನಮ್ಮಲ್ಲಿರುವ ಸಜ್ಜನರ ದೌರ್ಬಲ್ಯದ ಬಲದಿಂದ ಆಳುತ್ತಿದ್ದರೆಂದು ಗಾಂಧೀಜಿ ಹೇಳುತ್ತಿದ್ದರು. ಭಾರತದಲ್ಲಿರುವ ಸಜ್ಜನರು 'ಒಲ್ಲೆ' ನೆನ್ನುವಷ್ಟು ಗಟ್ಟಿಗರಾಗಿ ಯಾವುದಾದರೊಂದು ವಿಷಯಕ್ಕೆ ಅಸಮ್ಮತಿಯನ್ನು ಪ್ರದರ್ಶಿಸತೊಡಗಿದಾಕ್ಷಣ ಭಾರತಕ್ಕೆ ಸ್ವರಾಜ್ಯದೊರೆಯುವದೆಂದು ಹಿಂದೊಬ್ಬ ವೈಸರಾಯರು ಹೇಳಿದ್ದರಂತೆ. ಸಜ್ಜನರ ಈ ದೌರ್ಬಲ್ಯ ಗಾಂಧೀಜಿಗೆ ಗೊತ್ತೇ ಇತ್ತಾದುದರಿಂದಲೇ ಅವರು ಕೆಡುಕಿನ ಸಂಗಡ ಅಸಹಕಾರ ಮಾಡಬೇಕೆಂದು ಒತ್ತಿಹೇಳಿದರು. ನನ್ನ ನಮ್ರ ಅಭಿಪ್ರಾಯದಲ್ಲಿ, ನಿಷ್ಕಪಟಿಗಳೂ ಪ್ರಾಮಾಣಿಕರೂ ಆದ ಶಾಸನಸಭಾಸದಸ್ಯರು ಹುಸಿಯಾದರೂ ಚಿಂತೆಯಿಲ್ಲ, ಹೊಣೆಗಾರ ಸರಕಾರ ನಡೆಯಲೆಂಬ ಹುಚ್ಚು ಹಂಬಲದಿಂದ, ಪೂರ್ಣ ವಿಶ್ವಾಸಾರ್ಹವಾದ ಚರಿತ್ರಬಲವೂ ಯೋಗ್ಯತಾಸಂಪತ್ತಿಯೂ ಇಲ್ಲದ ಯಾವುದೊಂದು ಪಂಗಡದ ಅಥವಾ ಪಂಗಡದ ನಾಯಕನ ಸಂಗಡ ಸಹಕರಿಸುವದು ಶುದ್ಧ ತಪ್ಪು.

ಇಂಥ ಅವಸ್ಥೆಗೆ ಏನು ಉಪಾಯ? ಪ್ರಜಾತಂತ್ರ ಮತ್ತು ಸುರಾಜ್ಯದ ಸಂಬಂಧದಲ್ಲಿ ನಾನು ಬರೆದ ಲೇಖದಲ್ಲಿ, (ಇದೇ ಸಂಚಿಕೆಯ ಮಧ್ಯ ಪುಟ ನೋಡಿರಿ.) ಒಂದು ದಿಕ್ಕನ್ನು ಸೂಚಿಸಿದ್ದೇನೆ. ಅದನ್ನು ಆಳವಾಗಿ ವಿಚಾರಿಸಬೇಕೆಂದು ಮುಂದಾಳುಗಳಿಗೂ ಘಟನಾಕರ್ತರಿಗೂ ನನ್ನ ಬಿನ್ನಹ.

ಸದ್ಯಕ್ಕೆ ಜನರ ಅವಸ್ಥೆ ದುರಂತವೇ ಆಗಿದೆ. ಶಾಸನಸಭಾಭವನದಲ್ಲಿ ಇಂಥ ಕುಸ್ತಿಗಳು ನಡೆಯುವದನ್ನು ನೋಡಲು ಜನರೇನೂ ಈ ಪ್ರತಿನಿಧಿಗಳನ್ನು ಆರಿಸಿರಲಿಲ್ಲ! ಗಾಂಧೀಜಿಯ ಮತ್ತು ಕಾಂಗ್ರೆಸಿನ ಹೆಸರಲ್ಲಿ ಮತ ಕೊಡಬೇಕೆಂದು ಅವರನ್ನು ಕೇಳಿಕೊಳ್ಳಲಾಗಿತ್ತು. ಈ ಪ್ರತಿನಿಧಿಗಳಲ್ಲಿ ತುಂಬ ಪ್ರತ್ಯಾಶೆಯನಿಟ್ಟದ್ದು ಜನರ ಅಪರಾಧವಲ್ಲ. ಆದರೆ ಅವರನ್ನೀಗ ಕೇಳುವವರೇ ಇಲ್ಲ. ಆರ್ಥಿಕ ಬಿಕ್ಕಟ್ಟಿನಿಂದಲೂ ನೌಕರಶಾಹಿಯ ಕೆಟ್ಟ ಆಡಳಿತೆಯಿಂದಲೂ ಜರ್ಜರಿತರಾಗಿ ಅವರು ನರಳಬೇಕಾಗಿದೆ. ಕಾಂಗ್ರೆಸ್ಸಿನಲ್ಲಿಟ್ಟ ವಿಶ್ವಾಸವನ್ನು ಅವರು ಹಿಂತೆಗೆದುಕೊಂಡರೆ ತಪ್ಪಲ್ಲ. ಸಾಮ್ಯವಾದಿಗಳೋ ಕಮ್ಯುನಿಸ್ಟರೋ ಮತ್ತಾರಾದರೋ ಅಧಿಕಾರಕ್ಕೆ ಬರಬಹುದೆಂಬ ಕಾರಣದಿಂದ, ಕಾಣದ ಗುಣಗಳನ್ನು ಉಂಟೆಂದು ಆರೋಪಿಸಿ ಕಾಂಗ್ರೆಸ್ಸನ್ನು ಸ್ತುತಿಸುವದು ಒಳಿತಲ್ಲ. ಅದು ಸೋತರೆ ಅದಕ್ಕೆ ಯೋಗ್ಯ ಶಾಸ್ತಿಯೋ ಆದಂತಾಯಿತು. ಕಾಂಗ್ರೆಸ್ ಸಂಸ್ಥೆ ಈಗ ನಡೆಯುತಿರುವ ರೀತಿಯನ್ನು ನೋಡಿದರೆ, ಪ್ರಾಮಾಣಿಕರೂ ಸಜ್ಜನರೂ ಅದರಲ್ಲಿ ಭಾಗವಹಿಸುವದೇ ಅಸಾಧ್ಯ. ಅವರು ಹೇಸಿ ತಾವಾಗಿಯ ಹೊರಬಿದ್ದರೆ ನೆಟ್ಟಗೆ, ಇಲ್ಲದಿದ್ದರೆ ಅವರನ್ನು ಹೊರತಳ್ಳಲೂ ಹಿಂದೆ ಮುಂದೆ ನೋಡುವದಿಲ್ಲ.

ನಾವು ರೂಪಿಸಬೇಕೆಂದಿರುವ ಪ್ರಜಾತಂತ್ರ ಜನರಿಗೆ ಹೊಸತು. ಅವರು ಉದಾತ್ತವಾದಏಕಸತ್ತೆಯನ್ನು ಅರ್ಥಮಾಡಿಕೊಳ್ಳಬಲ್ಲರು. ನಿರಂಕುಶ ರಾಜರ ಪ್ರಭುತ್ವವೇ ಭಾರತದಲ್ಲಿ ಹಬ್ಬಿತ್ತು. ಏಕೆಂದರೆ ಅಪರೂಪಕ್ಕಾದರೂ ಅದರಲ್ಲಿ ಉದಾತ್ತ ಸತ್ತಾಧಾರಿಗಳು ಆಗಿ ಹೋಗುತಿದ್ದರು. ಅವರ ಕಠೋರವಾದರೂ ಉದಾರವಾದ ಆಳಿಕೆಗಳಿಂದ ನಿರಂಕುಶ ಸತ್ತೆಯಲ್ಲಿರುವ ಮೂಲ ದೋಷಗಳನ್ನೂ ನೂರಾರು ದುರ್ಬಲ, ದುಷ್ಟ ರಾಜರ ಕೆಟ್ಟ ಆಳಿಕೆಗಳನ್ನೂ ಜನರು ಮರೆತುಬಿಡುತಿದ್ದರು. ನಿರಂಕುಶ ಸರಕಾರಗಳ ಹಿಡಿತಕ್ಕೆ ಭಾರತ ಒಳಗಾಗಬಾರದೆಂದಿದ್ದರೆ, ಕಾಂಗ್ರೆಸ್ಸು ತನ್ನ ಹೊಣೆಯನ್ನರಿತು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು. ಕುತಂತ್ರಿಗಳೂ ಕಾರ್ಯಸಾಧನೆಗಾಗಿ ಬೇಕಾದ್ದನ್ನು ಮಾಡುವವರೂ ಬೇರೆ ಸ್ಥಳ ಹುಡುಕುವಂತೆ ಮಾಡಬೇಕು. ಕಾಂಗ್ರೆಸ್ಸಿನಲ್ಲಿ ಉಳಿಯುವದು ಅವರಿಗೆ ಕಠಿನವಾಗುವಂತೆ ಮಾಡಬೇಕು.

ಇದಕ್ಕೊಂದು ಒರೆಗಲ್ಲನ್ನು ಗಾಂಧೀಜಿ ಸೂಚಿಸಿದ್ದರು. ಅದು ಅವ್ಯವಹಾರ್ಯವೆಂದು ಭಾವಿಸಲ್ಪಟ್ಟಿತು. ಹಾಗೆ ಭಾವಿಸಲ್ಪಟ್ಟದ್ದು ಅದನ್ನು ಆಚರಣೆಗೆ ತರುವದು ದುಷ್ಕರವಾಗಿದ್ದುದರಿಂದಲ್ಲ; ಅದು ಸದಸ್ಯನ ಅಂತರಂಗವನ್ನೇ ಒರೆಗೆ ಹಚ್ಚಿಬಿಡುವಂತಿದ್ದುದರಿಂದ. ಆದರಿಂದ ಉಪಾಯಾಂತರದಿಂದ ತಪ್ಪಿಸಿಕೊಂಡು ದೀರ್ಘಕಾಲದ ವರೆಗೆ ಸಿಕ್ಕಿಬೀಳದೆ ಉಳಿಯುವದು ಸಾಧ್ಯವಿರಲಿಲ್ಲ. ನೂಲುವದು, ಅಸ್ಪೃಶ್ಯತೆಯನ್ನು ಬಿಟ್ಟುಬಿಡುವದೇ ಮೊದಲಾದುದನ್ನು ಅವರು ಕಡ್ಡಾಯವಾಗಿ ಮಾಡಿದ್ದರು. ಕಳೆದ ಮಹಾಯುದ್ಧದ ವಿರುದ್ಧ ವೈಯಕ್ತಿಕ ಸತ್ಯಾಗ್ರಹ ಹೂಡಿದಾಗ ಸತ್ಯಾಗ್ರಹಕ್ಕೆ ಹೋಗುವವನು ನೂಲುವವನಾಗಿರಬೇಕೆಂದು ಗಾಂಧೀಜಿ ಕರಾರು ಹಾಕಿದ್ದು ಸ್ಮರಣಾರ್ಹವಾಗಿದೆ. ಅನೇಕರು ಅವರನ್ನು ಮೋಸಗೊಳಿಸಲು ಪ್ರಯತ್ನಿಸಿ ತಾವು ಅದರಲ್ಲಿ ಗೆದ್ದುದಾಗಿ ಭಾವಿಸಿದ್ದರೇನೋ ನಿಜ. ಆದರೆ ನಿಜವಾಗಿ ಈ ಕಪಟ ಅವರಿಗೆ ತಿಳಿಯದೆ ಇದ್ದಿಲ್ಲ; ಅವರು ಸ್ವಲ್ಪ ಸಡಿಲು ಬಿಟ್ಟಿದ್ದರು ಅಷ್ಟೆ. "ಜೇಲಿ ಕೇಳಿ" ಅವರು ಬಂಧಿಸಲ್ಪಟ್ಟರೆ ಸೆರೆಮನೆಗೆ ಹೋಗಬೇಕಾಗುವದು, ಇಲ್ಲದಿದ್ದರೆ ಸ್ವಂತ ವೆಚ್ಚದಿಂದ ದಿಲ್ಲಿಗೆ ಕಾಲ್ನಡಿಗೆಯ ಪಯಣ ಮಾಡಬೇಕಾಗುವದು, ಎಂದು ಗಾಂಧೀಜಿ ಒಮ್ಮೆ ಹೇಳಿದ್ದರು. ಕಪಟದಿಂದ ಲಾಭವಿಲ್ಲೆಂದು ಅವರಿಗೆ ಬೇಗನೆ ಹೊಳೆದೇ ಹೊಳೆಯುವದು.

'ಸಕ್ರಿಯ ಸದಸ್ಯತ್ವ'ದ ಮಾಯಾಜಾಲವನ್ನೊಡಗಿಸಿ ಕಾಂಗ್ರೆಸ್ಸು ಗಾಂಧೀಜಿಯ ಕರಾರುಗಳಿಂದ ಪಾರಾಗಲು ಹಲಗಾಲದಿಂದ ಪ್ರಯತ್ನಿಸಿದೆ. ಇದರಿಂದ ಸಂಸ್ಥೆಗೆ ಒಳಿತಾಗಿಲ್ಲ. ಈ ಕಪಟನಾಟಕವನ್ನು ನಿಲ್ಲಿಸಬೇಕು. ಪ್ರತಿಯೊಬ್ಬನಿಗೂ ಅನ್ವಯಿಸುವ ಈ ನಾಲ್ಕು ಯೋಗ್ಯತೆಗಳಿದ್ದರೆ ಸಾಕು: ಸಾಮೂಹಿಕ ಸೂತ್ರಯಜ್ಞದಲ್ಲಿ ಭಾಗವಹಿಸುವದು; ತಿಂಗಳಿಗೆ ಕನಿಷ್ಠ ಎರಡು ಲಡಿಗಳನ್ನಾದರೂ ನೂಲುವದು; ಭಂಗಿ ಕೆಲಸದಲ್ಲಿ ಭಾಗ

ವಹಿಸುವದು, [illegible]
[illegible]
ಗಳಿಂದ ಕಾಂಗ್ರೆಸ್ಸಿನಲ್ಲಿರುವ [illegible]
ಷ್ಟವೂ ಕಳೆದು ಹೋಗುವವೆಂದು [illegible]
ಮಹಾ ಬುದ್ಧಿಬಲ, ರಾಜಕೀಯ [illegible]
ಗಳುಳ್ಳವೆಂದು ಕೊಚ್ಚಿಕೊಳ್ಳುವ [illegible]
ಸರಳ ಪರೀಕ್ಷೆಯಿಂದ ಬೇಸರಿಕೆಬಂದ [illegible]
ಬೇರಾವುದಾದರೂ ಸಂಸ್ಥೆಯನ್ನು [illegible]
ವರು. ಅವರೇ ತಪ್ಪಾಲಕ್ಕೆ ಅಧಿಕಾರ [illegible]
ರಾದರೂ ಅವರ ಬಹಿರ್ಗಮನದಿಂದ [illegible]
ಪಾದ ಕಾಂಗ್ರೆಸ್ಸು ಅವರ [illegible]
ತಮ್ಮಲ್ಲಿ ತಡೆದುಕೊಳ್ಳಲು [illegible]
ದಿರದು.

ವರ್ಧಾ
೨೧—೫—೪೯ —ಕಿ. ಘ. ಮಶ್ರೂವಾಲಾ

ಮೂಲಶಿಕ್ಷಣ ಮತ್ತು ಕೃತಕ ಮೂಲಶಿಕ್ಷಣ

[ಈ ಕೆಳಗಿನದು ನನ್ನ ಬೇಡಿಕೆಯ ಮೇರೆಗೆ ಒಂದು ದೊಡ್ಡ ಪ್ರಾಂತದ ಶಿಕ್ಷಣದೊಡನೆ ನಿಕಟ ಸಂಬಂಧವಿರುವ ಒಬ್ಬರು ಕಳಿಸಿದ್ದು. —ಸಂ.]

೧

ನನಗೆ ಗೊತ್ತಿದ್ದಂತೆ "ಮೂಲ" ಎಂಬ ಪದ ಮೊಟ್ಟಮೊದಲಿಗೆ ಶಿಕ್ಷಣಕ್ಕೆ ಸಂಬಂಧಿಸಿ ಮಹಾತ್ಮರಿಂದ ಪ್ರಯುಕ್ತವಾಯಿತು. ಮತ್ತು ಅವರ ಶಿಕ್ಷಣದ ಸಪ್ತವಾರ್ಷಿಕ ಯೋಜನೆಯನ್ನು ಮೂಲವೆಂದು ಕರೆಯಲಾಯಿತು. ಅವರು ಮೂಲಶಿಕ್ಷಣವೆಂಬ ಪದದ ಅರ್ಥವನ್ನು ಹೆಚ್ಚಿಸಿದರು ಮತ್ತು ಕ್ರಮೇಣ ಅದಕ್ಕೆ ವಿಶಿಷ್ಟಾರ್ಥ ಮತ್ತು ಸಾಂದರ್ಭಿಕತೆಗಳು ಅಂಟಿಕೊಂಡವು. ಅದಕ್ಕೆ (೧) ಒಂದು ಸಾಮಾಜಿಕ ಘಟಕವೆಂದೂ ವ್ಯಕ್ತಿಯೆಂದೂ ಮಗುವಿನ ಮನೋಧರ್ಮದ ತಳಹದಿಯನ್ನೂ ರೂಪಗಳನ್ನೂ ನಿರೂಪಿಸುವ, (೨) ಕೆಲ ಸ್ಥಳೀಯ ಅವಶ್ಯಕತೆಯನ್ನು ಪೂರಯಿಸುವ ಒಂದು ಮೂಲ ಕೈಗಾರಿಕೆಯ ಮೂಲಕ ಕೊಡತಕ್ಕ, (೩) ದರಿದ್ರ ಶ್ರೀಮಂತ ಭೇದವಿಲ್ಲದೆ ನಗರಸ್ಥ ಗ್ರಾಮಸ್ಥರೆನ್ನದೆ ಏಕತತ್ವಾನುಸಾರವಾಗಿ ರಾಷ್ಟ್ರದ ಎಲ್ಲ ಮಕ್ಕಳಿಗೂ ಸರ್ವಸಾಧಾರಣ ತಳಹದಿಯಾಗಿರುವ ಒತ್ತಾಯದಿಂದ ಉಚಿತವಾಗಿ ಕೊಡುವ ಸರ್ವಾನ್ವಯ ಪದ್ಧತಿಯದಾಗಿರುವ (೪) ವಿಶಿಷ್ಟವೂ ಮೇಲ್ಮಟ್ಟದ್ದೂ ಆದ ವಿದ್ಯಾಭ್ಯಾಸದ ರಚನೆಗೆ ಸಾರ್ವತ್ರಿಕ ತಳಹದಿಯಾಗಿರುವ ಮತ್ತು (೫) ರಾಷ್ಟ್ರದ ಸರ್ವೋದಯ ಕಲ್ಪನೆಗೊಯ್ದು ಮುಟ್ಟಿಸುವ, ದೇಶದ ಸರ್ವ ಪ್ರಗತಿ ಮತ್ತು ಸಂಸ್ಕೃತಿಗೆ ನೆಲಗಟ್ಟಾಗಿ ನಿಲ್ಲುವ ಶಿಕ್ಷಣ ಎಂಬ ಅರ್ಥ ಬಂದಿತು.

ಸರಿಯಾಗಿಯೋ ಆಗಲಿ, ತಪ್ಪಾಗಿಯೋ ಆಗಲಿ, ಮಹಾತ್ಮರ ಶಿಕ್ಷಣಪದ್ಧತಿಗೆ ಆ ಪದವೊಂದು ಅಂಕಿತನಾಮವಾಗಿ ಹೋಯಿತು ಮತ್ತು ಯಾವುದಾದರೊಂದು ಶಿಕ್ಷಣಪದ್ಧತಿಯನ್ನು ಮೂಲಶಿಕ್ಷಣಪದ್ಧತಿ ಎಂದು ಕರೆದಾಕ್ಷಣ ಜನರು ಅದನ್ನು ಮಹಾತ್ಮರ ಪದ್ಧತಿಯೆಂದೇ ಭಾವಿಸುತ್ತಾರೆ.

ಕೇಂದ್ರ ಸೂಚನಾಸಮಿತಿ "ಮೂಲ" ಎಂಬ ಪದವನ್ನು ತೆಗೆದುಕೊಂಡು ಕೆಲಮಟ್ಟಿಗೆ ಗಲಿಬಿಲಿಯನ್ನೂ ಅಪಕಲ್ಪನೆಯನ್ನೂ ಉಂಟುಮಾಡಿದೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ಕೇಂದ್ರ ಸೂಚನಾಸಮಿತಿಯ ಮೂಲಶಿಕ್ಷಣವೆಂದರೆ ಇಂಗ್ಲೆಂಡ್ ಮತ್ತು ಅಮೇರಿಕಗಳ ಇಂದಿನ ಮಿಡಲ್ ಮತ್ತು ಪ್ರೈಮರಿ ಶಾಲೆಗಳ ವಿದ್ಯಾಭ್ಯಾಸದಲ್ಲಿಯ ಪ್ರಗತಿಗೆ ಸರಿಸಮವಾಗಿ ಮಾಡಿದ ಒಂದು ಅಲ್ಪ ಸುಧಾರಣೆ. ಅದು ಕೇವಲ ಆಡಳಿತೆ, ರಚನೆ ಇವುಗಳಲ್ಲಿಯ ಸುಧಾರಣೆ ಮತ್ತು ವಿಸ್ತರಣ.

ಕೇಂದ್ರ ಸೂಚನಾಸಮಿತಿಯ ಇತ್ತೀಚಿನ ಪುರಸ್ಕಾರಗಳು

ಕೇಂದ್ರ ಸೂಚನಾಸಮಿತಿಯ ಇತ್ತೀಚಿನ ಪುರಸ್ಕಾರಗಳು ಹಿಂದಿನ ಪುರಸ್ಕಾರಗಳಿಗೆ ಚಾಚೂ ತಪ್ಪದೆ ಅಂಟಿಕೊಂಡಿವೆ. ಹೆಚ್ಚಿನ ಬದಲಾವಣೆಯೆಂದರೆ ಬಡ ಮಕ್ಕಳಿಗೆ ಕೆಲಮಟ್ಟಿನ ಅವಕಾಶವನ್ನು ಕಲ್ಪಿಸಿಕೊಡುವ ಸಾರ್ಜೆಂಟ್ ವರದಿಯ ಅನುಕೂಲ್ಯ ಮತ್ತು ಸಂರಕ್ಷಣೆಗಳಷ್ಟೇ. ತಡವಾಗಿ ಬುದ್ಧಿ ಪರಿಪಾಕ ಹೊಂದುವವರಿಗೆ ಈ ವರೆಗೆ 'ಅಲ್ಲಿ ಸ್ಥಾನವೇ ಇಲ್ಲ. ಈ ಪದ್ಧತಿಯು ವ್ಯವಹಾರದಲ್ಲಿ ೧೯೪೪ ರ ಶಿಕ್ಷಣಶಾಸನದ ಹಿಂದೆ ಇದ್ದ ಇಂಗ್ಲೀಷು ವಿದ್ಯಾಭ್ಯಾಸ ಪದ್ಧತಿಯನ್ನು ಪ್ರತಿಪಾದಿಸುತ್ತದೆ. ೧೯೪೪ ರ ಶಾಸನವು

ಶಾಲಾಶಿಕ್ಷಣದ ಮಾಧ್ಯಮಿಕ ಅವಸ್ಥೆ [illegible]
ಎರಡು ವರ್ಷಗಳಲ್ಲಿ ಸರ್ವಸಾಧಾರಣ [illegible]
ಕ್ರಮದಂತೆ ವಿದ್ಯಾಭ್ಯಾಸ ಮಾಡಿ [illegible]
ಒಂದು ಬಗೆಯ ಶಾಲೆಯಿಂದ [illegible]
ಬಗೆಯದಕ್ಕೆ ಸುಲಭವಾಗಿ ವರ್ಗಾ[illegible]
ಲ್ಪಡುವ ಅವಕಾಶವನ್ನು ಕಲ್ಪಿಸಿ[illegible]
ಮಾಧ್ಯಮಿಕ ಅವಸ್ಥೆಯ ಎಲ್ಲ ಬಗೆಯ [illegible]
ಗಳೂ ಒಂದೇ ಸ್ಥಾನಮಾನಗಳು[illegible]
ಮಾಧ್ಯಮಿಕ ಶಿಕ್ಷಣಾವಸ್ಥೆಯ [illegible]
ಪಾಲಕರ ಧನವ್ಯಯಶಕ್ತಿ [illegible]
ಇರಲಿ, ಮಗು ತನ್ನ ವಯೋಮಾನ, ಮ[illegible]
ದಾರ್ಢ್ಯ ಮತ್ತು ಪ್ರವೃತ್ತಿಗಳ ಅನುಸಾರ[illegible]
ಕಲಿಯುವ ಅವಕಾಶಗಳನ್ನು ಪಡೆಯುವ[illegible]
ದೆಂದೂ ಅದು ಸ್ಪಷ್ಟಪಡಿಸುತ್ತದೆ.

೨. ಸಾರ್ವತ್ರಿಕ ಬಲಾತ್ಕಾರ ಶಿಕ್ಷಣದ ಅವ[illegible]
ಯನ್ನು ನಲವತ್ತರಿಂದ ಹನ್ನೆರಡು. [illegible]
ವರ್ಷಗಳಿಗಿಳಿಸಿದ್ದಕ್ಕೆ ಭಾರತ ಸರಕಾರಕ್ಕೆ [illegible]
ಜ್ಞತೆ ಸಲ್ಲಿಸಬೇಕು.

೩. ಲಕ್ಷಿಸತಕ್ಕ ಇನ್ನೂ ಒಂದು ಅಂಶವಿ[illegible]
ಕೇಂದ್ರ ಸೂಚನಾಸಮಿತಿಯು [illegible]
ಶಾಲೆಯ ಮೂರು ಇಯತ್ತೆಗಳಲ್ಲಿ [illegible]
ಒತ್ತಾಯದಿಂದ ಮತ್ತು ಆ ಬಳಿಕ [illegible]
ಹೈಸ್ಕೂಲಿನ ನಾಲ್ಕು ಪ್ರಬುದ್ಧ ಇಯತ್ತೆಗಳ[illegible]
ಐಚ್ಛಿಕವಾಗಿ ರಾಷ್ಟ್ರಭಾಷೆಯನ್ನು (ಹಿಂದು[illegible]
ಸ್ತಾನಿ ಅಥವಾ ಹಿಂದಿ–ಘಟನಾಸಮಿತಿ [illegible]
ದನ್ನು ಸ್ವೀಕರಿಸುವದೋ ಅದನ್ನು) ಕಲಿ[illegible]
ಬೇಕೆಂದು ಪುರಸ್ಕರಿಸಿದೆ. ರಾಷ್ಟ್ರಭಾಷೆ[illegible]
ಇಂದು ಹೈಸ್ಕೂಲು ಮತ್ತು ಕಾಲೇಜುಗಳ[illegible]
ಬಲಾತ್ಕಾರವಾಗಿ ಕಲಿಸದಿದ್ದರೆ, ಇಂಗ್ಲೀ[illegible]
ಬದಲಾಗಿ ಬಂದು ಐದು ಅಥವಾ ಹತ್ತು ವ[illegible]
ಗಳ ಮೇಲಾದರೂ ಅದು ಹೇಗೆ ರಾಷ್ಟ್ರ[illegible]
ಬೌದ್ಧಿಕ ಶಾಸ್ತ್ರೀಯ ಜೀವನದಲ್ಲಿ [illegible]
ನ್ಯಾಯ್ಯವಾದ ಸ್ಥಾನವನ್ನು ಪಡೆಯುವು[illegible]
ಎಂಬದನ್ನು ತಿಳಿಯುವುದು ಕಠಿನ. ಬಂಗಾಲಿ,
ಗುಜರಾತಿ ಮತ್ತು ಮರಾಠಿ [illegible]
ಪ್ರದೇಶಗಳಲ್ಲಿ ಅದು ಒಂದು ಸುಲಭ[illegible]
ಭಾಷೆಯಾಗಬಲ್ಲದು ಎಂಬುದರಲ್ಲಿ ಸಂದೇ[illegible]
ವಿಲ್ಲ. ಆದರೂ ಶಿಕ್ಷಣಶಾಸ್ತ್ರಜ್ಞರೂ [illegible]
ಮೇಧಾವಿಗಳೂ ಅದಕ್ಕೆ ಯೋಗ್ಯ ಸ್ಥಾನವನ್ನೂ
ಮನ್ನಣೆಯನ್ನೂ ಕೊಡದಿದ್ದರೆ ಅದು
ಕುಂಠಿತವಾಗಿಯೇ ಉಳಿಯುವುದು. [illegible]
ಭಾಷೆಯ ಅಭಿವೃದ್ಧಿಗೆ ಸಾರ್ವಜನಿಕರ [illegible]
ಭೂತಿಯೂ ಮೇಧಾವಿಗಳ ಉದ್ದೇಶಪೂರ್ವಕ[illegible]
ವಾದ ಪ್ರಯತ್ನವೂ ಎರಡು [illegible]
ದಂಥ ಪೂರ್ವಸ್ಥಿತಿಗಳು–ಅವರಲ್ಲೂ [illegible]
ನಾಡು ವಿದೇಶೀಯ ಆಡಳಿತೆಯಲ್ಲಿ [illegible]
ಮುಂದೆ ಇರಬೇಕಾಗಿಲ್ಲದಾಗ ಇನ್ನೂ ಹೆ[illegible]
ಅಂಥ ಸ್ಥಿತಿಗಳು ಇರಬೇಕು.

ಇಂದು ಮಾಡಿದ್ದು ಹತ್ತು ವರ್ಷಗಳ ಬಳಿ[illegible]
ರಾಷ್ಟ್ರದ ನೇತೃಗಳಾಗಿಯೂ ಕಾರ್ಯ[illegible]
ರಾಗಿಯೂ ಸ್ಥಾನಾಪನ್ನರಾಗಲಿರುವ [illegible]
ವರ್ಷ ವಯಸ್ಸಿನೊಳಗಿರುವ ಮಕ್ಕಳಿ[illegible]
ಲುತ್ತದೆ. ಇಂದು ಶಿಕ್ಷಣ ಪದ್ಧತಿ[illegible]
ರಾಷ್ಟ್ರಭಾಷೆಗೆ ಯೋಗ್ಯ ಸ್ಥಾನವನ್ನು [illegible]
ದಿದ್ದರೆ ಗೊಂದಲವೇಳಬಹುದು. [illegible]
ದರೆ ಜನರು ಇಂಗ್ಲೀಷನ್ನು ರಾಷ್ಟ್ರಭಾಷೆ
ಯನ್ನಾಗಿ ತೆಗೆದುಕೊಂಡು [illegible]
ದನ್ನು ಒಪ್ಪುವುದಿಲ್ಲ. ಅನಂತರ [illegible]
ಬೇಕಾದ ಒಂದು ವಿಷಯ ವ್ಯಾಪಿಸಿದೆ. [illegible]
ಸ್ತಾನಿಯಲ್ಲಿ ಆಡಳಿತೆಯನ್ನು [illegible]
ಸಾಕಷ್ಟು ಅಧಿಕಾರಿಗಳೂ [illegible]
ವೆಂದು ಸರಕಾರ ಹೇಳುತ್ತದೆ; [illegible]
ಹಿಂದುಸ್ತಾನಿಯಲ್ಲಿ ನಡೆಸುವ [illegible]
ಹೊರತು ತಾನು ಮುಂದುವರೆ[illegible]

—[illegible]

ಸುಪ್ರಭಾತ

[೫ ನೆಯ ಪುಟದಿಂದ]

ಇನ್ನೇನೂ ತಿಳಿಬೇಕು," ಎಂದು ಬೆಂಕಿಯನ್ನೇ ಕಾರಿದೆ.

ಟಾಕಿಯು ಸುಮ್ಮನೆ ಕೆಲ ನಿಮಿಷ ಅಲ್ಲೇ ನಿಂತ. ಕೊನೆಗೆ ಸ್ವಲ್ಪ ಧೈರ್ಯ ಮಾಡಿಕೊಳ್ಳುತ್ತಾ "ಮಾಮಾ. ಒಂದು ಶಬ್ದ ಹೇಳು. Dead of the night. ಎಂದರೇನು? ಅಷ್ಟೆ ಸಾಕು."

"ಅಂ. ದರೆ. (ಏನು. ಸದ್ಯನೇ. ಮುಖ್ಯನಾಗುತ್ತೇನೋ ಏನೋ!) ಹೋಗುತ್ತೀಯೋ ಬೇಗ. ಇಲ್ಲ ಏನಾದರೂ ಫಲಾಹಾರಕ್ಕೆ ಬೇಕೋ" ಎನ್ನುತ್ತಾ ಕೈಯೆತ್ತಿದೆ. ಟಾಕಿಯು ಓಡಿದ.

ಇಷ್ಟಾಗುವಾಗ ಜಗತ್ತಿನಲ್ಲಿ ಸಿಗರೇಟೆಂಬ ವಸ್ತುವಿದೆಯೆಂದು ಜ್ಞಾಪಕಕ್ಕೆ ಬಂತು. ಬಹಳ ಹುರುಪುಗೊಂಡೆ. ಮಲಗಿದಲ್ಲಿಯೇ ಒಂದು ಸಿಗರೇಟನ್ನುರಿಸಲು ಪ್ರಯತ್ನಿಸಿದೆ. ಉರಿಯುತ್ತಿರುವ ಬೆಂಕಿಕಡ್ಡಿ ಥಕ್ಕನೆ ಹಾರಿ ಎದೆಯ ಮೇಲೆ ಬಿತ್ತು. "ಹುಶ್" ಎಂದು ಸಟಕ್ಕನೆ ಹಾರಿ ಆ ಕಡ್ಡಿಯನ್ನು ಎದೆಯಿಂದ ಹಾರಿಸಿದೆ. ನನ್ನ, ಸ್ವಲ್ಪ ಸುಟ್ಟಂಗಿಯನ್ನು ಅಲ್ಲಿಯೇ ಪರೀಕ್ಷಿಸುತ್ತಿರುವಷ್ಟರಲ್ಲಿ ನನ್ನಕ್ಕ ಬಂದು "ನೀನೀಗ ಹೊರ ಹೋಗಲಿರುವೆಯೊ?" ಎಂದಳು.

"ಇಲ್ಲ."

"ನನಗೊಂದು ಸಾಬೂನು ಪೆಟ್ಟಿಗೆ ಬೇಕಿತ್ತು."

"ನನಗೀ ಜಗತ್ತಿನಲ್ಲಿ ನಿನಗೆ ಸಾಬೂನು ಪೆಟ್ಟಿಗೆ ತಂದು ಕೊಡುವುದಲ್ಲದೆ ಬೇರೆ ಎಷ್ಟೋ ಕೆಲಸಗಳಿವೆ" ಎಂದುತ್ತರಿಸಿದೆ.

"ನನಗೇನೊ ನೀನು ಮಾಡುವ ಕೆಲಸಗಳಲ್ಲಿ ಮುಖ್ಯವಾಗಿ ತೋರುವುದು ಎರಡೇ. ಒಂದು ಹಾಸಿಗೆಯಲ್ಲಿ ಅಂಗಾತ ಮಲಗುವುದು. ಎರಡು. ಸಿಗರೇಟು ಪಾಕೇಟುಗಳನ್ನು ಬೂದಿ ಮಾಡಿಹಾಕುವುದು."

"ಅದು ಹೇಗೊ ಇರಲಿ. ನನಗೀಗ ಹೊರ ಹೋಗಲು ಸಾಧ್ಯವಿಲ್ಲ."

"ನನಗದು ಗೊತ್ತೇ ಇತ್ತು. ನಿನ್ನ ಸ್ನೇಹಿತರೊಡನೆ ಫಟಾಕಿ ಹಾರಿಸಲಿಕ್ಕಾದರೆ ಮಟಮಟ ಮಧ್ಯಾಹ್ನವೇ ಹೋಗುವೆ. ಯಾವುದಾದರೂ ಕೆಲಸ ಹೇಳಿದರೆ ಮಾತ್ರ ನಿನಗೆ ಕಾಲೇ ಬರುವುದಿಲ್ಲ" ಕೋಪಗೊಂಡು ಹೇಳಿದಳು.

"ದಯವಿಟ್ಟು ಸ್ವಲ್ಪ ನನ್ನನ್ನು ಸುಮ್ಮನಿರಬಿಡು. ಸಾಷ್ಟಾಂಗ ನಮಸ್ಕಾರ ನಿನಗೆ" ಎಂದು ಬೇಡಿಕೊಂಡೆ.

"ಅಯಿತು, ಮಹಾರಾಯಾ, ಹೋಗುತ್ತೇನೆ. ಇಷ್ಟು. ನನ್ನಲ್ಲಿ ತುಚ್ಛೀಕಾರವಲ್ಲವೆ! ಆಗಲಿ. ಅದು ಸಹಜವೇ. ಈಗ ನಿನಗೆ ರೆಕ್ಕೆ ಬಂದಿದೆ. ಅಂದು, ನಿನಗೆ ಪರೀಕ್ಷೆಗೆ ಹಣ ಕಟ್ಟಲಿಕ್ಕೆ ನನ್ನ ಬಳೆ ಅಡವಿಡಲು ಕೊಡದಿರುತ್ತಿದ್ದರೆ ಏನಾಗುತಿತ್ತೋ ಏನೋ. ಆಗಲಿ" ಎಂದು ಹಲುಬಿದವಳು.

ಅಕ್ಕ ಹೋಗಿ ಒಂದೆರಡು ಮಿನಿಟುಗಳೂ ಆಗಿರಲಿಕ್ಕಿಲ್ಲ. ಅಷ್ಟರಲ್ಲಿ ತೀರಾ ಕಂಗಾಲಾದವಳಂತೆ ನನ್ನ ತಾಯಿಯು ಕೋಣೆಯನ್ನು ಪ್ರವೇಶಿಸಿ ಗಂಭೀರ ಭಾವದಿಂದ "ನೀನ್ಯಾಕೆ ಟಾಕಿಗೆ ಸ್ವಲ್ಪ ಪಾಠ ಕಲಿಸಲಿಲ್ಲ?" ಎಂದು ಕೇಳಿದಳು.

"ನನಗೆ ತಲೆ ಸಿಡಿಯುತ್ತಿದೆ–ಸೌಖ್ಯವಿಲ್ಲ— ಅಲ್ಲಲ್ಲ. ಸೌಖ್ಯವೇನೋ ಇದೆ. ತುಂಬಾ ಕೆಲಸಗಳು ಈಗಲೇ ಆಗಬೇಕಾದ್ದಿವೆ. ಅಮ್ಮಾ– ನನ್ನನ್ನೊಬ್ಬನನ್ನೇ ಸ್ವಲ್ಪ ಸಮಯ ಬಿಟ್ಟುಬಿಡು" ಎನ್ನುತ್ತಾ ಅವಳನ್ನು ಹೋಗಹೇಳಿದೆನು.

"ಹುಂ ಹೋಗಬೇಕು. ಆಗಲಿ ಅಂತು ನಾನೊಂದು ದಿನ ಹೋಗಿಯೇ ಹೋಗುತ್ತೇನೆ. ಆಗ ನೀವೆಲ್ಲ ಸುಖವಾಗಿರಬಹುದು. ಇತ್ತೀಚೆ ನೀವೆಲ್ಲ ನನ್ನನ್ನು ಎಂಜಲು ತಿನ್ನುವ ನಾಯಿಗಿಂತಲೂ ಕಡೆಯಾಗಿ ಕಾಣುತ್ತಿರುವದು ನನಗೆ ತಿಳಿದೇ ಇದೆ. ಸ್ವಲ್ಪ ಸಮಯ ಕಾದಿರಿ. ಬದುಕಿದಷ್ಟು ದಿನ ಇನ್ನು ಬದುಕಲಿಕ್ಕಿಲ್ಲ ನಾನು. ಈಗೀಗ ನಿನ್ನ ನಡತೆ ದಿನದಿನಕ್ಕೆ ಹಾಳಾಗುತ್ತಿರುವದನ್ನು ನೋಡುತಿದ್ದೇನೆ. ಇಲ್ಲವಾದರೆ ಸ್ವಲ್ಪವಾದರೂ ದಯಾ ದಾಕ್ಷಿಣ್ಯವು ಬೇಡವೇ ಮನುಷ್ಯನಿಗೆ? ಆ ಪಾಪದ ಮಗುವಿಗೆ ಸುಮ್ಮನಾದಪ್ರ ಯಾಕೆ ಹೊಡೆಯಬೇಕು? ಇಷ್ಟವಿಲ್ಲದಿದ್ರೆ ನೀನು ಕಲಿಸುವುದಾದರೂ ಬೇಡ. ಹೊಡೆಯುವುದಾದ್ರೂ ಯಾಕೆ?"

"ಇಲ್ಲ. ಹೊಡೆದಿಲ್ಲ ನಾನು" ಎಂದಾಕ್ಷೇಪಿಸಿದೆ.

"ಇಲ್ಲಪ್ಪ. ನೀನು ಒಳ್ಳೆಯ ತಿಂಡಿ ಕೊಟ್ಟೆ. ಏಂದವನು ಕೂಗಿದ್ದು" ಎಂದು ಸಂಜು ಕಾರಿದಳು.

"ಅಮ್ಮಾ. ನಿಜವಾಗಿ ನೀಲಿಲ್ಲಿಂದ ಹೋಗಬೇಕು. ನನಗೆ ತುಂಬಾ ಕೆಲಸವಿದೆ."

"ಅಯ್ತಪ್ಪ ಆಯ್ತು; ನಾನು ಹೋಗುತ್ತೇನೆ. ಯಾವ ನರಕಕ್ಕೋ ದೇವರೇ ಬಲ್ಲ."

"ಅಲ್ಲಿಗೆ ನೀನೊಬ್ಬಳೇ ಹೋಗುವದಲ್ಲ. ನಾವೆಲ್ಲರೂ ಒಂದಲ್ಲ ಒಂದು ದಿನ ಹೋಗಲೇ ಬೇಕಾಗಿದೆ." ಅಂತು ಹೀಗೆ ಹೇಳದೆ ನನ್ನ ಬಾಯಿ ಕೇಳಲೇಇಲ್ಲ.

ಅಷ್ಟರಲ್ಲಮ್ಮನು ಕಣ್ಣೀರೊರಸಿ ನಡುಗುವ ಸ್ವರದಿಂದ "ಇವೆಲ್ಲ ಈಗಿನ ಹುಡುಗರ ರೀತಿ ನೀತಿಗಳು, ನನ್ನಿಂದಾಗಿ ನಿಮಗೆಲ್ಲ ಹುಚ್ಚು ಹಿಡಿದಂತಾಗುತ್ತದೆ, ಕಷ್ಟನಷ್ಟಗಳಾಗುತ್ತವೆ, ಎಂದೆಲ್ಲ ಹೇಳಲಿಕ್ಕೆ ನಿಮಗೆ ನಾಚಿಕೆಯಾದರೂ ಆಗುವುದಿಲ್ಲವೆ? ನಾನೇನು ನಿಮ್ಮ ಮಲತಾಯಿಯೇ? ಹೊತ್ತು ಹೆತ್ತು ಸಲಹಿಲ್ಲವೇ ನಿಮ್ಮನ್ನು? ನಿಮ್ಮ ತಂದೆಯವರಿರುತಿದ್ದರೆ ಇಂತಹ ಮಾತುಗಳಿಂದ ನನ್ನನ್ನು ತಿವಿಯುತಿದ್ದಿರೇ? ಗಂಡನನ್ನು ಕಳಕೊಂಡ ಹೆಂಗಸು ಎಲ್ಲವನ್ನು ಕಳಕೊಳ್ಳುವಳು. ಮಕ್ಕಳ ಹೀನ ಮಾತುಗಳನ್ನೆಲ್ಲಾ ಕೇಳುತ್ತಾ ಅವಳು ದಿನ ದೂಡಬೇಕು. ನಿಜವಾಗಿ ಮಕ್ಕಳಿಗಾಗಿ ಅಭಿಮಾನಪಡುವ ತಾಯಂದಿರು ಮೂರ್ಖರೇ ಸರಿ. ಗಂಡನಿಲ್ಲದ ಹೆಂಗಸಿಗೆ ಮಕ್ಕಳಿದ್ದಾದರೂ ಏನು ಫಲ? ಅವರೊಡನೆ ನಾನೂ ಹೋಗಿದ್ದರೆ ಈ ರಗಳೆಯೆಲ್ಲಾ ನಿಮಗೆ ತಪ್ಪುತಿತ್ತು. . . ."

ಈ ರೀತಿಯಲ್ಲೆಲ್ಲ ಗುಣಗುಟ್ಟುತ್ತಾ, ಕಣ್ಣೊರಸುತ್ತಾ ತಾಯತ್ತ ನಡೆದಳು. ಅವಳೊಡನೆ ನನಗೂ ಗಟ್ಟಿಯಾಗಿ ಕೂಗಿಬಿಡಲೋ ಎನಿಸಿತು. ಕೈಕಾಲುಗಳನ್ನು ಉದ್ದಕ್ಕೆ ಎಳೆದುಕೊಂಡು ಹಾಸಿಗೆಯಲ್ಲಿ ನೆಟ್ಟಗೆ ಮಲಕೊಳ್ಳಲು ಯತ್ನಿಸಿದೆ. ಆ ನೀಲಿಮಾಕಾಶ, ಆ ಪ್ರಶಾಂತ ವಾಯು ಇದೆಲ್ಲಾ ಸ್ವಲ್ಪ ಸಮಯದ ಹಿಂದೆ ಹುರಪನ್ನಿತ್ತಿತ್ತು. ಆದರೆ ಈಗ. ಜಗತ್ತೆಲ್ಲಾ ನಿಸ್ಸಾರ, ನೀರಸವಾಗಿ ತೋರಲಾರಂಭಿಸಿತು.

ಅಷ್ಟರಲ್ಲಿ ಅಕ್ಕನು ಗಾಬರಿಗೊಂಡವಳಂತೆ ಓಡುತ್ತ ಕೋಣೆಯೊಳಗೆ ಪ್ರವೇಶಿಸಿದಳು.

"ಏನೇನು? ಮನೆಗೆ ಬೆಂಕಿ ಬಿತ್ತೆ?" ಬೆಚ್ಚಿಬಿದ್ದು ಅವಳನ್ನು ಕೇಳಿದೆ. "ಅಷ್ಟೆಲ್ಲಾ ಹೀನೈಸಬೇಡ" ಎನ್ನುತ್ತ ತಂತಿಯೊಂದನ್ನು ನನ್ನ ಕೈಗಿತ್ತಳು.

ಓದಿ ನೋಡಿದೆ. ವಿಶೇಷವೇನೂ ತೋರದ್ದರಿಂದ "ಇದಕ್ಕೆ ನಾನೇನು ಮಾಡಬೇಕು?" ಎಂದು ಪ್ರಶ್ನಿಸಿದೆ.

"ಅದಕ್ಕೇನು? ಶಶಿಕಲೆಯು ಈ ದಿನ ಬೆಳಿಗ್ಗೆ ಹೊರಟಿರುವಳಾದ್ದರಿಂದ ಸುರೇಶನು ರಜೆ ಪಡೆದು ಬರಬೇಕಾಗಿಲ್ಲವೆಂದು ಪ್ರತಿತಂತಿ ಕೊಟ್ಟರಾಯಿತು," ಎಂದುತ್ತರಿಸಿದಳು.

"ಅದಕ್ಕೇನು ಅವಸರ? ಸಾಯಂಕಾಲ ಕೊಟ್ಟರಾಯಿತು. ಈಗಂತು ನಾನು ಯಾವ ಕೆಲಸಕ್ಕೂ ತೀರಾ ಅಸಮರ್ಥನಿದ್ದೇನೆ" ಎಂದು ಗಂಭೀರ ಭಾವದಿಂದ ಹೇಳಿದೆ.

"ನಿನಗೀ ಪ್ರಾಯದಲ್ಲಿಯೂ ವಿಚಾರ ಲೇಶ ಸಹ ಬಂದಿಲ್ಲವೆಂದು ತಿಳಿಯಲು ತುಂಬಾ ಬೇಸರಪಡುತ್ತೇನೆ. ಸುರೇಶನು ಬೆಂಗಳೂರಲ್ಲಿ ಎಷ್ಟು ಗಾಬರಿಯಿಂದಿರಬಹುದೆಂಬ ಕಲ್ಪನೆ ಸಹ ನಿನ್ನೊಡಲಲ್ಲಿ ಮೂಡುವುದಿಲ್ಲವೆ?'

''ಗಾಬರಿ! ನಾನೆಣಿಸುವುದಾದರೆ. ಯಾಕೆ? ಓ. ಹೊ. ಹೊ. ಏನೋ ಸ್ವಲ್ಪ ಶಶಿಗೆ ಜ್ವರದ ಸುದ್ದಿ ಹೋದ ಕೂಡಲೇ ಏನೆಲ್ಲಾ ಗಾಬರಿ. ಗಲಾಟೆ" ಎಂದು ಸ್ವಲ್ಪ ಅಲಕ್ಷ್ಯಭಾವದಿಂದಲೇ ಹೇಳಿದೆ.

''ಈಗಿನ ನವ ತರುಣರು ನಿಜವಾಗಿಯೂ ಹೃದಯಶೂನ್ಯರು. ಅಬ್ಬಾ! ಎಂತಹ ಪ್ರೀತಿಯ ಅಣ್ಣ ನೀನೊಬ್ಬ!"

ಈ ಮೂರುದ್ದದ ತಂತಿಯ ಗಲಾಟೆಯಾದರೂ ಮತ್ತೇನಿಲ್ಲ. ತಂಗಿ– ಶಶಿಗೆ ಇಲ್ಲಿ ನಮ್ಮೊಡನಿರುವಾಗ ಏನೋ ಸ್ವಲ್ಪ ಜ್ವರ ಬಂದಂತಾಯಿತು. ಬೆಂಗಳೂರಲ್ಲಿರುವ ಅವಳ ಗಂಡನಿಗೆ ವರ್ತಮಾನ ಸಿಕ್ಕಿ ಅತ ಗಾಬರಿಯಾದ. "ಈಗ ಹೇಗಿದ್ದಾಳೆ! ನಾನು ಕೂಡಲೆ ಬರಬೇಕೆ?" ಎಂದು ತಂತಿಯನ್ನೂ ಬಿಟ್ಟ. ಆದರೆ ಶಶಿಯು ಮಾತ್ರ ತಕ್ಕ ಮಟ್ಟಿಗೆ ಸೌಖ್ಯವಾಗಿ ಇಂದು ಬೆಳಗಿನ ರೈಲಲ್ಲಿ, ಅತ್ತ ಹೋಗುವ ಜನರೊಡನೆ ಹೊರಟೇ ಹೋಗಿದ್ದಾಳೆ. ಇಂತಹ ಈ ಸಂದರ್ಭದಲ್ಲಿ ಮಧ್ಯಾಹ್ನದ ನಂತರ ಪ್ರತಿ "ವಯರ್" ಮಾಡಬಹುದೆಂದು ಹೇಳಿದ್ದರಿಂದ ದಯಾಶೂನ್ಯನಾದ ನನ್ನ ಮೇಲೆ ದಯಾರ್ದ್ರಹೃದಯಳಾದ ಅಕ್ಕನಿಗೆ ಕೋಪ, ಬೇಸರ. ಆದರೆ ಇದೊಂದು ಆಶ್ಚರ್ಯದ ಸಂಗತಿಯಲ್ಲ. ಯಾಕೆಂದರೆ ಲೋಕದಲ್ಲಿ ಮದುವೆಯಾಗದ ಮಾನವರೆಲ್ಲಾ, ಮದುವೆಯಾಗಿ– ಗಂಡ ಹೆಂಡಿರಾಗಿ ಬಾಳುವವರ, ಚಿಲ್ಲರೆ ವಿಷಯದ ಅನುಕೂಲತೆಗಳಿಗಾಗಿಯೂ ಹಲವು ತರದ ಸ್ವಾರ್ಥತ್ಯಾಗ, ನಿಷ್ಕಾಮ ಸೇವೆ ಇತ್ಯಾದಿಗಳನ್ನರ್ಪಿಸುವುದು–ಬೇಕಾದರೆ ಅತ್ಯುತ್ಸಾಹದಿಂದ– ಅದು ಕರ್ತವ್ಯವೆಂಬ ಭಾವನೆ ಪ್ರಚಾರದಲ್ಲಿರುವುದು ಎಷ್ಟೋ ಸಲ ನನ್ನ ಅನುಭವಕ್ಕೆ ಬಂದ ವಿಚಾರವೇ ಆಗಿತ್ತು.

ಆದ್ದರಿಂದ ನಾ ಹೆಚ್ಚೇನೂ ಆಕ್ಷೇಪಿಸಲಿಲ್ಲ. ಕುದಿಯುವ ರಣರಣ ಬಿಸಿಲಲ್ಲಿ, ಸುಡುತಿರುವ ಮಾರ್ಗದಲ್ಲಿ ನಾನು ಹೋಗದೆ ಗತ್ಯಂತರವೇ ಇಲ್ಲವಾಯಿತು.

× × ×

ಮನಶ್ಶಾಂತಿಯು ಲೇಶವೂ ಇಲ್ಲದೆ, ಕೊಡೆಯನ್ನು ಕೂಡ ಬಿಟ್ಟು ನಡೆದೇ ಬಿಟ್ಟೆ. ಅಂತು, ಕುದಿಯುತ್ತಾ, ಬುಸುಗುಟ್ಟುತ್ತಾ, ಬೆವರಿ ನೀರಾಗುತ್ತಾ, ಹೇಗಾದರೂ ಹೋಗಿ ಪೋಸ್ಟಾಫೀಸಿಗೆ ಮುಟ್ಟಿದೆ. ತಂತಿಯ ಫಾರ್ಮೊಂದನ್ನು ತೆಗೆದುಕೊಂಡು ನನ್ನ ಪೆನ್ನಿಗಾಗಿ ಕಿಸೆಗೆ ಕೈಹಾಕಿದೆ. ಆದರೆ ಕಿಸೆಯಲ್ಲಿ ಪೆನ್ನಿಲ್ಲ! ನನ್ನ ಮೈಯ ರಕ್ತವೆಲ್ಲಾ ತಕ್ಷಣ ತಣ್ಣಗಾಗಿ ಹೋಯಿತು! ಮನೆ ಬಿಟ್ಟು ಹೊರಡುವ ಮೊದಲು ಅದನ್ನೆತ್ತಿ ಹಿಡಿದುಕೊಂಡು ಬಂದುದು ಸರಿಯಾಗಿ ಜ್ಞಾಪಕದಲ್ಲಿದೆ. ಹಾಗಾದರೆ ಮತ್ತೆಲ್ಲಿ ಹೋಯಿತು? ಕಿಸೆಗಳನ್ನೆಲ್ಲ ಸರಿಯಾಗಿ ಜಪ್ತಿ ಮಾಡಿ ನೋಡಿದೆ. ಎಲ್ಲಿಯೂ ತೋರಲಿಲ್ಲ. ಹಾಗಾದರೆ ಕಿಸೆಗೆ ಯಾರಾದರೂ ಕೈಹಾಕಿ ತೆಗೆದಿರಬಹುದೇ? ಆದರೆ ಈ ಮಟಮಟ ಮಧ್ಯಾಹ್ನದಲ್ಲಿ ದಾರಿಯಲ್ಲಿ ಜನಜಂಗುಳಿಯೇನೂ ಹೆಚ್ಚಿಗಿದ್ದಿಲ್ಲ. ಆದ್ದರಿಂದ ಜೇಬಿನಿಂದ ಜಾರಿಸುವ ಸಂದರ್ಭವಿರಲಾರದು. ಬಹುಶಃ ಎಲ್ಲಿಯಾದರೂ ಬಿದ್ದಿರಬೇಕು.

—ಹೌದು— ನೆನಪಾಯಿತು. ಒಬ್ಬ ಕೂಲಿಯು ನನ್ನ ಬೆನ್ನ ಹಿಂದೆ ಬರುತ್ತಿದ್ದ. ಅವನೇ ಎಲ್ಲಿಯಾದರೂ ಹೆಕ್ಕಿರಬೇಕು. –ಹಾ– ಕಲ್ಲು ಎಡವಿ ದಾರಿಯಲ್ಲಿ ನಾನು ಮುಗ್ಗರಿಸಿದ್ದೂ ಹೌದು. ಆಗಲೇ ಅದು ಬಿದ್ದಿರಬೇಕು. ಹಿಂಬಾಲಿಸುತಿದ್ದ ಕೂಲಿಯು ಅದನ್ನು ಹೆಕ್ಕಿಯೂ ಇರಬೇಕು. ಏನು ಪುಣ್ಯಾತ್ಮನವ! ಅಂತು ನನ್ನ ಮುದ್ದು–ಪೆನ್ನು ಹೋದ ಹಾಗೆಯೇ ಸರಿ. ಆಃ. ಎಂತಹ. Waterman Pen. ಅದೂ ಈ ಸಮಯದಲ್ಲಿ! ಇನ್ನೆಲ್ಲಿಯಾದರೂ, ಪುನಃ ನಾನೊಂದು Waterman ಪಡೆಯಲಿದೆಯೋ? ಅಥವಾ ಪಡೆದರೂ. ಅ ಆ ರೀತಿಯ. ಅಷ್ಟು ಕುಸುಮಕೋಮಲ. ಪೆನ್ನು. ಸಿಗಲಿದೆಯೋ? ಎಂತಹ ದುರದುಷ್ಟ!

ಆ ಪೋಸ್ಟಾಫೀಸಿನ ಕಲ್ಲಗೋಡೆಗೆ ತಲೆಯನ್ನು ಜಜ್ಜಿಕೊಳ್ಳಲೇ ಎಂದೂ ತೋರಿತು. ಆದರೆ ಹಾಗೇಕೆ ನಾನು ಮಾಡಿಕೊಳ್ಳಲಿಲ್ಲವೆಂದು ನನಗೇ ಆಶ್ಚರ್ಯವಾಗುತ್ತದೆ. ಅಂತೂ ಹಾಗೂ ಹೀಗೂ ಯಾಂತ್ರಿಕ ಮನುಷ್ಯನಂತೆ ಯಾರಿಂದಲೋ ಒಂದು ಪೆನ್ನು ಕಡ ಪಡೆದು, ತಂತಿಗುತ್ತರ ಬರೆದು, ಅದರ ಉತ್ತರಕ್ರಿಯೆ ಮುಗಿಸಿ, ಹಣಕೊಟ್ಟು ಚಿಲ್ಲರೆ ಪಡೆದು, ಮನೆಯತ್ತ ಹೊರಟೆ. ಹಿಂದೆ ಬರುತ್ತಾ ರಸ್ತೆಯಲ್ಲಿ ಅತ್ತ, ಇತ್ತ ದೃಷ್ಟಿ ಹಾಕುತ್ತಾ ಬಂದೆ. ಎಲ್ಲಿಯಾದರೂ . ಅಕಸ್ಮಾತ್ . ಸಿಕ್ಕಿಬಿಟ್ಟರೆ! ಆಶೆಯಲ್ಲವೇ ? ಎಲ್ಲಿ ಎಡವಿ ಬಿದ್ದಿದ್ದೆನೋ ಅಲ್ಲಿ ಇನ್ನಷ್ಟು ಪರಾಮರ್ಶಿಸಿ ನೋಡಿದೆ. ಅಷ್ಟರಲ್ಲಿ ಬೀಡಿ ಎಳೆಯುತಿದ್ದ ಹುಡುಗನೊಬ್ಬನು ನನ್ನ ಹತ್ತಿರ ಬಂದು 'ಹಣ ಬೀಸಾಡಿ ಹೋಗಿದೆಯೆ?' ಎಂದು ಕೇಳಿದ. ತಲೆಯಲ್ಲಾಡಿಸಿ ಅಲ್ಲಿಂದ ಮುಂದೆ ಬಂದೆ.

ದಾರಿಯಲ್ಲಿ ಮುಂದುವರಿಯುತ್ತಾ, ನಾನು ಆ ಪೆನ್ನನ್ನು ತಾರದೇ ಇದ್ದಿರಬಹುದೆಂದು ಸಮಾಧಾನ ಮಾಡಿಕೊಳ್ಳಲು ಪ್ರಯತ್ನಿಸಿದೆ. ಆದರೆ ಅದು ನಿಷ್ಪ್ರಯೋಜಕವಾಗಿತ್ತು. ಹೊರಡುವ ಮೊದಲು ಡ್ರಾವರಿಂದದನ್ನು ತೆಗೆದು ಜೇಬಿನಲ್ಲಿಟ್ಟುಕೊಂಡು, ಅಕ್ಕನಿಂದ ಹಣ ಪಡಕೊಂಡ ಚಿತ್ರವು ಮನಸ್ಸಿನಲ್ಲಿ ಅಚ್ಚಳಿಯದೆ ಇದೆ. ತಂತಿ ಬಿಡಲು ಹೊರಟಾಗ ಪೆನ್ನು ಬಿಟ್ಟು ಹೊರಡುವ ಸಂದರ್ಭವೇ ಇದ್ದಿಲ್ಲ. ಅಂತೂ ಇಂದಿನ, ಗಂಡಾಂತರ ಪರಂಪರೆಗಳಿಗೆ ಅಂದದ ಅವಸಾನವಾದಂತಾಯಿತು. ಈಗೆಲ್ಲಿಯಾದರೂ ಆ ಬರಗಾಲ ಪೀಡಿತರು ಬರುತಿದ್ದರೆ ಅವರ ತಲೆಬುರುಡೆ ಒಡೆಯುತ್ತಿದ್ದೆ.

ಹೇಗೂ ಕಳ್ಳನಂತೆ ಕೋಣೆಯನ್ನು ಪ್ರವೇಶಿಸಿದೆ. ಸತ್ತ ಮಗನ ಹಾಸಿಗೆಯ ಹತ್ತಿರ ಬಂದು ಪುನಃ ಜೀವವಿರಬಹುದೇ? ಎಂದು ತಾಯಿಯು ಪರಾಮರ್ಶಿಸುವಂತೆ ಮೆಲ್ಲಗೆ ಡ್ರಾವರಿನ ಬಾಗಿಲು ತೆರೆದೆ. ಆ ಪೆನ್ನನ್ನಿಡುವ ಸುಯೋಗ್ಯ, ಶ್ಯಾಮಸುಂದರ ಪೆಟ್ಟಿಗೆಯನ್ನು ಕಂಡು, ಒಂದು ದೀರ್ಘ ನಿಟ್ಟುಸಿರು ಬಿಟ್ಟೆ. ಇಂತಹ ಮನೋಹರ ಕವಚದಲ್ಲಿ ಇಂದಿನ ತನಕ ಆನಂದದಿಂದಿದ್ದ ಆ ನನ್ನ ಪೆನ್ನು ಈಗ ಆ ಭಿಕಾರಿಯ ಕಿಸೆಯಲ್ಲಿ ಎಷ್ಟು ದುಃಖಿಸುತಿರಲಿಕ್ಕಿಲ್ಲ. ಅಂತು ನಾನು ಆ ಖಾಲಿ ಪೆಟ್ಟಿಗೆಯನ್ನು ತೆರೆಯಲಾರಂಭಿಸಿದೆ. ಆ– ಏನು ಹೇಳಲಿ. ನನ್ನ ಪೆನ್ನು. ಆನಂದ ನಿದ್ರೆಯಲ್ಲಿ ಮಗ್ನವಾಗಿತ್ತು. ದೊಡ್ಡದೊಂದು ಲಾಗ ಹೊಡೆದೆ. ಅಕ್ಕ ಬಂದು "ವಯರ್ ಕಳುಹಿಸಿದೆಯೋ ? ಸುರೇಶನು ಪಾಪ, ಎಷ್ಟು ಗಾಬರಿಯಲ್ಲಿದ್ದಾನೋ ಏನೋ! ಉತ್ತರ ಸಿಗುವ ವರೆಗೆ ಏನೆಲ್ಲಾ ಎಣಿಸುವನೋ– ನಿನಗದೆಲ್ಲಾ ಅರ್ಥವಾಗದು. ಆಗಲಿ. ಹೋಗು ಸ್ನಾನ ಮಾಡು. ಊಟಕ್ಕಾಗಿ ನಿನ್ನನ್ನು ಕಾಯುತಿದ್ದೇವೆ" ಎಂದೆಲ್ಲಾ ಹೇಳಿದಳು.

"ನೋಡು–ನೋಡು– ಆ ಆಕಾಶ ಎಷ್ಟು ನೀಲವಾಗಿದೆ. ವಾತಾವರಣವು ಎಷ್ಟು ಶಾಂತವಾಗಿದೆ. ನೋಡಕ್ಕಾ"— ಎಂದೆ.

"ಅದೆಲ್ಲಾ ಊಟವಾದ ಮೇಲೆ ನೋಡುತ್ತೇನೆ. ಹಸಿವೆಯಿಂದ ಹೊಟ್ಟೆಯ ಹುಳವೆಲ್ಲಾ ಸತ್ತುಹೋಯಿತು. ಹೋಗು ಸ್ನಾನಮಾಡು" ಎಂದಳು. ಸ್ನಾನದ ಪಂಚೆ ತೆಗೆದು ಬಚ್ಚಲಮನೆಗೆ ಹೋಗುತ್ತಾ ದಾರಿಯಲ್ಲಿ ಅಮ್ಮನನ್ನು ನೋಡಿ "ಅಮ್ಮಾ! ನಮ್ಮ ಮಂಗಳೂರಿಗೆ "ಲಾಹೋರ್" ಸಿನೆಮಾ ಬಂದಿದೆಯಮ್ಮಾ! ಬಹಳ ಚನ್ನಾಗಿದೆಯಂತಮ್ಮಾ ಸಾಯಂಕಾಲ ಹೋಗೋಣವೇ ?" ಎಂದು ಕೇಳಿದೆ.

ಅದಕ್ಕವಳು 'ಲಾಹೋರೋ. ಕರಾಚಿಯೋ– ಯಾಕಪ್ಪ ಇವೆಲ್ಲಾ? ಎಲ್ಲಿಯಾದರೂ– ಸತ್ಯಹರಿಶ್ಚಂದ್ರವೋ– ಸೀತಾ ಕಲ್ಯಾಣವೋ– ಮುಂತಾದ ಪೌರಾಣಿಕ ಕಥೆಗಳನ್ನು ಕಂಡರೆ ಪುಣ್ಯವಾದರೂ ಬರುತ್ತೆ. ಇವೆಲ್ಲಾ ದುಡ್ಡು ದಂಡಕ್ಕೆ. ಆಗಲಿ ಸ್ನಾನ ಮಾಡು ಬೇಗ. ಅನ್ನ ತಣ್ಣಗಾಯಿತು," ಎಂದಳು.

"ಹಂ" ಎನ್ನುತ್ತಾ ಹೋಗಿ ಒಂದೊಂದೇ ತಂಬಿಗೆ ನೀರು ಎರೆದುಕೊಳ್ಳಲಾರಂಭಿಸಿದೆ. ಮೀಯುವಾಗ "ಮೂರು ರೂಪಾಯಿಯ ಟಿಕೇಟೊಂದನ್ನಾದರೂ ಆ ಮಾನಾರ್ಹ ಮಹಾಶಯರಿಂದ ಕೊಂಡುಕೊಳ್ಳಬಹುದಿತ್ತು. ನಾನಲ್ಲವಾದರೆ, ಅಕ್ಕ, ಅಮ್ಮ. ಯಾರಾದರೂ ಹೋಗುತ್ತಿದ್ದರು," ಎಂದೆಲ್ಲಾ ಯೋಚಿಸುತ್ತಾ ನೀಲಿಮಾಕಾಶದತ್ತ ನೋಡಲಾರಂಭಿಸಿದೆ.

ಸಮಸ್ತ ಭಾರತ

ಮುಂಬಯಿ

ಕೊಲ್ಹಾಪುರ ಸಂಸ್ಥಾನ ಸರಕಾರದವರು ಬೇಟೆಯ ವಿಹಾರಕ್ಕೆಂದು ಕಾಯ್ದಿಟ್ಟಿದ್ದ ೧೦ ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಂಡು ಆಹಾರ ಧಾನ್ಯ ಬಿತ್ತುವದಕ್ಕಾಗಿ ಅದನ್ನು ಒಕ್ಕಲಿಗರಿಗೆ ಕೊಡಲಾಗುವದೆಂದು ಮುಂಬಯಿ ಸರಕಾರದ ಒಕ್ಕಲತನದ ಮಂತ್ರಿ ಶ್ರೀ. ಪಾಟೀಲ ಮಲ್ಲನಗೌಡರು ಸಾರಿದರು.

ಕೊಲ್ಹಾಪುರ ರಾಧಾನಗರಿ ಯೋಜನೆಯು ೧೯೫೧ರಲ್ಲಿ ಪೂರ್ತಿಗೊಂಡು ೧೯ ಸಾವಿರ ಎಕರೆ ಭೂಮಿಗೆ ನೀರುಣಿಸುವದಲ್ಲದೆ ಜಿಲ್ಹೆಯಲ್ಲಿ ದೀಪಕ್ಕಾಗಿ ಮತ್ತು ಚಿಕ್ಕ ಉದ್ಯೋಗಗಳಿಗಾಗಿ ೫೦೦೦ ಕಿ. ವ್ಯಾ. ವಿದ್ಯುತ್ತನ್ನು ಪೂರೈಸುವದು. ಅಲ್ಲದೆ ಕೊಲ್ಹಾಪುರ ನಗರದ ೯೨ ಸಾವಿರ ಜನರಿಗೆ ನೀರನ್ನು ಒದಗಿಸಲಾಗುವದು.

ಹಿಂದೀ ಹಡಗಗಳು ಎರಡು ವರುಷಗಳಿಗಿಂತ ಕಡಿಮೆ ಅವಧಿಯಲ್ಲಿ ೫೦ ಲಕ್ಷ ಡಾಲರಗಳಷ್ಟು ಲಾಭವನ್ನು ಹಿಂದುಸ್ತಾನ ಸರಕಾರಕ್ಕೆ ಮಾಡಿಕೊಟ್ಟಿರುವದಾಗಿ ಸಿಂಧೆ ಕಂಪನಿಯ ಮ್ಯಾನೇಜರರು ಹೇಳಿದರು. ಹಿಂದೀ ವ್ಯಾಪಾರ ನೌಕಾದಲವನ್ನು ಹೆಚ್ಚು ಬಲಿಷ್ಠಮಾಡಿದರೆ ಇನ್ನೂ ಹೆಚ್ಚು ಡಾಲರಗಳನ್ನು ಉಳಿಸಬಹುದೆಂದು ಅವರು ಅಭಿಪ್ರಾಯಪಟ್ಟರು.

ಮುಂಬಯಿ ಸರಕಾರದ ಎಸ್. ಎಸ್. ಸಿ. ಬೋರ್ಡಿನವರು ಇದೇ ಮಾರ್ಚದಲ್ಲಿ ನಡೆಸಿದ ಎಸ್. ಎಸ್. ಸಿ. ಪರೀಕ್ಷೆಯ ಪರಿಣಾಮವು ಬರುವ ಜೂನ ೬ನೇ ತಾರೀಕು ಬೆಳಗಿನ ಜಾವದಲ್ಲಿ ಪ್ರಸಿದ್ಧವಾಗುವದೆಂದು ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ರಸ್ತೆಗಳನ್ನು ತನ್ನಷ್ಟಕ್ಕೆ ತಾನೇ ಸ್ವಚ್ಛ ಮಾಡುವ ಹೊಸ ಮಾದರಿಯ ಯಂತ್ರವೊಂದನ್ನು ಮುಂಬಯಿ ನಗರಸಭೆಯವರು ಒಂದೆರಡು ದಿನಗಳಲ್ಲಿಯೇ ಬಳಕೆಯಲ್ಲಿ ತರುವರು. ಈ ಯಂತ್ರಗಳ ಮೂಲಕ ನಗರದ ಸ್ವಚ್ಛತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಒಂದು ಕೋಟಿ ರೂಪಾಯಿ ಯೋಜನೆ ಮಾಡಲಾಗಿದೆ. ನಗರದಲ್ಲಿ ಕಸಗುಡಿಸುವವರ ಸಂಪು ಹಾಗೆಯೇ ನಡೆದಿದೆ.

ರೂಪಾಯಿಯಿಂದ ಕಾಲಾಣೆ ವರೆಗಿನ ಸ್ವತಂತ್ರ ಭಾರತದ ನಾಣ್ಯಗಳ ನಮೂನೆಗಳ ಬಗ್ಗೆ ಕೊನೆಯ ನಿರ್ಣಯ ಕೈಕೊಳ್ಳಲಾಗುವದು.

ಮುಂಬಯಿ ಸರಕಾರದವರು ಸುರತ ಜಿಲ್ಲೆಯ ಕರಾವಳಿಗುಂಟ ಉಪ್ಪನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವದಕ್ಕಾಗಿ ಪರಿಶೀಲನೆ ನಡೆಸಿದ್ದಾರೆ. ಅಲ್ಲಿ ೭೦೮೦೫ ಎಕರೆಯಷ್ಟು ಕ್ಷಾರಭೂಮಿಯಿದ್ದು ಅದು ಸಾಗುವಳಿಗೆ ನಿರುಪಯುಕ್ತವಾದ್ದರಿಂದ ಖಾಸಗಿ ಸಂಸ್ಥೆಯ ಮುಖಾಂತರವಾಗಲಿ ಇಲ್ಲವೆ ಸಹಕಾರ ತಳಹದಿಯ ಮೇಲಾಗಲಿ ಉಪ್ಪು ಮಾಡುವ ಕಾರ್ಯ ಕೈಕೊಳ್ಳಲಾಗುವದು.

ಮುಂಬಯಿ ವಖಾರ ಕಾಯದೆಯು ಲೀನ ಮತ್ತು ಸಮೀಕರಣ ಹೊಂದಿದ ಸಂಸ್ಥಾನಗಳನ್ನೊಳಗೊಂಡು ಇಡೀ ಮುಂಬಯಿ ಪ್ರಾಂತದಲ್ಲಿ ಜೂನ ೧ ರಿಂದ ಜಾರಿಯಲ್ಲಿ ಬರುವದು- ಖಾಸಗಿ ವಖಾರಗಳ ಸ್ಥಾಪನೆಗೆ ಉತ್ತೇಜನ ಕೊಡುವದು ಈ ಕಾಯದೆಯ ಉದ್ದೇಶವಾಗಿದೆ. ಬಡೋದೆ ಸಂಸ್ಥಾನಕ್ಕೆ ಮಾತ್ರ ಈ ಕಾಯಿದೆ ಅನ್ವಯಿಸುವದಿಲ್ಲ.

ಮಧ್ಯಪ್ರಾಂತ

ಆಚೆ ರವಿವಾರ ೧೫ ನೇ ತಾರೀಖು ಲೆ. ಶ್ರೀನಿವಾಸ ಕುಲಕರ್ಣಿಯವರಲ್ಲಿ ಜಬಲಪೂರ ಕರ್ನಾಟಕ ಸಂಘದ ಆರನೇ ವಾರ್ಷಿಕೋತ್ಸವವು ಶ್ರೀಮತಿ ಬಿ. ಎನ್. ಕಮಲಮ್ಮ ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿತು. ನಾಡಗೀತ ಕ್ಯಾ. ನಾಗರಾಜರಾಯರ ಸ್ವಾಗತ ಭಾಷಣ ಅಧ್ಯಕ್ಷರ ಭಾಷಣದ ನಂತರ ಕಾರ್ಯದರ್ಶಿಗಳು ವರದಿಯನ್ನೋದಿದರು. ನೃತ್ಯ ಏಕಾಂಕ ನಾಟಕಗಳೊಂದಿಗೆ ಉತ್ಸವ ಕೊನೆಗೊಂಡಿತು.

ಆಹಾರ ಪದಾರ್ಥಗಳಲ್ಲಿ ಜನರ ಆರೋಗ್ಯಕ್ಕೆ ಬಾಧೆ ಬರುವಂಥ ಬಣ್ಣವನ್ನಾಗಲಿ ಪುಡಿಯನ್ನಾಗಲಿ ಕೂಡಿಸುವದು ಮತ್ತು ಅದರ ಮಾರಾಟ ಮಾಡುವದು ಅಪರಾಧವೆಂದು ಮಧ್ಯಪ್ರಾಂತ ಸರಕಾರದವರು ಅಪ್ಪಣೆ ಹೊರಡಿಸಿದ್ದಾರೆ. ಮೊದಲನೆ ಅಪರಾಧಕ್ಕೆ ೫೦೦ ರೂ. ದಂಡ ಎರಡನೆ ಅಪರಾಧಕ್ಕೆ ೧೦೦೦ ರೂ. ದಂಡ ವಿಧಿಸಲಾಗುವದು.

ಹೊಸದಿಲ್ಲಿ

ನ್ಯೂಜಪ್ರಿಂಟ ಸಲಹೆ ಸಮಿತಿಯ ಪುರಸ್ಕಾರವನ್ನನುಲಕ್ಷಿಸಿ ಸರಕಾರದವರು ನ್ಯೂಜಪ್ರಿಂಟ ನಿಯಂತ್ರಣಾಜ್ಞೆಯನ್ನು ಇದೇ ಜೂನ ಒಂದರಿಂದ ರದ್ದುಗೊಳಿಸುವ ಸಂಭವವಿದೆಯೆಂದು ತಿಳಿಯುತ್ತದೆ.

ಮೇ ೩೦ ಕ್ಕೆ ಕಾನಡಾದಲ್ಲಿ ಸೇರಲಿರುವ ಅಂತರ್‌ರಾಷ್ಟ್ರೀಯ ಒಕ್ಕಲತನದ ಉತ್ಪಾದಕರ ಮಹಾಮಂಡಲದ ೪ ನೇ ಪರಿಷತ್ತಿಗೆ ಪ್ರೊ. ಎನ್. ಜಿ. ರಂಗಾ ಇವರು ಹಿಂದೀ ಪ್ರತಿನಿಧಿಗಳ ಧುರೀಣರಾಗಿ ಹೋಗಿರುವರು. ಅವರು ಲಂಡನದಲ್ಲಿ ಉಪಮಂತ್ರಿ ಪ್ಯಾಟ್ರಿಕ್ ಗಾರ್ಡನ್ ವಾಕರರನ್ನೂ ಕೂಲಿಕಾರ ಧುರೀಣರನ್ನೂ ಭೆಟ್ಟಿಯಾಗಿ ಜೂನ ೨೦ ರ ಸುಮಾರಿಗೆ ಹಿಂತಿರುಗುವರು.

ಘಟನಾ ಸಮಿತಿಯಲ್ಲಿ ಕಾಶ್ಮೀರಕ್ಕೆ ಕಾದಿಟ್ಟಿರುವ ಎಲ್ಲ ಸ್ಥಳಗಳಿಗೆ ಕಾಶ್ಮೀರದ ಮಹಾರಾಜರ ತಮ್ಮ ಮುಖ್ಯ ಮಂತ್ರಿಗಳ ಸಲಹೆಯ ಮೇರೆಗೆ ಸದಸ್ಯರನ್ನಾರಿಸಲು ಅವರಿಗೆ ಅಧಿಕಾರ ಕೊಡಬಹುದೆಂದು ನಿರೀಕ್ಷಿಸಲಾಗಿದೆ. ಇತರ ಸಂಸ್ಥಾನಗಳಿಗಾಗಿ ಕಾದಿಟ್ಟಿರುವ ಸ್ಥಳಗಳಲ್ಲಿ ಕನಿಷ್ಠ ಅರ್ಧದಷ್ಟು ಸ್ಥಳಗಳನ್ನು ಚುನಾವಣೆಯ ಮೂಲಕ ಮತ್ತು ಇನ್ನುಳಿದ ಸ್ಥಳಗಳನ್ನು ಅರಸರ ಆಯ್ಕೆಯ ಮೂಲಕ ತುಂಬಬೇಕೆಂದಿದೆ.

ಗೋವೆಯಲ್ಲಿ ಹಿಂದುಸ್ತಾನದ ವಕೀಲರಾಗಿದ್ದ ಪಿ. ಎನ್. ಡ್ರಾಯವರ ಇವರನ್ನು ಹಿಂದಕ್ಕೆ ಕರೆಯಿಸಿಕೊಂಡು ಅಶೋಕ ಮೆಹತಾ ಇವರನ್ನು ಆ ಸ್ಥಳಕ್ಕೆ ನೇಮಿಸಿರುವರು, ಇವರು ಸಿ. ಎನ್. ಮೆಹತಾ ಇವರ ಮಕ್ಕಳಾಗಿದ್ದು ಶ್ರೀ ವಿಜಯಲಕ್ಷ್ಮೀ ಪಂಡಿತರ ಅಳಿಯಂದಿರು.

ಮೆರವಣಿಗೆ ಮತ್ತು ಸಭೆಗಳ ಪ್ರತಿಬಂಧ ಕಾಜ್ಞೆಯನ್ನು ಮುರಿದುದಕ್ಕೆ ಸಮಾಜವಾದೀ ಪಕ್ಷದ ಧುರೀಣರಾದ ಡಾ. ರಾಮಮನೋಹರ ಲೋಹಿಯಾ ಇವರನ್ನು ದಿಲ್ಲಿಯಲ್ಲಿ ಸೆರೆಹಿಡಿಯಲಾಗಿದೆ. ಅಲ್ಲದೆ ಸಮಾಜವಾದೀ ಪಕ್ಷದ ತಾತ್ಪೂರ್ತಿಕ ಕಾರ್ಯದರ್ಶಿ ಪ್ರೇಮಭಾಸಿನ ಮತ್ತು ಇನ್ನಿತರ ೪೭ ಸ್ವಯಂಸೇವಕರನ್ನು ಬಂಧಿಸಲಾಗಿದೆ.

ಮಹಾತ್ಮಾ ಗಾಂಧಿ ಕೊಲೆ ಖಟ್ಲೆಯ ಅಪೀಲಿನಲ್ಲಿ ಆರೋಪಿಪರ ವಕೀಲರ ವಾದವು ಕೊನೆಗಂಡಿದ್ದು ಸರಕಾರೀ ವಕೀಲರಾದ ಶ್ರೀ ದಫ್ತರೀಯವರು ತಮ್ಮ ವಾದವನ್ನು ಪ್ರಾರಂಭಿಸಿದ್ದಾರೆ. ಅವರು ಆರೋಪಿ ವಕೀಲರ ವಾದವನ್ನೆಲ್ಲ ಖಂಡಿಸುತಿರುವರು.

ಮದ್ರಾಸ

ಮದ್ರಾಸ ಶಾಸನಸಭೆಯ ಕೆಲ ಸದಸ್ಯರು ಮಂತ್ರಿಮಂಡಲದ ಮೇಲೆ ಹೊರಿಸಿದ ಆರೋಪಗಳ ವಿಚಾರಣೆ ಮಾಡಲು ಅಖಿಲ ಭಾರತ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿ ಶ್ರೀ ಶಂಕರರಾವ ದೇವ ಇವರನ್ನು ನೇಮಿಸಲಾಗಿದೆಯೆಂದು ಮುಖ್ಯಮಂತ್ರಿ ಕುಮಾರಸ್ವಾಮಿರಾಜಾ ಇವರು ಹೇಳಿದರು.

ಎಂ. ಎಸ್. ಎಂ. ಮತ್ತು ಸೌಥ ಇಂಡಿಯನ್ ರೇಲ್ವೆಗಳಲ್ಲಿಯ ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ ವಿಚಾರಣೆ ನಡೆಸಲು ಕೇಂದ್ರ ಸರಕಾರದ ಸಾರಿಗೆ ಶಾಖೆಯವರು ಮೂವರ ಒಂದು ಸಮಿತಿಯನ್ನು ನೇಮಿಸಿದ್ದಾರೆ. ನಿಲ್ದಾಣಗಳ ಪುನಾರಚನೆಯ ಬಗ್ಗೆಯೂ ಈ ಸಮಿತಿಯವರು ಸೂಚನೆಗಳನ್ನು ಕೊಡುವರು.

ಮಡಿಕೇರಿ ಸರಕಾರೀ ಕಾಲೇಜು ಸೆಕೆಂಡ ಗ್ರೇಡು, ಮಹಾತ್ಮಾಗಾಂಧೀ ಕಾಲೇಜು ಉಡುಪಿ ಸೆಕೆಂಡಗ್ರೇಡು ಮತ್ತು ತ್ಯಾಗರಾಜ ಕಾಲೇಜು ಮಧುರಾ ಫಸ್ಟ್‌ಗ್ರೇಡು ಈ ಮೂರು ಕಾಲೇಜುಗಳಿಗೆ ಮದ್ರಾಸ ವಿಶ್ವವಿದ್ಯಾಲಯದವರು ಮನ್ನಣೆ ಕೊಟ್ಟಿರುವರೆಂದು ತಿಳಿಯುತ್ತದೆ.

ದ್ರವಿಡಸ್ಥಾನದ ಪುರಸ್ಕರ್ತರಾಗಿರುವ ಶ್ರೀ ಈ ವಿ. ರಾಮಸ್ವಾಮಿ ನಾಯಕರರು ದ್ರವಿಡಸ್ಥಾನದ ಪ್ರಚಾರಕ್ಕಾಗಿ ಇಷ್ಟರಲ್ಲಿಯೇ ದಕ್ಷಿಣಹಿಂದುಸ್ತಾನದಲ್ಲೆಲ್ಲ ಸಂಚಾರ ಪ್ರಾರಂಭಿಸಲಿರುವರು. ತಮಿಲನಾಡ ಕಾಂಗ್ರೆಸ್ಸು ಜನತೆಗೆ ಸರಿಯಾದ ದಾರಿ ತೋರುತಿಲ್ಲ ಮದರಾಸ ನಗರವು ಅಂಧ್ರರದಿದ್ದು ಈ ಭಾಷಾವಾರ ಪ್ರಾಂತರಚನೆಗೆ ನಾನು ವಿರೋಧಿಯಾಗಿದ್ದೇನೆಂದು ಮುಂತಾಗಿ ನಾಯಕರರು ಅಭಿಪ್ರಾಯಪಡುತಿರುವರು.

ಹೈದರಾಬಾದ

ಸುಕುಪುರೆ ಜಾಗೀರಿಯನ್ನು ರಾಜಾ ಕೃಷ್ಣಪ್ಪನಾಯಕ ಇವರಿಗೆ ತಿರುಗಿ ಕೊಡಬೇಕೆಂದು ಸರಕಾರದವರು ಅಪ್ಪಣೆ ವಿಧಿಸಿರುವರು. ಇವರು ಕಾಂಗ್ರೆಸ ಚಳವಳಿಗೆ ಸಹಾನುಭೂತಿ ತೋರಿಸುತಿದ್ದರೆಂದು ಲಾಯಕಅಲ್ಲಿ ಮಂತ್ರಿಮಂಡಲದವರು ಇವರ ಜಾಗೀರಿಯನ್ನು ಕಸಿದುಕೊಂಡಿದ್ದರು. ಸರಕಾರ ವಶದಲ್ಲಿದ್ದ ಅವಧಿಯ ಹುಟ್ಟ ಹಣವನ್ನು ವೆಚ್ಚ ಕಳೆದು ತಿರುಗಿ ಕೊಡಬೇಕೆಂದೂ ಸರಕಾರದವರು ವಿಧಿಸಿರುವರು.

ಹೈದರಾಬಾದ ಸಂಸ್ಥಾನವನ್ನು ಭಾಷಾನ್ವಯವಾಗಿ ವಿಭಜಿಸಿ ನೆರೆಹೊರೆಯ ಪ್ರಾಂತಗಳಲ್ಲಿ ಹಂಚಿಬಿಡಬೇಕು ಅಂದರೆ ಹೈದರಾಬಾದದಲ್ಲಿ ತಲೆಯೆತ್ತುತಿರುವ ಹಲವಾರು ಸಮಸ್ಯೆಗಳ ಪರಿಹಾರವಾಗುವದೆಂದು ಸಮಾಜವಾದೀಪಕ್ಷದ ಧುರೀಣರಾದ ಡಾ. ಪುರುಷೋತ್ತಮ ತ್ರಿಕಮದಾಸರು ಹೈದರಾಬಾದದಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು. ಇದರಿಂದ ತಮಗೆ ಸ್ವಾಯತ್ತತೆ ದೊರೆಯಲಿಲ್ಲೆಂಬ ಪ್ರಜೆಗಳ ದೂರೂ ಮಾಯವಾಗುವದೆಂದು ಅವರ ವಾದ.

ಹೈದರಾಬಾದ ಬೋಲಾರಾಮ ವಿಮಾನ ನಿಲ್ದಾಣದಿಂದ ಎರಡು ಮೈಲು ಅಂತರದ ಮೇಲೆ ಇರುವ ಕಮರಪೇಟದಲ್ಲಿ ಲಾಯಸೆನ್ಸವಿಲ್ಲದೆ ಕೆಲಸ ನಡೆಸುತಿದ್ದ ಭತ್ತದ ಗಿರಣಿಯೊಂದನ್ನು ಝಡತಿ ಮಾಡಲಾಗಿ ಅಲ್ಲಿಬಚ್ಚಿಟ್ಟ ಒಂದು ಸಾವಿರ ಪಲ್ಲಅಕ್ಕಿಯನ್ನು ಅ.ಸಿ. ಅಡ್ಮಿನಿಸ್ಟ್ರೇಟರ ರಾಮಪಿಂಗರು ಜಪ್ತಮಾಡಿದರು. ಈ ಗಿರಣಿಯನ್ನು ಕೂಡಲೆ ಮುಚ್ಚಲು ವಿಧಿಸಿ ಒಡೆಯರ ಮೇಲೆ ಖಟ್ಲೆ ಹಾಕಲು ಪೋಲೀಸರಿಗೆ ಅಜ್ಞಾಪಿಸಿದ್ದಾರೆ.

ಅದಿಲಾಬಾದವು ಮಹಾರಾಷ್ಟ್ರಕ್ಕೆ ಸೇರಿದ್ದು ಅದು ಅಂಧ್ರರದಾಗಲಾರದು ಎಂದು ಅಲ್ಲಿಯ ಜಿಲ್ಹಾ ಕಾಂಗ್ರೆಸ ಸಮಿತಿಯವರು ಇತ್ತೀಚೆ ಒಂದು ಗೊತ್ತುವಳಿ ಸ್ವೀಕರಿಸಿದ್ದರು. ಆದರೆ ಮಹಾರಾಷ್ಟ್ರೀಯ ಕಾಂಗ್ರೆಸ್ಸಿಗನೊಬ್ಬನು ಅದನ್ನು ಅಲಕ್ಷಿಸಿ ಅದಿಲಾಬಾದವು ಮಹಾರಾಷ್ಟ್ರೀಯರದೆಂದು ವಾದಿಸಹತ್ತಿದ್ದರಿಂದ ಈ ಬಗ್ಗೆ ಅಂಧ್ರಮಹಾರಾಷ್ಟ್ರೀಯರಲ್ಲಿ ದೊಡ್ಡ ತಿಕ್ಕಾಟವೇಳುವ ಸಂಭವವಿದೆ.

ಹೈದರಾಬಾದ ಕಾಂಗ್ರೆಸ ಅಧ್ಯಕ್ಷ ಸ್ವಾಮೀ ರಮಾನಂದತೀರ್ಥರು ಈ ವರುಷ ಕಾಂಗ್ರೆಸ ಅಧ್ಯಕ್ಷಪದದ ಆಯ್ಕೆಗೆ ನಿಲ್ಲದೆ ಅಂಧ್ರ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಜಮಾಲಪುರಂ ಕೇಶವರಾಯರಿಗೆ ಅದನ್ನು ಬಿಟ್ಟುಕೊಡುವರೆಂದು ತಿಳಿಯುತ್ತದೆ.

ಪೂರ್ವ ಪಂಜಾಬ

ಆಡಳಿತೆಯನ್ನೂ ಸಾರ್ವಜನಿಕ ಜೀವನವನ್ನೂ ಸಮಾಜ ವಿಘಾತಕ ಅನಿಷ್ಟ ಪದ್ಧತಿಗಳಿಂದ ಮುಕ್ತ ಮಾಡಲು ತಮಗೆ ಮೂರು ತಿಂಗಳು ಅವಧಿ ಕೊಡಬೇಕೆಂದೂ ನಡುವೆ ಕೈಹಾಕಬಾರದೆಂದೂ ಪೂರ್ವ ಪಂಜಾಬ ಸರಕಾರದ ಮುಖ್ಯ ಮಂತ್ರಿ ಶ್ರೀ ಭೀಮಸೇನ ಸಾಚಾರರು ಅಮೃತಸರದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಹೇಳಿದರು. ಲಂಚಗುಳಿ ಮತ್ತು ಜಾತ್ಯಂಧ ಅಧಿಕಾರಿಗಳನ್ನು ಹುಡುಕಿ ತೆಗೆದು ಅವರನ್ನು ಶಿಕ್ಷಿಸುವದಾಗಿಯೂ ಬೇರೆ ಯಾರೂ ಅವರ ಮೇಲೆ ಟೀಕೆ ಮಾಡಬಾರದೆಂದೂ ಅವರು ಕೇಳಿಕೊಂಡಿದ್ದಾರೆ.

ಕಲೆ ಮತ್ತು ವಿಮರ್ಶೆ

(೮ ನೇ ಪುಟದಿಂದ)

ಕಳೆದು ಹೋಗುತ್ತದೆ. ಹಿಂದೆ ಒಂದು ಅತಿರೇಕವಿದ್ದಿದ್ದರೆ ಇಂದು ಮತ್ತೊಂದು ಅತಿರೇಕದತ್ತ ಲೋಕದ ಬುದ್ಧಿ ಹರಿಯುತ್ತಿದೆ. ಅತಿನಿಯಂತ್ರಣದಲ್ಲಿ ಕಲೆಗಾರಿಕೆ ಕಮರಿ ಹೋಗಬಹುದಾದರೆ ಅನಿಯಂತ್ರಣದಲ್ಲಿ ಕಲೆಗಾರಿಕೆ ಜೋಲಿಗಾರಿಕೆಯಾಗಿ ಪರಿಣಮಿಸಿ ಬಿಡಬಹುದು, ಅಭಿರುಚಿ ಅಧೋರುಚಿಯಾಗಿ ಹೋಗಬಹುದು. [illegible] ಮಿಗಿಲಾದುದು ಇರುವುದು ಉತ್ತಮವೆಂಬುದಕ್ಕೆ ಜೋಲಿಗಿಂತ ಏನೂ ಇಲ್ಲದಿರುವುದೇ ಲೇಸೆಂದು ಉತ್ತರ ಕೊಡಬೇಕಾಗುತ್ತದೆ. [illegible] ಅಥವಾ ಒಂದು ಯೋಗ್ಯ ಕಲಾಕೃತಿಯಿರುವುದು ಹಲವಾರು ಅಯೋಗ್ಯ ಕಲಾಕೃತಿಗಳಿರುವ ಸ್ಥಿತಿಗಿಂತ ಉತ್ತಮ.

ಇಂದು ಒಂದೆಡೆ 'ಲೇಖಕವಿಮರ್ಶಕ'ರೆಂಬ ಒಂದು ಜಾತಿಯ ಬರಹಗಾರರು 'ಗಾಜಿನ ಮನೆಯಲ್ಲಿರುವವನು ಮತ್ತೊಬ್ಬನ ಮನೆಯತ್ತ ಕಲ್ಲೆಸೆಯಬಾರದು' ಎಂಬ ನೀತಿಯಂತೆ ಹೊಗಳುವ ಭಟ್ಟರಾಗಿ 'ಅಹೋ ರೂಪಮಹೋ ಧ್ವನಿ:' ಎಂಬ ಬಗೆಯ "ವಿಮರ್ಶೆ"ಯನ್ನು ಮಾಡುತ್ತಾರೆ. ಪರಸ್ಪರ ಪ್ರಶಂಸೆ ಅದರ ಬೀಜಮಂತ್ರ. ಇನ್ನೊಂದೆಡೆ, ಅಸಾಧಾರಣ ವಿದಗ್ಧವಿಮರ್ಶಕರೆನಿಸಿಕೊಂಬ ಹವ್ಯಾಸವುಳ್ಳವರು ನಿಷ್ಠುರ ಸತ್ಯದ ಹೆಸರಿನಲ್ಲಿ ಪೂರ್ವಗ್ರಹಪೀಡಿತರಾಗಿ ಗಳಹುಭಟ್ಟತನದಲ್ಲಿ ನಿಂದೆಯನ್ನು ವಿಮರ್ಶೆಯೆಂದು ಹೆಸರಿಸಿ ಪ್ರಕಟಿಸುತ್ತಾರೆ. ಇವರ ಜೊತೆಗೆ ಮುನ್ನುಡಿಕಾರರದೊಂದು ಒಡ್ಡೋಲಗ ಬೇರೆ. ಅದರಲ್ಲೂ ಮೇಲಿನಂತೆ ದ್ವಿಜಾತಿಬುದ್ಧಿ ತಲೆದೋರಿದೆ. ಪ್ರೋತ್ಸಾಹದ ಹೆಸರಿನಲ್ಲಿ ಶಿಷ್ಯಕೋಟಿಯನ್ನು ಗಳಿಸುವ ಬುದ್ಧಿಯಿಂದ ಹರಸುವ ಗುರುತ್ವಸಂಪಾದಕ ಲೇಖಕರು ಒಂದೆಡೆ ಶುಕ್ಲಪಕ್ಷದ ಚಂದ್ರನಂತೆ ವರ್ಧಿಸಿದರೆ, ಮಾತ್ಸರ್ಯಭಾವದಿಂದ ಯೋಗ್ಯವಾದುದನ್ನು ಯೋಗ್ಯವೆಂಬುದರಲ್ಲೂ ನ್ಯಾಯಬುದ್ಧಿಯನ್ನು ತೋರದೆ, ಮಿತಾಕ್ಷರ ಶೈಲಿಯಿಂದಲೋ ಮುಸುಕಿನೊಳಗಿನ ಗುದ್ದಿನತಂತ್ರದಿಂದಲೋ ನಾಲ್ಕಕ್ಷರ ಗೀಚಿಕೊಡುವ ಮುನ್ನುಡಿಕಾರ ಮಹಾಂತರೂ ಕಂಡು ಬರುತ್ತಾರೆ. ಒಳ್ಳೆಯ ಮಾತಾಡುವ ಶಿಷ್ಟತೆಯ ಜಾಲದಲ್ಲಿ, ದಾಕ್ಷಿಣ್ಯದ ಅರಿಮುರಿಯಲ್ಲಿ ಅಯುಕ್ತ ಕೃತಿಗಳ ಪ್ರಶಂಸೆಯೂ ನಗ್ನ ಸತ್ಯಾವಿಷ್ಕಾರದ ಧೀರೋದ್ದೇಶದ ಮುಸುಕಿನಲ್ಲಿ ಯುಕ್ತಕೃತಿಗಳ ನಿಂದೆಯೂ ಇಂದಿನ ವಿಮರ್ಶಕರ ಮನ್ಸರ ವಂಚನಾವೈದಗ್ಧ್ಯವನ್ನು ತೊರೆಗೆಡಹುತ್ತದೆ. ಒಟ್ಟಿನಲ್ಲಿ ಈ ಕಲಾವಿಮರ್ಶೆಯ ಇಂದಿನ ಸ್ವರೂಪವನ್ನು ಅವಲೋಕಿಸಿದರೆ—

"ಸಾಟೋಪಕೂಟಕಪಟಾನೃತ-
ಜನ್ಮಭೂಮೇ:
ಶಾಠ್ಯಾತ್ಮಕಸ್ಯ ರಸಕೇಲಿಕ್ಷಾಲಯಸ್ಯ ।
ದೂಷ್ಯಾಪಣಸ್ಯ ಗುರುಬಾಧಿ
ನಿಯಂತ್ರಿತಸ್ಯ
ದೌರ್ಭಾಗ್ಯ ಪಣ್ಯಸುಖಿಷ್ಯಮಸಿದ್ಧ
ರಸ್ಯ" ॥

ಎಂದು ಹರಸಬೇಕಾಗುತ್ತದೆ!

—ರಸ ಗಂಗಾಧರ

ಪರಭಾಷೆಯ ಪದಗಳ ಸ್ವೀಕಾರ

[(ಬಿಜಾಪುರ) ಎಪ್ಪತ್ತೊಂದನೆ ರಾಷ್ಟ್ರಭಾಷಾ ಪ್ರಚಾರಕ ಸಮ್ಮೇಳನದಲ್ಲಿ ಶ್ರೀ ವಿನೋಬಾ ಭಾವೆಯವರು ತಾ. ೨೬—೪—೪೯ ರಲ್ಲಿ ಮಾಡಿದ ಭಾಷಣ. —ಬಿ. ಎಂ.]

ಹಿಂದಿ-ಹಿಂದುಸ್ತಾನಿಯ ಚರ್ಚೆಯಲ್ಲಿ ಬೀಳ ಬಾರದೆಂದು ಪ್ರಾಕ್ಷಿಪಾಕ್ಷರಿಗೆ ನಾನು ಹೇಳಬಯಸುತ್ತೇನೆ. ಯಾರಾದರೂ ಹಿಂದಿ ಹಿಂದುಗಳ ಭಾಷೆ, ಹಿಂದುಸ್ತಾನಿ ಮುಸಲ್ಮಾನರದು ಎಂದು ಭಾವಿಸಿದರೆ ಅದು ತಪ್ಪು. ಕಳೆದ ಅರೇಳು ಶತಮಾನಗಳಲ್ಲಿ ಹಿಂದಿಯಲ್ಲಿ ಬಳಕೆಗೆ ಬಂದಿರುವ ಅನೇಕ ಅರಬ್ಬಿ ಮತ್ತು ಪಾರಸಿ ಪದಗಳನ್ನು ನಮ್ಮ ಅನುಕೂಲಕ್ಕಾಗಿ ಉಳಿಸಿಕೊಳ್ಳಬೇಕು ಎಂದು ಹಿಂದುಸ್ತಾನಿ ವಾದಿಗಳು ಹೇಳುವುದೊಂದೇ ಭಿನ್ನಾಭಿಪ್ರಾಯದ ಅಂಶ.

ಭಾಷಾಚರ್ಚೆಯಲ್ಲಿ ನಾವು ಹಿಂದು—ಮುಸಲ್ಮಾನ ಸಮಸ್ಯೆಯನ್ನು ಬೆರಸಬಾರದು. ಈಗ ದೇಶ ವಿಭಕ್ತವಾಗಿರುವುದರಿಂದ ಹಿಂದುಸ್ತಾನಿಯ ಅವಶ್ಯಕತೆಯಿಲ್ಲ ಎನ್ನುವುದು ತಪ್ಪು. ದೇಶ ಎರಡು ಹೋಳಾದ ಮಾತ್ರಕ್ಕೆ ನಮ್ಮ ಹೃದಯ ಇಬ್ಭಾಗವಾಗಬೇಕೆಂದಿಲ್ಲ. ಬ್ರಿಟಿಶರು ಬರುವುದಕ್ಕೆ ಮುಂಚೆಯೂ ಭಾರತದಲ್ಲಿ ಅನೇಕ ರಾಜ್ಯಗಳಿದ್ದವು. ಪಾಂಡ್ಯರು ಈ ಭಾಗವನ್ನಾಳುತ್ತಿದ್ದಾಗ ಒಮ್ಮೆ ಸ್ವತಂತ್ರರಾದ ಕೃಷ್ಣದೇವರಾಯರು ಅಂಧ್ರ ಮತ್ತು ಕನ್ನಡ ಪ್ರಾಂತಗಳನ್ನು ಆಳುತ್ತಿದ್ದರು. ಅದೇ ಮೇರೆಗೆ ಇತರ ಪ್ರಾಂತಗಳಲ್ಲೂ ಬೇರೆ ಬೇರೆ ರಾಜ್ಯಭಾರಗಳಿದ್ದುವು. ಆದರೂ ಭಾರತವು ಎಂದಿನಿಂದಲೂ ಒಂದಾಗಿಯೇ ಉಳಿದಿದೆ. ಇತಿಹಾಸಕಾರರು ಇದನ್ನೆಂದೂ ಮರೆಯಲಿಲ್ಲ. ಇರಾಣ ಮತ್ತು ಚೀನಗಳಂತೆ ಪಾಕಿಸ್ತಾನವೀಗ ನಮ್ಮ ದೇಶದ ಭಾಗವಲ್ಲ, ಅದರ ಸಂಸ್ಕೃತಿ ನಮ್ಮದಕ್ಕಿಂತ ಬೇರೆಯಾದುದು ಎಂದು ಹೇಳುವುದು ನಮ್ಮ ದೇಹವನ್ನೇ ಇಬ್ಭಾಗಿಸುವುದಕ್ಕೆ ಸಮವಾದುದು.

ನಾವು ಕೇವಲ ಅರಬ್ಬಿ, ಪಾರಸಿಗಳಿಂದಲ್ಲದೆ, ದ್ರಾವಿಡ ಭಾಷೆಗಳಿಂದಲೂ ಪದಗಳನ್ನು ಸ್ವೀಕರಿಸಬೇಕು. ಇಂಗ್ಲೀಷು ಭಾಷೆ ಅನ್ಯ ಭಾಷೆಗಳ ಪದಗಳನ್ನು ಬಹಿಷ್ಕರಿಸುತ್ತಿಲ್ಲ. ಅದು ಅನೇಕ ಭಾಷೆಗಳಿಂದ ಹಲವು ಪದಗಳನ್ನು ನಿರರ್ಗಳವಾಗಿ ತೆಗೆದುಕೊಂಡು ಅವಕ್ಕೆ ಅಂಗ್ಲ ರೂಪಗಳನ್ನು ಕೊಟ್ಟಿದೆ. ಜೀರ್ಣಿಸಿಕೊಂಬ ಮತ್ತು ಹೀರಿಕೊಂಬ ಶಕ್ತಿಯುಳ್ಳ ಭಾಷೆಯೊಂದೇ ಬೆಳೆಯಬಲ್ಲದು. ಸಂಸ್ಕೃತ ಕೂಡ ಅನೇಕ ಪರಭಾಷಾಪದಗಳನ್ನು ತೆಗೆದುಕೊಂಡಿದೆ. ಪತಂಜಲಿ ಹೇಳುತ್ತಾನೆ: ಸಂಸ್ಕೃತ್ಯ ಸಂಸ್ಕೃತ್ಯ ಪದಾನಿ ಉಚ್ಯಂತೇ, ತಸ್ಮಾತ್ ಸಂಸ್ಕೃತಂ; ಸಂಸ್ಕಾರ ಪಡೆದದ್ದು, ಮೆರುಗುಕೊಟ್ಟದ್ದು ಎಂಬುದೇ 'ಸಂಸ್ಕೃತ'ದ ಅಕ್ಷರಾರ್ಥ ಅಥವಾ ವ್ಯುತ್ಪತ್ತಿ. (ಪದಗಳನ್ನು ಸರಿಯಾಗಿ ಶುದ್ಧಗೊಳಿಸಿ ಅನಂತರ ಬಳಸುವುದರಿಂದ ಅದಕ್ಕೆ "ಸಂಸ್ಕೃತ" ಎಂದು ಹೆಸರು ಬಂದಿತು.) ನಾವು ಬಳಸುವ ಪ್ರತಿಯೊಂದು ಪದವೂ ಶುಚಿಮಾಡಲ್ಪಟ್ಟದ್ದು ಯುಕ್ತರೀತಿಯಿಂದ ಪುನಾರಚಿತವಾದದ್ದು, ಶುದ್ಧಗೊಳಿಸಲ್ಪಟ್ಟದ್ದು ಮತ್ತು ತೀರ್ಥಜಲದಿಂದ ಪವಿತ್ರಗೊಳಿಸಲ್ಪಟ್ಟದ್ದು ಎಂಬಂತಿದೆ. ಈ ರೂಢಿಯನ್ನು ನಾವು ಬಿಡಬಾರದು.

ಮುಕ್ತ (ಮುತ್ತು) ಎಂಬ ಪದವನ್ನು ಉದಾಹರಣೆಗಾಗಿ ತೆಗೆದುಕೊಳ್ಳಿರಿ. ಮುತ್ತುಗಳು ದಕ್ಷಿಣ ಭಾರತದ ಸಮುದ್ರಗಳಲ್ಲಿ ಸಿಕ್ಕುತ್ತಿದ್ದವು. ಅದು ತಮಿಳಿನ ಮೂಲಕ್ಕೆ ಸೇರಿದ ಪದವಿರಬಹುದು. ಅದನ್ನು ಸಂಸ್ಕರಿಸಿದ ರೂಪದಲ್ಲಿ ಸ್ವೀಕರಿಸಲಾಯಿತು. ಅದೇ ಮೇರೆಗೆ ಸುವರ್ಣ (ಚಿನ್ನ) ಎಂಬ ಪದ. ಇದು ತಮಿಳಿನ ಪೋನ ಎಂಬ ಪದದಿಂದ ಹುಟ್ಟಿದ್ದು. ಅನಂತರ ಹೋನ, ಸೋನ ಎಂಬ ರೂಪಗಳನ್ನು ತಾಳಿ ಸಂಸ್ಕೃತವಾಗಿ ಸುವರ್ಣವೆನಿಸಿತು. ಇದರಂತೆಯೇ ರೂಪಿತವಾದ ಇತರ ಸುವರ್ಣಪರ್ಯಾಯಗಳೂ ಇವೆ. ಮೌಕ್ತಿಕವೆಂಬುದು ಇನ್ನೊಂದು ಉದಾಹರಣೆ. ಮಕ್ಷಿಕಾ ಎಂಬುದರಿಂದ ಬಂದದ್ದು ಮಾಕ್ಷಿಕ. ಮಕ್ಷಿಕಾ ಎಂಬುದಕ್ಕೆ ನೊಣ ಎಂಬರ್ಥ ಪ್ರಸಿದ್ಧವಿದೆ. ಆದರೆ ನೊಣದಿಂದ ನಮಗೆ ಚಿನ್ನ ಸಿಕ್ಕುವುದಿಲ್ಲ. ಆದುದರಿಂದ ಇದು ವೈಯಾಕರಣರ ಮುಂದೆ ಒಂದು ಸಮಸ್ಯೆಯಾಗಿ ಕುಳಿತಿತು. ಆದರೆ ಮೆಕ್ಸಿಕೋದಲ್ಲಿ ಚಿನ್ನ ಸಿಕ್ಕುವುದೆಂದು ಭೂಗೋಲಶಾಸ್ತ್ರ ನಮಗೆ ತಿಳಿಸುತ್ತದೆ. ಅದರಿಂದ ಇಲ್ಲಿ ಮಕ್ಷಿಕಾ ಎಂಬುದು ಮೆಕ್ಸಿಕೋವನ್ನು ಸೂಚಿಸುತ್ತದೆ ಎಂದು ತಿಳಿಯಬೇಕು. ಹೀಗೆಯೇ ಪಾರುಜವೆಂಬುದು ಪೇರುವಿನಿಂದ ಹುಟ್ಟಿದ್ದು. ಅಮೇರಿಕದಲ್ಲಿ ಪೆರುವನ್ನು ಪಾರುವೆಂದು ಉಚ್ಚರಿಸುತ್ತಾರೆ; ಪಾರುಜವೆಂದರೆ ಪಾರುವಿನಲ್ಲಿ ಹುಟ್ಟಿದ್ದೆಂದರ್ಥ.

ಇದೇ ರೀತಿಯಲ್ಲಿ ಬಹಳ ಪದಗಳನ್ನು ಸಂಸ್ಕೃತ ರೂಪಕ್ಕೆ ರೂಪಾಂತರಿಸಿಕೊಳ್ಳಲಾಗಿದೆ. ಅದುದರಿಂದ ಹಿಂದುಸ್ತಾನಿಯಲ್ಲೂ ಹಾಗೇ ಇರುವುದು. ಅದು ಪರಭಾಷಾಪದಗಳನ್ನು ದ್ವೇಷಿಸುವುದಿಲ್ಲ; ಯುಕ್ತರೂಪದಲ್ಲಿ ಅಂಥವನ್ನು ಅರಗಿಸಿ ಹೀರಿಕೊಳ್ಳಬೇಕು. ಅದುದರಿಂದ ನೀವು ಈ ಭಾಷಾತ್ಮಕ ಚರ್ಚೆಯಲ್ಲಿ ಪ್ರವೇಶಿಸಬಾರದು. ದಿನ ದಿನವೂ ಹಿಂದುಸ್ತಾನಿ ಬೆಳೆಯುವುದು. ಅದರ ಹೆಸರಿನ ಮೇಲಿನ ಚರ್ಚೆಯೂ ಕುಕಲ್ಪಿತವೇ.

ಒಂದು ಪದವು ಕೇವಲ ಧ್ವನಿಯಲ್ಲ. ಅದು ಅರ್ಥವುಳ್ಳ ಒಂದು ಧ್ವನಿ ಅಥವಾ ಶಬ್ದ. ನೀವು ಹಿಂದುಸ್ತಾನಿ ಪ್ರಚಾರಕರೆಂದು ಹೇಳಿಕೊಳ್ಳುವಾಗ ಆ ಪ್ರಚಾರಕ್ಕೆ ಒಂದು ವಿಚಿತ್ರವಾದ ಉದ್ದೇಶವುಂಟು. ಪಾಕಿಸ್ತಾನದೊಡಗೂಡಿ ಇಡೀ ಭಾರತದಲ್ಲಿ ನಾವು ಐಕ್ಯವನ್ನು ಈ ಭಾಷೆಯ ಮೂಲಕ ಕಲಿಸುತ್ತೇವೆಂದು ಅದರ ಅರ್ಥ. ಎಲ್ಲಿಹೋದರೂ ನಾವು ಸರ್ವಸಾಧಾರಣವಾದ ಒಂದೇ ಸಂಸ್ಕೃತಿ ಮತ್ತು ನಾಗರಿಕತೆಯುಳ್ಳ ಜನರೆಂದು ಹೇಳುವೆವು. ಜಗತ್ತಿನ ಅತಿ ಪ್ರಾಚೀನ ಧರ್ಮಗ್ರಂಥವಾದ ಋಗ್ವೇದವು ಭಾರತವನ್ನು ಒಬ್ಬಯೋಗಿಗೆ ಹೋಲಿಸಿದೆ. ಅದು ಆಸಿಂಧೋಃ ಆ ಪರ್ವತಾದವೌ ಇವೌ ವಾತೌ ವಾತಃ (ಸಾಗರ ಮತ್ತು ಪರ್ವತಗಳ ನಡುವೆ ಈ ಮಾರುತಗಳು ಬೀಸುತ್ತವೆ) ಎನ್ನುತ್ತದೆ. ಅದು ಹಿಮಾಲಯದಿಂದ ದಕ್ಷಿಣಕ್ಕೆ ಮತ್ತು ದಕ್ಷಿಣದಿಂದ ಉತ್ತರಕ್ಕೆ ಬೀಸುವ ಎರಡು ಋತುಮಾರುತಗಳನ್ನು ಸೂಚಿಸುತ್ತದೆ. ಈ ಮಾರುತಗಳನ್ನು ಯೋಗಿಯ ಪ್ರಾಣಾಯಾಮಕ್ಕೆ ಹೋಲಿಸಿದೆ. ಅಷ್ಟು ದೀರ್ಘಕಾಲದಿಂದ ಭಾರತವೊಂದೇ ಒಂದಾದ ದೇಶವೆಂದು ತಿಳಿಯಲ್ಪಡುತ್ತಿತ್ತು; ಯುರೋಪಿನ ಜನರು ಈಗಲೂ ಒಂದು ಮಂಡಲವನ್ನು ರೂಪಿಸಿಕೊಂಡಿಲ್ಲ. ನಾವು ಅದನ್ನು ಆಧ್ಯಾತ್ಮಿಕವಾಗಿ ಎಂದೋ ಸಾಧಿಸಿಕೊಂಡಿದ್ದೆವು. ಅದುದರಿಂದ ಪ್ರಚಾರಕರು ಎಲ್ಲಿ ಹೋದರೂ ಅಲ್ಲಿ ಪ್ರೇಮ ಮತ್ತು ಐಕ್ಯಗಳನ್ನು ಪಸರಿಸುವುದು ಅವರ ಕರ್ತವ್ಯ. ಅವರು ಕೇವಲ ಭಾಷೆಯನ್ನು ಮಾತ್ರ ಕಲಿಸಿದರೆ ನನಗೆ ತೃಪ್ತಿಕರವಾಗದು. ಅವರು ಚರಕವನ್ನು ತಿರುಗಿಸಬೇಕು, ಅದು ರಚನಾತ್ಮಕ ಕಾರ್ಯಕ್ರಮದ ಗುರುತು, ಅಗ ಮಾತ್ರ ನಮ್ಮ ಪ್ರಚಾರಕರು ಜೀವನದಲ್ಲಿ ಒಂದು ಸಂಪೂರ್ಣಧ್ಯೇಯವುಳ್ಳವರೆನಿಸಿಕೊಂಡು ಆ ಹೆಸರಿಗೆ ತಕ್ಕವರಾದಾರು.

(ಹಿಂದುಸ್ತಾನಿಯ ಮೂಲದಿಂದ ಭಾಷಾಂತರಿಸಿದ್ದು)

ಆಹಾರ ಕೊರತೆ ಮತ್ತು ತಾಳೇಮರ

[ಕಳೆದ ಸಂಚಿಕೆಯಿಂದ ಮುಗಿದುದು)

ತಾಳೇಮರದ ಇನ್ನಿತರ ಉಪಯೋಗ

ಬೆಲ್ಲ ಮತ್ತು ಸಕ್ಕರೆಯನ್ನು ಪೂರಯಿಸುವವಲ್ಲದೆ ತಾಳೇಮರ ಈ ರೀತಿ ಉಪಯೋಗಕ್ಕೆ ಬರುವದು.

ಹಣ್ಣಿನರಸ ಮತ್ತು ಹಣ್ಣು

ತಾಳೇ ಮರದ ಹಣ್ಣಿನ ತಾಜಾರಸ ಬಹಳ ಪೌಷ್ಟಿಕ ಆರೋಗ್ಯಕರ ಮತ್ತು ಆಹಾರ ಸತ್ವಗಳನ್ನೊಳಗೊಂಡದ್ದಾಗಿದೆಯಲ್ಲದೆ ಔಷಧೀಯ ಸತ್ವಗಳಿಂದಲೂ ಕೂಡಿದ್ದಾಗಿದೆ. ತಾಳೇಕಾಯಿಗಳನ್ನೂ ಉಪಯೋಗಿಸಬಹುದು. ಹಣ್ಣನ್ನೂ ಉಪಯೋಗಿಸಬಹುದು. ಹಣ್ಣು ಬಹಳ ಅಗ್ಗವಿದ್ದು ಎಲ್ಲೆಡೆ ದೊರೆಯುತ್ತಿದೆ.

ದನಕರುಗಳಿಗೆ ಆಹಾರ

ತಾಳೇಮರಗಳ ಎಳೆ ಗರಿ ದನಕರುಗಳಿಗೆ ಒಳ್ಳೆ ಪೌಷ್ಟಿಕವಾದ ಆಹಾರವಾಗಿದೆ. ಹಿಂಡುವ ದನಗಳಿಗೆ ಇದನ್ನು ಹಾಕಿದರೆ ಅವು ಹೆಚ್ಚು ಹಾಲು ಕೊಡುವವು. ವಿಶೇಷತಃ ಬರಬಿದ್ದರೆ ದನಗಳು ಇವುಗಳನ್ನು ತಿಂದೇ ಬಾಳುತ್ತವೆ. ಏಕೆಂದರೆ ಅಗ ಬೇರೆ ಯಾವ ಹಸಿ ಹುಲ್ಲೂ ದೊರೆಯದು.

ಮೀನಗಾರಿಕೆ

ತಾಳೆ ಎಲೆ ಮತ್ತು ಎಸಳುಗಳಿಂದ ಮೀನ ಹಿಡಿಯಲು ಬೇಕಾಗುವ ಗಾಳ ಮಾಡುವದುಂಟು. ಇವು ಬಹಳ ಗಟ್ಟಿ ಮತ್ತು ತಾಳಿಕೆಯದಾಗುವವು. ಮೀನಗಳನ್ನು ಎರಡನೇ ಕಡೆಗೆ ಕಳಿಸಲು ಬೇಕಾಗುವ ಬುಟ್ಟಿ ಮುಂತಾದವುಗಳನ್ನು ಮಾಡಲೂ ತಾಳೇ ಮರಗಳ ಗರಿ ಬಹಳ ಉಪಯುಕ್ತ. ನದಿಗಳಲ್ಲಿ ಮೀನ ಹಿಡಿಯಲು ಬೇಕಾಗುವ ಸಣ್ಣ ಸಣ್ಣ ದೋಣಿಗಳನ್ನು ಮಾಡಲು ತಾಳೇ ಕಟ್ಟಿಗೆ ಉಪಯುಕ್ತವಿದೆ. ಮೀನ ಹಿಡಿಯಲು ಮತ್ತು ಆಹಾರ ಪದಾರ್ಥಗಳನ್ನು ಸಮುದ್ರಗಳಲ್ಲಿ ಸಾಗಿಸಲು ಬೇಕಾಗುವ ಗಟ್ಟಿಯಾದ ಹಗ್ಗಗಳನ್ನು ಮಾಡಲೂ ತಾಳೇಮರದ ದೇಟು ಉಪಯುಕ್ತ.

ಒಕ್ಕಲತನದ ಉಪಕರಣಗಳು

ತಾಳೇಮರಗಳ ಕಟ್ಟಿಗೆ ಮತ್ತು ಎಲೆಗಳಿಂದಲೆ ದನಗಳ ಹಕ್ಕೆಗಳನ್ನು ಕಟ್ಟುವುದುಂಟು, ಹಗ್ಗ, ಬುಟ್ಟಿ ಮತ್ತು ಒಕ್ಕಲತನಕ್ಕೆ ಬೇಕಾಗುವ ಉಪಯುಕ್ತವಾದ ಇತರ ಉಪಕರಣಗಳನ್ನು ತಾಳೇ ಕಟ್ಟಿಗೆ ಮತ್ತು ದೇಟುಗಳಿಂದ ಮಾಡಬಹುದಾಗಿದೆ.

ಬೆಳೆಗಳ ಪರಾಗಾರೋಪ

ಜೇನುಸಾಕುವದರಿಂದ ಪರಾಗಾರೋಪಕ್ಕೆ ಬಹಳ ಸಹಾಯವಾಗುವದೆಂದು ಹೇಳಲಾಗುತ್ತದೆ. ತಾಳೇಮರಗಳಲ್ಲಿ ಜೇನುಗಳು ವಿಪುಲವಾಗಿ ಕೂಡುವವು. ವಿಶೇಷತಃ ಅವುಗಳಿಗೆ ಕಚ್ಚು ಹಾಕಿದಾಗ ಜೇನು ಕೂತು ಅದರ ರಸವನ್ನು ಸವಿಯುವದುಂಟು.

ತಾಳೇ ಸಕ್ಕರೆಯ ವೆಚ್ಚ

ಸದ್ಯದಲ್ಲಿ ಸಿಕ್ಕುವ ಕಬ್ಬಿನ ಬೆಲ್ಲ ಮತ್ತು ಗಿರಣಿಗಳಲ್ಲಿ ತಯಾರಾದ ಸಕ್ಕರೆಯ ಬೆಲೆಗೆ ಹೋಲಿಸಿ ನೋಡಿದ್ದಾದರೆ ತಾಳೇ ಸಕ್ಕರೆಯ ಉತ್ಪಾದನೆಯು ಲಾಭಕರವಲ್ಲವೆಂದು ಹೇಳಲಾಗುತ್ತದೆ. ಆದರೆ ಇದನ್ನು ನಿರ್ಧರಿಸಬೇಕಾದರೆ ನಿಷ್ಪಕ್ಷಪಾತದಿಂದ ವಿಷಯದ ವಿಚಾರ ಮಾಡಬೇಕಾಗುವದು.

(ಅ) ಕಳೆದ ಹತ್ತುವರುಷಗಳಿಂದ ಬಳಸುವವರ ಮೇಲೆ ಪ್ರತಿವರ್ಷ ೨೩ ಕೋಟಿ ರೂಪಾಯಿಗಳಷ್ಟು ಭಾರ ಹೇರಿ ಸಕ್ಕರೆಗೆ ಸಂರಕ್ಷಣೆ ಕೊಟ್ಟಿದ್ದರೂ ಹಿಂದುಸ್ತಾನದಲ್ಲಿಯ ಸಕ್ಕರೆಯ ಧಾರಣೆಯು ಜಗತ್ತಿನಲ್ಲಿರುವ ಸಕ್ಕರೆಯ ಧಾರಣೆಯ ಇಮ್ಮಡಿಯಿರುವದು.

(ಬ) ಸಕ್ಕರೆಯ ಧಾರಣೆ ಹೀಗೆ ಹೆಚ್ಚಾಗಿದ್ದರೂ ಕಬ್ಬಿಗೆ ಕೊಡುವ ಧಾರಣೆ ಲಾಭಕರವಾಗದ್ದರಿಂದ ೨ ಕೋಟಿ ಜನ ಕಬ್ಬು ಬೆಳೆವ ರೈತರು ಅದನ್ನು ಬಿಟ್ಟುಗೊಡಬೇಕಾಗಿದೆ; ಸಕ್ಕರೆ ಗಿರಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರೂ ಆ ಧಂದೆಯನ್ನು ಬಿಡಬೇಕಾಗಿ ಬಂದುದನ್ನು ಇದರಲ್ಲಿ ಹಿಡಿದಿಲ್ಲ.

(ಕ) ಕಬ್ಬಿನ ಬೆಳೆಯನ್ನು ಹೆಚ್ಚಿಸಲು ಮತ್ತು ಸಕ್ಕರೆಯಲ್ಲಿ ಸುಧಾರಣೆ ಮಾಡಲು ನಡೆಸಿದ ಸಂಶೋಧನೆಯಲ್ಲಿ ಅನೇಕ ಬುದ್ಧಿವಂತ ಜನರು ಪ್ರಯೋಗ ಶಾಲೆಗಳು ಮತ್ತು ಹೇರಳ ಹಣ ವ್ಯಯವಾದುದುಂಟು.

(ಡ) ಸಕ್ಕರೆ ಕಾರಖಾನೆಗಳಿಗಾಗಿ ಕಟ್ಟಡ, ಯಂತ್ರ ಮೊದಲಾದವುಗಳಿಗಾಗಿ ಸುಮಾರು ೩೩ ಕೋಟಿ ರೂಪಾಯಿ ಬಂಡವಲು ಹಾಕಿದ್ದು ಅದರಲ್ಲಿ ೨೫ ಕೋಟಿ ರೂಪಾಯಿ ಯಂತ್ರಗಳಿಗಾಗಿ ಪರದೇಶಗಳಿಗೆ ಹೋದುದುಂಟು. ತದ್ವಿರುದ್ಧವಾಗಿ ತಾಳೇಮರಗಳಿಂದ ಬೆಲ್ಲ ತಯಾರಿಸುವದನ್ನು ಅದರ ಪಾಡಿಗೆ ಬಿಟ್ಟುಗೊಟ್ಟದ್ದಲ್ಲದೆ ಪ್ರತ್ಯಕ್ಷವಾಗಿ ಅದನ್ನು ನಿರುತ್ಸಾಹಗೊಳಿಸಲಾಯಿತು. ತಾಳೇ ಮರಗಳಿಗೆ ಕಚ್ಚು ಹಾಕುವದು ಅಬಕಾರಿ ಉತ್ಪನ್ನವಾದ್ದರಿಂದ ತಾಳೇಮರದ ಬೆಲ್ಲ ಮಾಡುವದನ್ನು ಪ್ರೋತ್ಸಾಹಿಸಲಿಲ್ಲ. ಅದನ್ನು ಮುರುಕಲು ಸ್ಥಿತಿಯಲ್ಲಿಯೇ ಇಡಲಾಯಿತು. ಕೆಲ ಪ್ರಾಂತಗಳಲ್ಲಿ ಮರದ ಮೇಲಿನ ಕರ ಇಲ್ಲವೆ ಅಬಕಾರೀ ಖರ್ಚನ್ನು ಬೆಲ್ಲ ಮಾಡುವವರಿಂದ ಎತ್ತಲಾಗುತ್ತದೆ. ತಾಳೆ ಬೆಲ್ಲವು ಅಬಕಾರಿ ಉತ್ಪಾದನೆಯೆಂದು ಭಾವಿಸಿ ಬೆಲ್ಲ ಮಾಡುವದು ಅಪರಾಧವೆಂದು ಪರಿಗಣಿಸಲಾಯಿತು. ಲಾಯಸೆನ್ಸು ಕೊಡುವದು ಅಬಕಾರೀ ನೋಕರರಿಗೆ ಒಂದು ಲಾಭದಾಯಕ ಹೋರೆಯೇ ಆಯಿತು. ಅವರು ಅಜ್ಞರನ್ನು ಬಗೆಬಗೆಯಿಂದ ಪೀಡಿಸುವದುಂಟು. ತಾಳೆ ಬೆಲ್ಲದ ಉತ್ಪಾದನೆಯ ಸಂಬಂಧದಲ್ಲಿ ತಾಂತ್ರಿಕ ಸಂಶೋಧನೆಯತ್ತ ಸ್ವಲ್ಪವೂ ಗಮನಿಸಿಲ್ಲ. ಇಷ್ಟೆಲ್ಲ ಅಡಚಣೆಗಳಿದ್ದರೂ ೨ ಲಕ್ಷ ಟನ್ನಿನಷ್ಟು ತಾಳೆ ಬೆಲ್ಲ ಉತ್ಪಾದಿಸಲಾಗುತ್ತದೆ. ಇಷ್ಟೊಂದು ಪ್ರಯೋಜನಗಳಿದ್ದರೂ ತಾಳೇ ಮರದಿಂದ ಬೆಲ್ಲ ತಯಾರಿಸುವದನ್ನು ನಿರುತ್ಸಾಹಗೊಳಿಸುವದು ಜಾಣತನದ್ದಾಗಬಲ್ಲುದೆ?

—ಗಜಾನನ ನಾಯಕ

ಶಿವಮೊಗ್ಗೆ ಅಡಿಕೆ ಪೇಟೆ

ತಾ. ೨೩

ದೇಶಾವರ ನಂ. ೧ (ಮಣಕ್ಕೆ)	೨೮-೩೨
,, ೨	೨೪-೨೫
ರಾಜಾ ಅಲವು	೨೪-೨೮
ಕೊರಸಾಲು	೨೨-೨೫
ಬೆಟ್ಟಿವಂತಿ	೧೭-೧೮
ಬೆಟ್ಟೆ	೧೪-೧೬
ಸೀಗೆಕಾಯಿ	೭-೮

ಪೇಟೆಯಲ್ಲಿ ಬೇಡಿಕೆ ಚನ್ನಾಗಿದೆ.

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೨೪

ಪೇಟೆಯಲ್ಲಿ ಕೊಳ್ಳುವವರು ಹುರುಪಿಲ್ಲದವರಾಗಿದ್ದು ಬೆಲೆಗಳೂ ಹೆಚ್ಚು ಕಡಿಮೆ ಯಥಾಸ್ಥಿತಿಯಲ್ಲಿವೆ. ಇಂದಿನ ಕೊನೆಯ ದರಗಳು ಹೀಗಿವೆ.

ಮುಂಬಯಿ ಡಾಯಿಂಗ್	೯೬೩-೮-೦
ಕೋಹಿನೂರು	೨೬೯-೦-೦
ಫಿನ್ಲೆ	೨೫೦-೦-೦
ಸ್ವದೇಶಿ	೨೭೯-೮-೦
ಗೋಕಾಕ	೧೬೯-೦-೦
ಸೆಂಚುರಿ	೨೬೪-೮-೦
ಸಿಂಪ್ಲೆಕ್ಸ	೧೬೩-೦-೦
ಟಾಟಾ ಸ್ಟೀಲ ಡೆಫರ್ಡ	೧೩೫೧-೪-೦
ಇಂಡಿಯನ್ ಅಯರ್ನ್	೨೭೩-೮-೦
ಅಸೋ. ಸಿಮೆಂಟ್ಸ	೨೨-೧೧-೦
ಸೆಂಟ್ರಲ ಬ್ಯಾಂಕ	೮೦-೮-೦
ಇಂಪೀರಿಯಲ್ ಬ್ಯಾಂಕ (ಪೂರ್ಣ)	೧೭೬೨-೮-೦

ಚಿನ್ನ ಬೆಳ್ಳಿ

ಬೆಲೆಗಳು ತುಸು ಇಳಿದಿವೆ.

ತಯಾರಿ ಚಿನ್ನ	೧೧೭-೭-೦
ವಾಯದಾ ,,	೧೧೬-೧೪-೦
ತಯಾರಿ ಬೆಳ್ಳಿ	೧೮೪-೬-೦
ವಾಯದಾ ,,	೧೮೪-೬-೦

ಅರಳೆ

ಅನಧಿಕೃತ ದರಗಳು ಇಂತಿವೆ.

ಮೇ	೬೨೬-೧೨-೦
ಜುಲೈ	೬೨೪-೪-೦
ಸೆಪ್ಟೆಂಬರ	೬೨೨-೧೨-೦

ಎಣ್ಣೆಕಾಳು

ಶೇಂಗಾ	೧೮೩-೧೨-೦
ಅಗಸೆ (ತಯಾರಿ)	೩೦-೪-೦
,, ವಾಯದಾ	೩೦-೪-೦
,, ಎಣ್ಣೆ	೧೮-೦-೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

ತಾ.೨೬

ಜ. ಹೊಸ ಹತ್ತಿ (ನಗಕ್ಕೆ)		೫೦೦-೫೨೧
ಅಪ್ಲಂಡ ಹತ್ತಿ		೪೮೦-೫೦೫
ಜ. ಅರಳಿ		೩೦೦-೩೨೮
ಡಬಲ್ ರೋಲ್ ,,	,,	೩೦೫-೩೧೦
ಕುಸುಬಿ (ಬ. ಮಣಕ್ಕೆ)	೧೪-೧೩	೦ ೧೫-೦-೦
ಅಗಸಿ	(ಚೀಲಕ್ಕೆ) —	೪೪-೧೧-೧
ಔಡಲ	,,	೩೭-೩೮
ಜ. ಹೆಸರು	,,	೪೪-೦- ೪೬-೮-೦
ಕರಿ ಎಳ್ಳು	,,	೬೪-೬೫
ಬಿಳಿ ಎಳ್ಳು	,,	೭೨-೭೩
ಕಡಲೆ	,,	೫೫.೦.೦ ೫೬ ೦-೦
ಜ. ತೊಗರಿ	,,	೨೯-೩೨
ಹುರಳಿ	,,	೩೫-೩೬-೦-೦
ಕೆಂ. ಅಲಸಂದಿ	,,	೫೨-೫೫
ಬಿ. ಅಲಸಂದಿ	,,	೫೬
ಶೇಂಗಾ (ಹೇರು)		೫೦-೫೬
ಶೇಂಗಾ ಕಾಳು		೭೨—೭೫

(೧೩ನೆಯ ಪುಟದಿಂದ ಬಂದುದು)

ಯುಂಟಾಗಬಹುದಾದ ಅಪಾಯದ ಹೊಣೆಯನ್ನು ಹೊರಲು ಸಿದ್ಧವಿಲ್ಲವೆಂದು ಶಿಕ್ಷಣ ಶಾಖೆ ಹೇಳುತ್ತದೆ. ಬದಲಾವಣೆಯ ಅರಂಭಕ್ಕಾಗಿ ಒಂದು ಪಂಚವಾರ್ಷಿಕ ಯೋಜನೆಯನ್ನೂ ಒಂದು ನಿರ್ದಿಷ್ಟ ತಿಥಿಯನ್ನೂ ಖಚಿತಗೊಳಿಸಿ ಮಧ್ಯಕಾಲದಲ್ಲಿ ಅನನುಕೂಲತೆಗಳು ಬಂದರೂ ಲೆಕ್ಕಿಸದೆ ಸರಕಾರವು ಎರಡೂ ಕ್ಷೇತ್ರಗಳಲ್ಲಿ ಈ ಪ್ರಶ್ನೆಯನ್ನು ಉತ್ತರಿಸಲು ದೃಢವಾಗಿ ಕಂಕಣಬದ್ಧವಾಗಬೇಕು.

ಪ್ರಶ್ನೆಯ ವೈಶಾಲ್ಯ ಮತ್ತು ಪ್ರಾಮುಖ್ಯಗಳ ಮೇಲೆ ಲಕ್ಷ್ಯವನ್ನು ಏಕಾಗ್ರಗೊಳಿಸಿ, ಅಮೂಲ್ಯ ಉಪಾದೇಯ ಸಾಮಗ್ರಿಗಳನ್ನೂ ವಿಷಯಗಳನ್ನೂ ಸಂಗ್ರಹಿಸಿ, ಶಿಕ್ಷಣದ ಇಡೀ ರಚನೆ ಮತ್ತು ಅಡಳತೆಗಳನ್ನು ಯೋಜಿಸಿದ್ದಕ್ಕಾಗಿ ಕೇಂದ್ರ ಸೂಚನಾಸಮಿತಿಗೆ ನಾವು ಕೃತಜ್ಞರಾಗಬೇಕಾದುದೇನೋ ನಿಜ. ಆದರೆ ಎರಡು ಯೋಜನೆಗಳನ್ನೂ ಹೋಲಿಸಿ ನೋಡಿದರೆ, ಮುಖ್ಯವೂ ಮೂಲಭೂತವೂ ಅದ ತತ್ವಗಳಲ್ಲಿ ವರ್ಧಾ ಮೂಲಶಿಕ್ಷಣಯೋಜನೆ ಕೇಂದ್ರ ಸೂಚನಾಸಮಿತಿಯ ಮೂಲಶಿಕ್ಷಣ ಯೋಜನೆಯಿಂದ ಭಿನ್ನವಾಗಿದೆ.

(ಮುಂಬರಿಯುವುದು)

Reg. No. B. 3148

LICENCE No. 3
Licenced to Post without Prepayment

KARMAVEER 30-5-49

ಕರ್ನಾಟಕದಲ್ಲಿ

ಧಾರವಾಡ

ದಾವಣಗೇರೆಗೆ ಕಳ್ಳತನದಿಂದ ಒಯ್ಯಲಾಗುತ್ತಿದ್ದ ೩೦೦ ರೂ. ಜವಳಿಯನ್ನು ರೇಲ್ವೆ ಪೋಲೀಸರು ಹಿಡಿದು ಖಟ್ಲೆ ಹಾಕಿದ್ದಾರೆ.

ಮುಳಗುಂದದ ಪ್ರಮುಖ ಕಲಾಕಾರ ಶ್ರೀ ಕೃಷ್ಣಾಜಿ ಪಾಂಡುರಂಗ ಕುರಹಟ್ಟಿ ಇವರು ೨೩ ನೇ ತಾರೀಕು ವಿಷಮಜ್ವರದಿಂದ ಸ್ವರ್ಗಸ್ಥರಾದರು. ಇವರು ಜರೀ ಕೆಲಸದಲ್ಲಿ ನಿಪುಣರಾಗಿದ್ದು ಕರ್ನಾಟಕದ ಮತ್ತು ಹೊರಗಿನ ನಾಟಕ ಕಂಪನಿಗಳಿಗೆಲ್ಲ ಜರದ ಸಾಮಾನುಗಳನ್ನು ಮಾಡಿಕೊಟ್ಟಿದ್ದರು. ಇವರ ನಿಧನದಿಂದ ಕರ್ನಾಟಕ ನಾಟಕ ಕಂಪನಿಗಳಿಗೆ ಮತ್ತು ಅವರ ಕುಟುಂಬದವರಿಗೆ ತುಂಬಿ ಬರಲಾರದ ಹಾನಿಯಾಗಿದೆ. ಪರಮಾತ್ಮನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

೧೯೪೮ ಮಾರ್ಚದಲ್ಲಿ ಮುಂಗಳಗಟ್ಟಿ ಗ್ರಾಮದಲ್ಲಿ ನಡೆದ ಬಡಿದಾಟದ ಖಟ್ಲೆಯಲ್ಲಿ ಎರಡು ಬಣಗಳ ಜನರನ್ನು ಕೈದು ಮಾಡಲಾಗಿತ್ತು. ಸೆಶನ್ಸ ಕೋರ್ಟಿನಲ್ಲಿ ಖಟ್ಲೆ ನಡೆದು ಮೊದಲನೆ ಗುಂಪಿನವರಲ್ಲಿ ದೊಡ್ಡಫಕೀರಪ್ಪಾ ನಾಲೀಕಾರ ಮತ್ತು ಸಣ್ಣ ಫಕೀರಪ್ಪ ಚಿಗರಿ ಇವರಿಗೆ ತಲಾ ಏಳು ವರುಷ ಇನ್ನುಳಿದ ಇಬ್ಬರಿಗೆ ಮೂರು ವರುಷ ಮತ್ತು ಒಬ್ಬನಿಗೆ ಒಂದು ವರುಷ ಹೀಗೆ ಶಿಕ್ಷೆಯಾಗಿದೆ. ಎರಡನೆ ಗುಂಪಿನವರಲ್ಲಿ ಸಣ್ಣನಿಂಗಪ್ಪಾ ದೊಡ್ಡಪ್ಪಾ ಮತ್ತು ತಿಪ್ಪಣ್ಣಾ ಚನ್ನಪ್ಪಾ ಇವರಿಗೆ ತಲಾ ಇಪ್ಪತ್ತು ವರುಷ ಇನ್ನುಳಿದ ನಾಲ್ವರಿಗೆ ತಲಾ ಎರಡು ವರುಷ ಶಿಕ್ಷೆ ವಿಧಿಸಲಾಯಿತು.

ಬೆಳಗಾವಿ

ಗೋಕಾವಿಯಲ್ಲಿ ೨೨ ನೇ ತಾರೀಕಿನ ದಿವಸ ಸರಕಾರೀ ಟ್ರೇಜರಿಯಲ್ಲಿ ಹಲವು ನೋಟುಗಳನ್ನು ಹಿಡಿಯಲು ನಿರಾಕರಿಸಿದ್ದರಿಂದ ನಗರದಲ್ಲೆಲ್ಲ ಕೋಲಾಹಲವೆದ್ದಿದೆ. ನಿರ್ದಿಷ್ಟ ನಂಬರಿನ ನೋಟುಗಳ ಬಗ್ಗೆ ಹೆಚ್ಚು ತಪಾಸಣೆ ನಡೆಯುತ್ತಿದ್ದು ಅದಕ್ಕಾಗಿ ಆ ನಂಬರಿನ ನೋಟುಗಳನ್ನು ಹಿಡಿಯಬಾರದೆಂದು ಟ್ರೇಜರಿಯವರಿಗೆ ಗುಪ್ತ ಹುಕುಂ ಬಂದಿದೆಯೆಂದು ತಿಳಿಯುತ್ತದೆ. ಅದಕ್ಕನುಸಾರವಾಗಿ ನೋಟು ಹಿಡಿಯಲಿಲ್ಲೆಂದು ಹೇಳಲಾಗುತ್ತದೆ.

ಬೆಳಗಾವಿಯ ಪೋಲಿಸ ಮತ್ತು ಅಬಕಾರಿ ಅಧಿಕಾರಿಗಳು ಕಾಕತಿ ಕಡೆಗೆ ಭಟ್ಟಿ ಸರೆ ಹಿಡಿಯಲು ಹೊರಟಾಗ ಮುತ್ಯಾನಹಟ್ಟಿ ಹತ್ತರ ಹೊಲದಲ್ಲಿ ನೆರೆದ ೪೦-೫೦ ಜನ ಬೇಡರು ತಮ್ಮನ್ನೇ ಹಿಡಿಯಲು ಇವರು ಬಂದಿರುವರೆಂದು ಭಾವಿಸಿ ಇವರ ಮೇಲೆ ಏರಿ ಹೋಗಿ ಕೊಡಲಿಯಿಂದ ಒಬ್ಬ ಪೋಲಿಸ ಮತ್ತು ಅಬಕಾರಿ ಸಬ್ ಇನಸ್ಪೆಕ್ಟರ ಮಿಚಿಗನ ಇವರನ್ನು ಗಾಯಗೊಳಿಸಿದ್ದರಿಂದ ಪೋಲೀಸರು ಗೋಳೀಬಾರ ಮಾಡಬೇಕಾಯಿತು. ಇದರಿಂದ ಇಬ್ಬರು ಬೇಡರು ಕೂಡಲೆ ಮರಣ ಹೊಂದಿದರು. ಮೇಲಧಿಕಾರಿಗಳು ಹೆಚ್ಚಿನ ವಿಚಾರಣೆ ನಡೆಸಿದ್ದಾರೆ.

ಬೆಳಗಾವಿಯಲ್ಲಿ ಮಿಲಿಟರಿ ರಾಸ್ಸನಾಯಕರಾಗಿದ್ದ ಕುಲದೀಪಸಿಂಗ, ಇವರು ರಾಯಫಲು ಕದ್ದು ಲಾಯಸೆನ್ಸ ಇಲ್ಲದೆ ಅದನ್ನು ಮಾರಲು ಪ್ರಯತ್ನಿಸಿದರೆಂದು ಹಾಕಲ್ಪಟ್ಟ ಖಟ್ಲೆ ಮಿಲಿಟರಿ ಕೋರ್ಟಿನಲ್ಲಿ ಪ್ರಾರಂಭವಾಗಿದ್ದು ಪಂಚರ ಸಾಕ್ಷಿಗಳು ನಡೆದವು.

ಬೆಳಗಾವಿಯ ಹೇರೇಕೂರ ಬಂಧುಗಳ ಬಟ್ಟೆ ಅಂಗಡಿಯ ಕೀಲೀ ಮುರಿದು ಕಳ್ಳರು ಕಳೆದ ತಿಂಗಳು ಸುಮಾರು ೧೦ ಸಾವಿರ ರೂಪಾಯಿಯ ಬಟ್ಟೆಯನ್ನು ಕದ್ದೊಯ್ದಿದ್ದರಷ್ಟೆ. ಪೋಲಿಸ ಅಧಿಕಾರಿಗಳು ಅದನ್ನು ಪತ್ತೆಹಚ್ಚಿ ೬-೭ ಸಾವಿರ ರೂಪಾಯಿಗಳ ಮಾಲು ಹಿಡಿದಿರುವರು. ೫ ಜನರನ್ನು ಬಂಧಿಸಿದ್ದು ಅವರ ಹತ್ತರ ಒಂದು ಕೀಲೀಕೈ ಗೊಂಚಲವೇ ದೊರಕಿದೆ.

ಬೆಳಗಾವಿ ಜಿಲ್ಲೆಯಲ್ಲಿ ಅಗಸ್ಟ ತಿಂಗಳ ೧೫ಕ್ಕೆ ಗಿಡಗಳನ್ನು ಹಚ್ಚುವ ಕುರಿತು ೫ ರೂಪಾಯಿಗಳಿಗೆ ಮಾವು, ತೆಂಗು, ಅಡಿಕೆ, ಅಮಸೋಲ ಹಲಸು ಗಿಡಗಳ ಗುಂಪಿನ ಸಸಿಗಳನ್ನೆ ಕೊಡಲಾಗುವದು. ಇದರ ಲಾಭ ಪಡೆವವರು ಬೆಳಗಾವಿ ಜಿಲ್ಲಾ ಗ್ರಾಮೋದ್ಧಾರ ಮಂಡಳದ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕು.

ವಿಜಾಪುರ

ಕಳೆದ ಜನೆವರಿಯಲ್ಲಿ ಬನಹಟ್ಟಿಯಲ್ಲಿ ಕೂಡಿದ್ದ ವಿಲೀನ ದಕ್ಷಿಣ ಸಂಸ್ಥಾನಗಳ ನೇಕಾರ ಮತ್ತು ನೇಕಾರ ಸಹಕಾರಿಗಳ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಗಳ ಬಗ್ಗೆ ಅರ್ಥಸಚಿವರಾದ ಮಾನ್ಯ ವೈಕುಂಠಭಾಯಿಯವರಲ್ಲಿ ಪಂಡಿತಪ್ಪ ಚಿಕ್ಕೋಡಿಯವರ ನೇತೃತ್ವದಲ್ಲಿ ಶಿಷ್ಟಮಂಡಲವೊಂದು ಹೋಗಿತ್ತು. ಅವರ ಬೇಡಿಕೆಗಳನ್ನು ಸಹಾನುಭೂತಿಪರವಾಗಿ ವಿಚಾರಿಸಲಾಗುವದೆಂದು ಮಂತ್ರಿಗಳು ಉತ್ತರಿಸಿದರು.

ವಿಜಾಪುರ ಜಿಲ್ಹಾ ಸರ್ವೋದಯ ಯೋಜನೆಗೆ ಶ್ರೀ ತಿರುಮಲರಾವ ಕೌಜಲಗಿಯವರು ಸಂಚಾಲಕರಾಗಿ ನೇಮಿಸಲ್ಪಟ್ಟಿದ್ದು ಅವರು ಈ ಜಿಲ್ಹೆಯಲ್ಲಿ ಕೈಕೊಳ್ಳಲಿರುವ ಯೋಜನೆಗಳ ಬಗ್ಗೆ ಕಾರ್ಯಕರ್ತರ ಕೂಡ ವಿಚಾರವಿನಿಮಯ ನಡೆಸಿರುವರು.

ಬಾಗಲಕೋಟೆಯ ಸರಕಾರೀ ಗೊಡೌನದಲ್ಲಿ ಮ್ಯಾನೇಜರ ಎಂಬು ಕೆಲಸ ಮಾಡುತಿದ್ದ ಶ್ರೀ ವಿ. ಜಿ. ಜಾಗಿರದಾರ ಇವರ ಮೇಲೆ ಕೆಲವು ಆರೋಪಗಳಿಗಾಗಿ ಖಟ್ಲೆ ನಡೆದಿದ್ದಿತಷ್ಟೆ. ಆ ಖಟ್ಲೆಯಲ್ಲಿ ಅವರು ಪೂರ್ಣ ನಿರ್ದೋಷಿಗಳಾಗಿದ್ದು ಈಗ ಅವರು ಬಾಗಲಕೋಟೆ ರೇಶನಿಂಗ ಕಚೇರಿಯಲ್ಲಿ ಮ್ಯಾನೇಜರರೆಂದು ನೇಮಿಸಲ್ಪಟ್ಟಿದ್ದಾರೆ.

ವಿಜಾಪುರ ನಗರ ಸಭೆಯನ್ನು ಸರಕಾರದವರು ವಶಪಡಿಸಿಕೊಂಡ ದಿನ ಅಂದರೆ ೧೦-೧೧-೧೯೪೮ ನೇ ದಿನ ಮುನಿಸಿಪಾಲಿಟಿಯ ತಿಜೋರಿಯಲ್ಲಿ ಕೇವಲ ೨೨-೯-೮ ಇತ್ತು. ಮುನಿಸಿಪಾಲಿಟಿಯು ಕೊಡತಕ್ಕ ಹಣ ೧೩೩೩೦ ರೂ. ಇದ್ದಿತು. ಆದರೆ ಸರಕಾರದ ವಶದಲ್ಲಿ ಬಂದಾಗಿನಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಹೋಗಿ ೩೧-೩-೪೯ ಕ್ಕೆ ಉಳಿತಾಯದ ಅಂಕೆ ೨೫೩೯೩-೭-೫ ಗೆ ಮುಟ್ಟಿದೆ. ಕೊಡತಕ್ಕ ಹಣ ಹೋಗಲಾಗಿ ನಿಕ್ಕಿ ಉಳಿತಾಯ ೨೪೩೨೬೨-೧-೫ ಇದ್ದಿತು.

ಕನ್ನಡ ಸಂಸ್ಥಾನ

ಮೈಸೂರು ಸೀಮೆಯ ಕಾಡು ಕುರುಬರ ಎರಡನೆ ಮಹಾಸಭೆ ಕಳೆದ ೧೩ ಕ್ಕೆ ಹೆಗ್ಗಡೆದೇವನಕೋಟೆ ತಾಲೂಕು ಬೀರಂಬಳ್ಳಿಗೆ ಸೇರಿದ ಕಾಡಿನ ಮಧ್ಯದಲ್ಲಿ ರಚಿತವಾದ ಮಂಟಪದಲ್ಲಿ ಗ್ರಾಮೋದ್ಧಾರ ಮತ್ತು ದಲಿತ ವರ್ಗದ ಕಮೀಶನರರಾದ ಶ್ರೀ ಎಸ್. ಎಸ್. ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಆರ್ಗನಾಯಿಜರ ಎಚ್. ವಿ. ಕೋದಂಡರಾಮಯ್ಯನವರು ಸಭಿಕರನ್ನು ಸ್ವಾಗತಿಸಿದರು. ಅನೇಕ ಪ್ರತಿಷ್ಠಿತ ನಾಗರಿಕರೂ ೫೦೦ ರಷ್ಟು ಕಾಡು ಜನರೂ ಸಮ್ಮಿಲಿತರಾಗಿದ್ದರು. ಈ ಜನಾಂಗದ ಉದ್ಧಾರಕ್ಕೆ ಅವಶ್ಯವಾದ ಕೆಲ ಮಹತ್ವದ ಗೊತ್ತುವಳಿ ಸ್ವೀಕೃತವಾದವು.

ಕೊಪ್ಪಳ ನಾಡ ರೈತ ಪರಿಷತ್ತು ಕಳೆದ ವಾರ ಮುನಿರಾಬಾದದಲ್ಲಿ ಶ್ರೀ ತಲ್ಲೂರ ರಾಯನಗೌಡರ ಅಧ್ಯಕ್ಷತೆಯಲ್ಲಿ ಸೇರಿ ಮೈಸೂರು ಮತ್ತು ಹೈದರಾಬಾದ ಸಂಸ್ಥಾನಗಳನ್ನು ಕೂಡಲೆ ಹಿಂದುಸ್ತಾನ ಒಕ್ಕೂಟದಲ್ಲಿ ವಿಲೀನಗೊಳಿಸಿ ಆಯಾ ಭಾಷಾನ್ವಯ ಪ್ರಾಂತಗಳಲ್ಲಿ ಹಂಚಬೇಕು, ಕೊಪ್ಪಳ ಜಾಗೀರನ್ನು ನಿರ್ನಾಮಗೊಳಿಸಬೇಕು, ತುಂಗಭದ್ರಾ ಅಣೆಕಟ್ಟನ್ನು ಕೇಂದ್ರ ಸರಕಾರದವರು ವಹಿಸಿಕೊಳ್ಳಬೇಕೆಂದು ಮುಂತಾದ ಗೊತ್ತುವಳಿ ಸ್ವೀಕೃತವಾದವು.

ಚಾಮರಾಜನಗರ ತಾಲೂಕಿನ ವೆಂಕಟಯ್ಯನ ಛತ್ರವೆಂಬ ಹಳ್ಳಿಯಲ್ಲಿ ವಿದ್ಯಾರ್ಥಿಗಳ ಬೇಸಿಗೆ ಶಿಕ್ಷಣ ಶಿಬಿರ ಪ್ರಾರಂಭವಾಗಿದೆ. ಅನೇಕ ಮಹನೀಯರು ಶಿಬಿರದ ಕಾರ್ಯಕ್ರಮ ಮತ್ತು ಕೈಗೊಂಡಿರುವ ಕಾರ್ಯದ ಉದ್ದೇಶವನ್ನು ಹಳ್ಳಿಯ ಸ್ವಚ್ಛತೆ ಆರೋಗ್ಯ ಮುಂತಾದ ವಿಷಯವಾಗಿ ಮಾತನಾಡಿದರು. ಅಧ್ಯಕ್ಷರಾಗಿದ್ದ ಡಿ. ನಾರಾಯಣರಾಯರು ಸಮಾರೋಪ ಮಾಡಿದ ನಂತರ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಮಿರಜ ಭಾಗದಲ್ಲಿ ಈ ವರುಷ ಮಳೆಗಾಲ ಬೇಗ ಪ್ರಾರಂಭವಾಗಿದೆ. ಕಳೆದ ವಾರ ಒಳ್ಳೆ ಮಳೆಬಿದ್ದಿತು.

ಮಿರಜೆ ಸ್ಟೇಶನದಲ್ಲಿ ಇತ್ತೀಚೆ ಕಳವುಗಳಾಗ ಹತ್ತಿವೆ. ಮೊನ್ನೆ ದಿನ ಇಬ್ಬರು ಹೆಣ್ಣುಮಕ್ಕಳ ಕೈಯಲ್ಲಿದ್ದ ಬಂಗಾರದ ಬಳೆಗಳು ಕಳವಾಗಿ ಹೋಗಿವೆ.

ದಕ್ಷಿಣ ಕನ್ನಡ

ಮಂಗಳೂರು ಎಲೋಸಿಯಸ್ ಕಾಲೇಜಿನ ರೆಕ್ಟರ್ ಮತ್ತು ಪ್ರಿನ್ಸಿಪಾಲರಾದ ರೆ. ಫಾ. ಜೆ. ಎ. ಬಿ. ಕೊಯ್ಲೊ ಅವರು ಸದ್ಯದಲ್ಲೇ ಮಂಗಳೂರು ಬಿಡುವ ಕಾರಣ ಮಂಗಳೂರಿನ ಕೆಥೋಲಿಕ್ ಸಂಘದವರು ಅವರ ಸೇವೆಯನ್ನು ಶ್ಲಾಘಿಸುವ ಸಮಾರಂಭವನ್ನು ದಿನಾಂಕ ೧೫ ರಂದು ಮಲಬಾರು ಜಿಲ್ಲಾ ಜಡ್ಜರಾದ ಶ್ರೀ ಇ. ಎ. ಲೋಬೋ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಎಲೋಸಿಯಸ್ ಕಾಲೇಜಿನ ನೂತನ ಕಲಾಭವನದ ಪ್ರಾರಂಭೋತ್ಸವವನ್ನು ದಿನಾಂಕ ೧೯ ರಂದು ಮಂಗಳೂರಿನ ಲಾರ್ಡ ಬಿಷಪರಾದ ರೆ. ಫಾ. ವಿ. ಆರ್. ಫರ್ನಾಂಡಿಸರು ಜರಗಿಸಿದರು. ಈ ಕಲಾಭವನದ ನಿರ್ಮಾಣಕ್ಕೆ ೬ ಲಕ್ಷ ರೂಪಾಯಿಗಳ ವೆಚ್ಚವಾಗಿದೆ.

ದ. ಕನ್ನಡ ಜಿಲ್ಲಾ ಗಾಂಧಿ ಸ್ಮಾರಕ ನಿಧಿ ಸಮಿತಿಯ ಸಭೆಯು ದಿನಾಂಕ ೧೪ ರಂದು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿದಾಗ ಗಾಂಧೀ ಸ್ಮಾರಕ ನಿಧಿಯಿಂದ ಈ ಜಿಲ್ಲೆಗೆ ಬರುವ ಸಂಪೂರ್ಣ ಹಣವನ್ನು ಇಲ್ಲಿ ನಿರ್ಮಿಸಲ್ಪಡಲಿರುವ ಕ್ಷಯರೋಗದ ಆಸ್ಪತ್ರೆಗೆ ವಿನಿಯೋಗಿಸಬೇಕೆಂಬ ಗೊತ್ತುವಳಿಯು ಸ್ವೀಕೃತವಾಯಿತು. ಈ ಆಸ್ಪತ್ರೆಗೆ 'ಮಹಾತ್ಮಾ ಗಾಂಧಿ ಕ್ಷಯರೋಗ ನಿವಾರಣಾ ಆಸ್ಪತ್ರೆ' ಎಂದು ಹೆಸರಿಡಬೇಕೆಂದೂ, ದಿಲ್ಲಿಯ ಮತ್ತು ಹುಬ್ಬಳ್ಳಿಯ ಕೇಂದ್ರ ಸಮಿತಿಗಳು ಈ ಸೂಚನೆಯನ್ನು ಮನ್ನಿಸಬೇಕೆಂದೂ ಪ್ರಾರ್ಥಿಸಲಾಗಿದೆ.

ಪೆರಡಾಲ್ ಗ್ರಾಮದ ಕಿಳಾಗಾರ್ ಎಂಬಲ್ಲಿ ಒಂದು ಮನೆಗೆ ಸಿಡಿಲು ಬಿದ್ದು ನಾಲ್ಕು ಜನರು ಮರಣ ಹೊಂದಿರುವರಲ್ಲದೆ ಒಬ್ಬನಿಗೆ ಕಠಿನ ಗಾಯವಾಗಿದೆ. ಮನೆ ಸುಟ್ಟು ಹೋಗಿದೆ.

ಕುಷ್ಠರೋಗಿ ನಿವಾರಣೆ ಕಮಿಟಿಯ ಕಾರ್ಯದರ್ಶಿ ಶ್ರೀ ಜಗದೀಶನ್‌ರವರು ಬದಿಯಡ್ಕದ ರೋಗಿಗಳನ್ನು ನೋಡಿದರಲ್ಲದೆ, ಈ ರೋಗಬಾರದಹಾಗೆ ಕೈಕೊಳ್ಳಬೇಕಾದ ಮುಂಜಾಗ್ರತೆಯನ್ನು ವಿವರಿಸಿದರು.

ಮದ್ರಾಸು ಸರಕಾರದ ಲೋಕಲ್ ಬೋರ್ಡುಗಳ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ದಿನಾಂಕ ೧೩ ರಂದು ಮಂಗಳೂರಿಗೆಬಂದ ಕೋಟೇಶ್ವರ ಮೂಡಬಿದ್ರೆ ಮೊದಲಾದ ನಗರಗಳನ್ನು ಸಂದರ್ಶಿಸಿ ಅಲ್ಲಲ್ಲಿನ ಜನರ ಬೇಡಿಕೆಗಳನ್ನು ಕೇಳಿಕೊಂಡು ಮರಳಿ ಮದ್ರಾಸಿಗೆ ಹೋದರು.

ಕುಂಬಳೆ ಫಿರ್ಕಾ ಅಭಿವೃದ್ಧಿ ಸಮಿತಿಯ ಸಭೆಯು ದಿನಾಂಕ ೧೪ ರಂದು ಜರಗಿದಾಗ ವ್ಯವಸಾಯ ಇಲಾಖೆಯವರು ತಯಾರಿಸಿದ ಯೋಜನೆಯು ಮಂಜೂರಾಯಿತು. ಅದರಂತೆ ನೀರಾವರಿ ಮತ್ತು ಕೈಗಾರಿಕೆಯೋಜನೆಗಳೂ ಮಂಜೂರಾದವು.

ಉದಯಶಂಕರರ ಶಿಷ್ಯರಾದ ಶ್ರೀ ಪಿ. ಆರ್. ಬಿ. ರಾಯರು ಉಡುಪಿಯ ಶ್ರೀ ರಾಮಕೃಷ್ಣ ನಾಟಕ ಗೃಹದಲ್ಲಿ ಧರ್ಮಾರ್ಥ ನರ್ತನ ಪ್ರದರ್ಶನವನ್ನಿತ್ತರು. ನರ್ತನದ ಬಿಡುವಿನಲ್ಲಿ ಪ್ರಫುಲ್ಲಾ ಮತ್ತು ರತ್ನಾಬಾಯಿಯವರ ಸಂಗೀತವಿತ್ತು.

ಉತ್ತರ ಕನ್ನಡ

ಇಂದೂರಿನಲ್ಲಿರುವ ಸಿಂಧಿ ವಸಾಹತಿಗೆ ಮಂತ್ರಿವರ್ಯ ಪಾಟೀಲ ಮಲ್ಲನಗೌಡರು ಕಳೆದವಾರದ ತಮ್ಮ ಉತ್ತರ ಕನ್ನಡಜಿಲ್ಲೆಯ ಸಂಚಾರದಲ್ಲಿ ಭೆಟ್ಟಿಕೊಟ್ಟರು. ಆಗ ಅಲ್ಲಿಯ ನಿರಾಶ್ರಿತರು ಅವರಿಗೆ ಮಾನಪತ್ರಕೊಟ್ಟರು. ಅವರ ಬೇಡಿಕೆಗಳ ಬಗ್ಗೆ ಯೋಗ್ಯವ್ಯವಸ್ಥೆ ಮಾಡುವದಾಗಿ ಮಂತ್ರಿಗಳು ಆಶ್ವಾಸಿಸಿದರು. ಈಗ ಇಲ್ಲಿ ೧೭ ಸಿಂಧೀ ಕುಟುಂಬಗಳಿದ್ದು ಇನ್ನು ೭ ಕುಟುಂಬಗಳು ಬರಲಿವೆ. ಅಲ್ಲದೆ ಸ್ಥಾನಿಕ ಕೃಷಿಕರ ತೊಂಬತ್ತು ಕುಟುಂಬಗಳನ್ನು ಅಲ್ಲಿ ನೆಲಸಲಾಗಿದ್ದು ಒಟ್ಟು ೮೦೦ ಎಕರೆ ಭೂಮಿಯನ್ನು ಸಾಗು ಮಾಡಲಾಗಿದೆ.

ಉತ್ತರ ಕನ್ನಡ ಜಿಲ್ಹೆಯ ಅರಣ್ಯ ಹಳ್ಳಿಗಳಲ್ಲಿರುವ ಜನರಿಗೆ ಅರಣ್ಯ ಪಟ್ಟಿಗಳ ಗಿಡ ಕಂಟಿಗಳನ್ನು ಸವರುವ ವಿಷಯದಲ್ಲಿ ಸರಕಾರದವರು ಕೊಟ್ಟ ಸವಲತ್ತುಗಳನ್ನು ದುರುಪಯೋಗಮಾಡಿಕೊಂಡಿರುವರೆಂದು ಕಂಡುಬಂದದ್ದರಿಂದ ಸರಕಾರದವರು ಪ್ರಕಟನೆಯೊಂದನ್ನು ಹೊರಡಿಸಿ ಈ ಬಗೆಯಾಗಿ ಸವಲತ್ತಿನ ದುರುಪಯೋಗಮಾಡಿಕೊಳ್ಳಬಾರದೆಂದು ಒತ್ತಿಹೇಳಿದ್ದಾರೆ.

ದಕ್ಷಿಣ ಕನ್ನಡಜಿಲ್ಲೆಯಲ್ಲಿ ಭರಣಿ, ಕೃತ್ತಿಕಾ ನಕ್ಷತ್ರಗಳಲ್ಲಿ ಬಿಸಿಲುಕಾಯಿಬೇಕಾಗಿದ್ದರೂ ಕೃತ್ತಿಕಾ ನಕ್ಷತ್ರದಲ್ಲಿ ಮಳೆಬಿದ್ದುದರಿಂದ ತಣ್ಣಗಾಗತೊಡಗಿದೆ. ಇದರಿಂದ ಬೆಳೆ ಚೆನ್ನಾಗಿ ಬರಲಾರದೆಂದು ಬೇಸಾಯಗಾರರ ಹೇಳಿಕೆ. ಆದರೆ ಕುಡಿಯುವ ನೀರಿನ ಮತ್ತು ದನಕರುಗಳ ಹುಲ್ಲಿನ ಅಭಾವ ತಕ್ಕಮಟ್ಟಿಗೆ ನೀಗಿದಂತಾಯಿತು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕಟಿಸಿದರು.